ಕರ್ನಾಟಕ ಸರ್ಕಾರ
ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು – 560 001
ಮತ್ತು
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳನಿರ್ದೇಶನಾಲಯ,
ನೃಪತುಂಗ ರಸ್ತೆ, ಬೆಂಗಳೂರು.
*ಸಹಯೋಗ*
ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,
ಮಲ್ಲೇಶ್ವರಂ, ಬೆಂಗಳೂರು.

# ಚೇತನ

ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ
ಪ್ರಶ್ನೋತ್ತರ ಮಾಲಿಕೆ

## ಪ್ರಥಮ ಭಾಷೆ ಕನ್ನಡ

**ಆಯೋಜಕರು**

ಶ್ರೀ ಮೊಹಮ್ಮದ್ ಮೊಹಸಿನ್,
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ,ಬೆಂಗಳೂರು – 560 001.

**ಪರಿಕಲ್ಪನೆ**

ಶ್ರೀಮತಿ ಜ್ಞೋಹರಾ ಜಬೀನ್ ಎಂ.
ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,
ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.

## ಸಂಯೋಜಕರು

**ಶ್ರೀಮತಿ ಮಂಜುಳ ಆರ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,

**ಶ್ರೀ ಮರಿಗೌಡ ಬಿ.ಎನ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ನಾಗರತ್ನ ಎಚ್.**
ಉಪನ್ಯಾಸಕರು
ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ,
ಮಂಗಳೂರು.

## ಸಂಪನ್ಮೂಲ ಶಿಕ್ಷಕರು

**ಶ್ರೀ ವೆಂಕಟಾಚಲ ಜಿ.**
ಉಪಪ್ರಾಂಶುಪಾಲರು
ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಮ್ಮರಗಾಲ,
ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ.

**ಶ್ರೀ ರಾಮನಾಥ ಹೆಗಡೆ**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಬೀರಿಹುಂಡಿ,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ ಜಿ. ವಿ.ರಾಜುಶೆಟ್ಟಿ**
ಕನ್ನಡ ಭಾಷಾ ಶಿಕ್ಷಕರು
ಸ. ಪ. ಪೂ.ಕಾಲೇಜು, ಹೊಮ್ಮರಗಳ್ಳಿ,
ಹೆ. ದೇ. ಕೋಟೆ ತಾಲೂಕು, ಮೈಸೂರು ಜಿಲ್ಲೆ.

**ಶ್ರೀ ಬಾಲಕೃಷ್ಣಯ್ಯ ಬಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಬೋಗಾದಿ,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ ಸಂತೋಷ್ ಕುಮಾರ್ ಕೆ.**
ಕನ್ನಡ ಭಾಷಾ ಶಿಕ್ಷಕರು
ಜಿ. ಎಂ. ಸಿ. ಜಿ. ಪ್ರೌಢಶಾಲೆ, ಧೂಳೇಹೊಳೆ,
ಹರಿಹರ ತಾಲೂಕು, ದಾವಣಗೆರೆ ಜಿಲ್ಲೆ.

**ಶ್ರೀ. ಅಶ್ವತ್ಥನಾರಾಯಣ ಪಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ವರಕೋಡು,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ.ಶಿವಣ್ಣ ಎಚ್.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಚೆನ್ನಾಲಿಂಗನ ಹಳ್ಳಿ,
ಕೊಳ್ಳೇಗಾಲ ತಾಲೂಕು, ಚಾ.ನಗರ ಜಿಲ್ಲೆ.

**ಶ್ರೀ.ರವೀಂದ್ರನಾಥಾಚಾರ್ ಕೆ. ಪಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಹೆಚ್. ಬಸವಾಪುರ,
ದಾವಣಗೆರೆ ತಾಲೂಕು ಮತ್ತು ಜಿಲ್ಲೆ.

**ಶ್ರೀ. ರವೀಶ್ ಕುಮಾರ್ ಬಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ,
ಮೈಸೂರು ತಾಲೂಕು ಮತ್ತು ಜಿಲ್ಲೆ

# ಆಶಯ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014–15 ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಮುನ್ನುಡಿ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ.ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ.ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಜ಼ೋಹರಾ ಜಬೀನ್ ಎಂ.**

**ನಿರ್ದೇಶಕರು,**

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಅದಕ್ಕಾಗಿ ನೀಡಿರುವ **'ಚೇತನ', 'ಸಮೃದ್ಧಿ', ಹಾಗೂ 'ಸಮರ್ಥ'** ಎಂಬ ಹೊತ್ತಿಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.

- ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು
  ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.

- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಚೇತನ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುಂತೆ ಮಾಡುವುದು.

- ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು **'ಚೇತನ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಸಮೃದ್ಧಿ'** ಹಾಗೂ ಕೊನೆಯಲ್ಲಿ **'ಸಮರ್ಥ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು **'ಚೇತನ'** ಹಾಗೂ **'ಸಮೃದ್ಧಿ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಸಮರ್ಥ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.

- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.

- ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.

- **'ಚೇತನ', 'ಸಮೃದ್ಧಿ', ಹಾಗೂ 'ಸಮರ್ಥ'** ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.

# ಒಂದೊಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು

**ಗದ್ಯಪಾಠ – 1**

**ಶಬರಿ – ಪು. ತಿ. ನರಸಿಂಹಾಚಾರ್**

**1. ಶ್ರೀ ರಾಮನ ತಂದೆಯ ಹೆಸರೇನು?**
ಶ್ರೀ ರಾಮನ ತಂದೆಯ ಹೆಸರು**ದಶರಥ.**
**2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**
ಶ್ರೀರಾಮನಿಗೆ ಸಮರ್ಪಿಸಲು ಶಬರಿ **ಪರಿಮಳದ ಹೂವು, ಮಧುಪರ್ಕ ಮತ್ತು ರುಚಿಕರ ಹಣ್ಣುಹಂಪಲುಗಳನ್ನು**ಸಂಗ್ರಹಿಸಿದ್ದಳು.
**3. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**
ಮತಂಗಾಶ್ರಮದಲ್ಲಿ ವಾಸವಿದ್ದ **ತಪಸ್ವಿನಿ ಶಬರಿ.**
**4. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?**
ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು**ದಂಡಕಾರಣ್ಯದಲ್ಲಿ ವಾಸಮಾಡುತ್ತಿದ್ದ ಕಬಂಧ ಎಂಬ ಹೆಸರಿನ ರಾಕ್ಷಸ.**
**5. ಶಬರಿ ಗೀತನಾಟಕದ ಕರ್ತೃ ಯಾರು?**
ಶಬರಿ ಗೀತನಾಟಕದ ಕರ್ತೃ **ಪು.ತಿ. ನರಸಿಂಹಾಚಾರ್ಯ**.

**ಗದ್ಯಪಾಠ – 2.**

## ಅಮೆರಿಕದಲ್ಲಿ ಗೊರೂರು.– ಗೊರೂರು ರಾಮಸ್ವಾಮಿ ಅಯ್ಯಂಗಾರ್

**1. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದುಕೊಂಡಿರುವ ಅಂಶಗಳಾವುವು?**
ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ "ಯಾಂತ್ರೀಕರಣ, ವಿದ್ಯುದೀಕರಣ, ಔದ್ಯೋಗೀಕರಣ, ಅಣುಶಕ್ತಿ ಇವುಗಳಿಂದ ಆಗುವ ಉಪಯೋಗ, ಬಳಸುವ ವಿಧಾನ ಹಾಗೂ ಹಾನಿಗಳ ಬಗ್ಗೆ ತಕ್ಕಮಟ್ಟಿನ ಜ್ಞಾನವನ್ನು ಪಡೆದುಕೊಂಡಿರುತ್ತಾರೆ.
**2. ಅಮೆರಿಕ, ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆ?**
ಅಮೆರಿಕ, ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆಂದರೆ ಇಲ್ಲಿ ಮನೆಗಳನ್ನು ಸಾಧಾರಣವಾಗಿ ಮರದಿಂದಲೇ ಕಟ್ಟಿರುತ್ತಾರೆ.
**3. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸ್ಕೂಲಿನತ್ತ ಹೆಜ್ಜೆ ಹಾಕಲು ಕಾರಣವೇನು?**
ಅಡುಗೆ ಮನೆಯ ವಿದ್ಯುತ್ ಒಲೆಯಿಂದ ಬರುತ್ತಿದ್ದ ಕೊಂಬಿನ ಸದ್ದನ್ನು ನಿಲ್ಲಿಸಲು ತಿಳಿಯದೆ, ಯಾರನ್ನಾದರೂ ಕರೆಯುವ ಉದ್ದೇಶದಿಂದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸ್ಕೂಲಿನತ್ತ ಹೆಜ್ಜೆ ಹಾಕಿದರು.
**4. ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳಾವುವು?**
ಗೊರೂರು ರಾಮಸ್ವಾಮಿ ಅಯ್ಯಂಗಾರರು ಹೇಳಿದ ಕನ್ನಡನಾಡಿನ ಅನೇಕ ಜಾನಪದ ಹಾಸ್ಯ ಕಥೆಗಳು, ಗಾದೆಗಳು ಮತ್ತು ಪಂಚತಂತ್ರದ ಕಥೆಗಳು ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳಾಗಿವೆ.
**5. ಶಾಲೆಗೆ ಹೋದ ಕೆಲಸದ ಬಗ್ಗೆ ಗೊರೂರರಿಗೆ ಯಾವಾಗ ಜ್ಞಾನೋದಯವಾಯಿತು?**
'ಅವರ ಹೆಂಡತಿ ಶಾಲೆಯ ಬಾಗಿಲಿನಿಂದ ಒಳಗೆ ಬಂದು, ಅವರ ಮುಂದೆ ನಿಂತಾಗ' ಗೊರೂರು ರಾಮಸ್ವಾಮಿ ಅಯ್ಯಂಗಾರರಿಗೆ ಶಾಲೆಗೆ ಹೋದ ಕೆಲಸದ ಬಗ್ಗೆ ಜ್ಞಾನೋದಯವಾಯಿತು.

**ಗದ್ಯಪಾಠ – 3.**

**ಜೀವನದೃಷ್ಟಿ. – ವಿನಾಯಕ ಕೃಷ್ಣ ಗೋಕಾಕ್.**

**1. ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆ?**
ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಒಂದು ಹೆಚ್ಚಿನ ಸ್ಥಾನವಿದೆ.
**2. ಅಂತರ್‌ಜೀವಿಗೆ ಯಾವುದು ದೊಡ್ಡ ಸಮಸ್ಯೆಯಾಗುತ್ತದೆ?**
ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ.
**3. ಅಂತರ್‌ಜೀವಿಯ ಶಕ್ತಿ ಹೇಗೆ ವೆಚ್ಚವಾಗುತ್ತಿರುತ್ತದೆ?**
ಅಂತರ್‌ಜೀವಿಗೆ ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತಿರುತ್ತದೆ.
**4. ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠ ಏನು?**
ಸಾಧಕನಿಗೆ, ಅಂತರ್‌ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂಬುದು ಧರ್ಮಗಳು ಹಾಕಿಕೊಟ್ಟ ರತ್ನಪಾಠ.
**5. ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು?**
ಗೃಹಸ್ಥಾಶ್ರಮವು ಧನ್ಯವೆಂದು ಕಾಲಿದಾಸನು ಕಲ್ಪಿಸಿದ ಒಬ್ಬ ಋಷಿ ಅರಣ್ಯಕನು ಹೇಳುತ್ತಾನೆ.

## ಗದ್ಯಪಾಠ – 4

**ಧರ್ಮಸಮದೃಷ್ಟಿ. – ಶಾಸನ (ಸಂಗ್ರಹ)**

**1. ಬುಕ್ಕರಾಯನ ಹಿರಿಮೆ ಏನು?**
ಅರಿರಾಯ ವಿಭಾಡ ಹಾಗೂ ಭಾಷೆಗೆ ತಪ್ಪುವ ರಾಯರ ಗಂಡ ಎಂಬುದು ಬುಕ್ಕರಾಯನ ಹಿರಿಮೆ.
**2. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?**
ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಜೈನರಿಗೂ ಭಕ್ತರಿಗೂ (ಶ್ರೀವೈಷ್ಣವರಿಗೂ) ಸಂವಾದ ನಡೆಯಿತು.
**3. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು?**
ನಾಡ ಭವ್ಯ ಜನರು ಬುಕ್ಕರಾಯನ ಬಳಿ ಭಕ್ತರು (ಶ್ರೀವೈಷ್ಣವರು) ಮಾಡುವ ಅನ್ಯಾಯಗಳನ್ನು ಬಿನ್ನಹ ಮಾಡಿದರು.
**4. ಶ್ರೀವೈಷ್ಣವರೊಡನೆ ಮಹಾರಾಜನು ಏನು ಹೇಳಿದನು?**
ಶ್ರೀವೈಷ್ಣವರೊಡನೆ ಮಹಾರಾಜನು ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲವೆಂದು ಹೇಳಿದನು.
**5. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು?**
ರಾಯರು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಅವನು ರಾಜದ್ರೋಹಿ ಎನಿಸುವನು.

## ಗದ್ಯಪಾಠ – 5

**ಭಾಗ್ಯಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ– ಡಿ. ಎಸ್. ಜಯಪ್ಪ ಗೌಡ**

**1. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು?**
ವಿಶ್ವೇಶ್ವರಯ್ಯನವರ ಪೂರ್ವಜರು ಮೂಲತಃ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಗಿಡ್ಡಲೂರು ತಾಲೂಕಿನ 'ಮೋಕ್ಷಗುಂಡಂ' ಅಗ್ರಹಾರಕ್ಕೆ ಸೇರಿದವರು
**2. ವೆಂಕಟಲಕ್ಷ್ಮಮ್ಮ ಅವರು ತಮ್ಮ ಕುಟುಂಬವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದ್ದು ಏಕೆ?**
ವೆಂಕಟಲಕ್ಷ್ಮಮ್ಮ ಅವರಿಗೆ ಮಕ್ಕಳು ಹೆಚ್ಚು ಓದಿ ದೊಡ್ಡ ವ್ಯಕ್ತಿಗಳಾಗಬೇಕೆಂಬ ಹಂಬಲವಿತ್ತು ಆದ್ದರಿಂದ ಅವರು ತಮ್ಮ ಕುಟುಂಬವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದರು.
**3. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?**
ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.
**4. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**
ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದರು.
**5. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?**
ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ 'ಎಂಜನಿಯರ್ಸ್ ದಿನಾಚರಣೆ'ಯನ್ನು ಮಾಡಲಾಗುತ್ತಿದೆ.

## ಗದ್ಯಪಾಠ – 6.

**ಎದೆಗೆ ಬಿದ್ದ ಅಕ್ಷರ** **– ದೇವನೂರು ಮಹಾದೇವ**

**1. ಮನೆ ಮಂಚಮ್ಮ ಯಾರು?**
**ಕವಿ ಸಿದ್ಧಲಿಂಗಯ್ಯ ಅವರು ದೇವನೂರು ಮಹಾದೇವ ಅವರಿಗೆ ಹೇಳಿದ ಕತೆಯಲ್ಲಿನ ಗ್ರಾಮದೇವತೆ** ಮನೆ ಮಂಚಮ್ಮ.
**2. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು?**
ಮನೆಮಂಚಮ್ಮನ ಕತೆ ಹೇಳಿದ **ಕವಿ ಸಿದ್ಧಲಿಂಗಯ್ಯ.**
**3. 'ಮಲೆಗಳಲ್ಲಿ ಮದುಮಗಳು' ಯಾರು ಬರೆದ ಕಾದಂಬರಿ?**
'ಮಲೆಗಳಲ್ಲಿ ಮದುಮಗಳು' **ಕುವೆಂಪು (ಕೆ. ವಿ. ಪುಟ್ಟಪ್ಪ)** ಬರೆದ ಕಾದಂಬರಿ.
**4. ಅಶೋಕ ಪೈ ಅವರ ವೃತ್ತಿ ಯಾವುದು?**
ಅಶೋಕ ಪೈ ಅವರು **ಮನೋವೈದ್ಯರು.**
**5. ದೇವನೂರರ 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ.**
**ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ** ಅದು ದೇವನೂರು ಮಹಾದೇವ ಅವರ ದೇವರು ಆಗುತ್ತದೆ.

## ಗದ್ಯಪಾಠ – 7

**ವೃಕ್ಷಸಾಕ್ಷಿ** **– ದುರ್ಗಸಿಂಹ**

**1. 'ವೃಕ್ಷಸಾಕ್ಷಿ' ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?**
'ವೃಕ್ಷಸಾಕ್ಷಿ' ಕತೆಯನ್ನು **ದುರ್ಗಸಿಂಹನ 'ಕರ್ನಾಟಕ ಪಂಚತಂತ್ರ'** ಕೃತಿಯಿಂದ ಆರಿಸಲಾಗಿದೆ.
**2. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?**
ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ **ಹೊನ್ನಿನ ಕಳ್ಳತನದ** ಆರೋಪವನ್ನು ಹೊರಿಸಿದನು.
**3. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?**
**ದುಷ್ಟಬುದ್ಧಿಯು "ಆ ಸ್ಥಳದಲ್ಲಿ ಹೊನ್ನನ್ನು ಇಡುವಾಗ ಈತ ಮತ್ತು ನಾನು ಅಲ್ಲದೆ ಬೇರೆ ಯಾರು ಮನುಷ್ಯರು ಇರಲಿಲ್ಲ. ಆ ಸ್ಥಳದಲ್ಲಿ ಇದ್ದ ಆಲದ ಮರವೇ ಸಾಕ್ಷಿ" ಎಂದು ಹೇಳಿದ್ದನ್ನು ಕೇಳಿ** ಧರ್ಮಾಧಿಕರಣರು ವಿಸ್ಮಯ ಹೊಂದಿದರು.
**4. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?**
ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು**ದೇವರು, ಗುರುಗಳು, ವೇದಾಧ್ಯಯನ ನಿರತರನ್ನು ಪೂಜೆ ಮಾಡುತ್ತ**ಕಳೆದನು.
**5. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?**
ದುಷ್ಟಬುದ್ಧಿ ಮತ್ತು ಧರ್ಮಬುದ್ಧಿಯ ನಡುವಿನ ವ್ಯಾಜ್ಯವನ್ನು ಪರಿಹರಿಸಲು, ವೃಕ್ಷಸಾಕ್ಷಿಯನ್ನು ಕೇಳಲು**ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಬಂದರು.**

## ಗದ್ಯಪಾಠ – 8.

**ವ್ಯಾಘ್ರಗೀತೆ** **– ಎ. ಎನ್. ಮೂರ್ತಿರಾವ್**

**1. ಭಗವದ್ಗೀತೆಯನ್ನು ರಚಿಸಿದವರು ಯಾರು?**
ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು.
**2. ಹುಲಿಗೆ ಪರಮಾನಂದವಾಗಲು ಕಾರಣವೇನು?**
ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.
**3. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?**
ಹುಲಿಗೆ ತಮ್ಮ ಮುಖದರ್ಶನವಾಗದಂತೆ ತಪ್ಪಿಸಿಕೊಳ್ಳುವ ದೊಂಬರಾಟದಲ್ಲಿ ಶಾನುಭೋಗರಿಗೆ ತಲೆ ಸುತ್ತಲಾರಂಭಿಸಿತು.
**4. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?**
ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ
**5. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**
ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

## ಪದ್ಯಪಾಠ – 1.

**ಎಮ್ಮನುಡಿಗೇಳ್ — ಆದಿಕವಿ ಪಂಪ**

**1. ಭೀಮನಿಗೆ ಪವನನಂದನನೆಂದು ಹೆಸರು ಬರಲು ಕಾರಣವೇನು?**
**ಪವನನ (ವಾಯುವಿನ) ವರಬಲದಿಂದ ಕುಂತಿಯಲ್ಲಿ ಜನಿಸಿದ್ದರಿಂದ** ಭೀಮನಿಗೆ ಪವನನಂದನ ಎಂದು ಹೆಸರು ಬಂದಿತು.
**2. ಘಟ ಸಂಭೂತ ಯಾರು?**
ಘಟ ಸಂಭೂತ **ಎಂದರೆ ದ್ರೋಣಾಚಾರ್ಯ.**
**3. ಗಾಂಡೀವಿ ಎಂದು ಅರ್ಜುನನ್ನು ಏಕೆ ಕರೆಯುತ್ತಾರೆ?**
**ಗಾಂಡೀವ ಎಂಬ ಬಿಲ್ಲನ್ನು ಹೊಂದಿರುವುದರಿಂದ** ಅರ್ಜುನನ್ನು ಗಾಂಡೀವಿ ಎಂದು ಕರೆಯುತ್ತಾರೆ.
**4. ಪಂಪ ಭಾರತದ ಇನ್ನೊಂದು ಹೆಸರೇನು?**
ಪಂಪ ಭಾರತದ ಇನ್ನೊಂದು ಹೆಸರು **'ವಿಕ್ರಮಾರ್ಜುನ ವಿಜಯ'.**

**ಪದ್ಯಪಾಠ – 2**
**ಹಕ್ಕಿ ಹಾರುತಿದೆ ನೋಡಿದಿರಾ — ದ. ರಾ. ಬೇಂದ್ರೆ**

**1. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?**
ಹಕ್ಕಿಯು **ಎವೆ ತೆರೆದಿಕ್ಕುವ ಹೊತ್ತಿನೊಳಗೆ ಅಂದರೆ ಕಣ್ಣು ರೆಪ್ಪೆ ಮಿಟಕಿಸುವಷ್ಟು ಸಮಯದಲ್ಲಿ (ನಿಮಿಷದಲ್ಲಿ) ಗಾವುದ ಗಾವುದ ಗಾವುದ ಮುಂದೆ** ಹಾರುತ್ತಿದೆ.
**2. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?**
ಹಕ್ಕಿಯ **ಗರಿಯಲ್ಲಿ ಕರಿ, ಬಿಳಿ ಕೆಂಪು, ಹೊನ್ನಿನ ಹೊಳೆಯುವ** ಬಣ್ಣಗಳಿವೆ.
**3. ಹಕ್ಕಿಯು ಕಣ್ಣುಗಳು ಯಾವುವು?**
**ಸೂರ್ಯ ಚಂದ್ರರು** ಹಕ್ಕಿಯ ಕಣ್ಣುಗಳು.
**4. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?**
ಹಕ್ಕಿಯು **ಸಾರ್ವಭೌಮರ** ನೆತ್ತಿಯನ್ನು ಕುಕ್ಕಿದೆ.
**5. ಹಕ್ಕಿ ಯಾರನ್ನು ಹರಸಿದೆ?**
ಹಕ್ಕಿಯು **ಹೊಸಗಾಲದ ಹಸುಮಕ್ಕಳನ್ನು** ಹರಸಿದೆ.
**6. ಹಕ್ಕಿಯು ಯಾವುದರ ಸಂಕೇತವಾಗಿದೆ?**
ಹಕ್ಕಿಯು **ಕಾಲಪಕ್ಷಿಯ** ಸಂಕೇತವಾಗಿದೆ.

**ಪದ್ಯಪಾಠ – 3.**
**ಹಲಗಲಿ ಬೇಡರು — ಜಾನಪದ (ಸಂಗ್ರಹ)**

**1. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?**
ಕುಂಪಣಿ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಿಬೇಕು ಎಂಬ ಆದೇಶ ಹೊರಡಿಸಿತು.
**2. ಹಲಗಲಿಯ ನಾಲ್ವರು ಪ್ರಮುಖರು ಯಾರು?**
ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಈ ನಾಲ್ವರುಹಲಗಲಿಯ ಪ್ರಮುಖರು.
**3 ಹಲಗಲಿಯ ಗುರುತು ಉಳಿಯದಂತಾದದು ಏಕೆ?**
ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.
**4.ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?**
ಹಲಗಲಿಯ ಬೇಡರ ಹತಾರ ಕದನ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ.
**5. ಹಲಗಲಿ ಗ್ರಾಮ ಎಲ್ಲಿದೆ?**
ಹಲಗಲಿ ಮುಧೋಳ ಸಂಸ್ಥಾನದಲ್ಲಿದ್ದು ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.

**ಪದ್ಯಪಾಠ – 4.**

**ವಚನ ಸೌರಭ** **– ಜೇಡರ ದಾಸಿಮಯ್ಯ, ಬಸವಣ್ಣ**

**1. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?**
ಶಿವನಿಗೆ **ಸತಿಪತಿಗಳು ಒಂದಾದ** ಭಕ್ತಿ ಹಿತವೆನಿಸುತ್ತದೆ.
**2. ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ ಏನೆನಿಸುತ್ತದೆ?**
ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ **ಪಟ್ಟಣ**ಎನಿಸುತ್ತದೆ.
**3. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?**
ಮಾನವನ ಸ್ವಭಾವವನ್ನು ವಚನಕಾರರು **ಅಂದಣವನ್ನು ಏರಿದ ಸೊಣಗನ (ಶುನಕ) ಸ್ವಭಾವಕ್ಕೆ** ಹೋಲಿಸಿದ್ದಾರೆ.
**4. ಕೂಡಲ ಸಂಗಮದೇವ ಯಾವಾಗ ಒಲಿಯುವುದಿಲ್ಲ?**
ಕೂಡಲ ಸಂಗಮದೇವ **ನುಡಿಗೆ ತಕ್ಕ ನಡೆ ಇಲ್ಲದಿದ್ದರೆ** ಒಲಿಯುವುದಿಲ್ಲ.

## ಪದ್ಯಪಾಠ – 5.

**ಸಂಕಲ್ಪ ಗೀತೆ** **– ಜಿ. ಎಸ್. ಶಿವರುದ್ರಪ್ಪ**

**1. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?**
ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮನ್ನಡೆಸಬೇಕು.
**2. ನದೀಜಲಗಳು ಏನಾಗಿವೆ?**
ನದೀಜಲಗಳು ಕಲುಷಿತವಾಗಿವೆ.
**3. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?**
ಕಲುಷಿತವಾಗಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.
**4. ಕಾಡುಮೇಡುಗಳ ಸ್ಥಿತಿ ಹೇಗಿದೆ?**
ಕಾಡುಮೇಡುಗಳು ಬರಡಾಗಿವೆ.
**5. ಯಾವ ಎಚ್ಚರದೊಳು ಬದುಕಬೇಕಿದೆ?**
ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ.

## ಪದ್ಯಪಾಠ – 6.

**ಕೌರವೇಂದ್ರನ ಕೊಂದೆ ನೀನು** **– ಕುಮಾರ ವ್ಯಾಸ**

**1. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?**
**ಕೃಷ್ಣನು ಕರ್ಣನ** ಸಂಗಡ ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು ರಥದ **ಪೀಠದಲ್ಲಿ ಕೂರಿಸಿದನು.**
**2. ಕುಮಾರ ವ್ಯಾಸನ ಆರಾಧ್ಯ ದೈವ ಯಾರು?**
ಕುಮಾರವ್ಯಾಸನ ಆರಾಧ್ಯ ದೈವ **ಗದುಗಿನ ವೀರನಾರಾಯಣ.**
**3. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು?**
ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು **ನಕುಲ ಮತ್ತು ಸಹದೇವ.**
**4. ಕುಮಾರವ್ಯಾಸನಿಗೆ ಇರುವ ಬಿರುದು ಯಾವುದು?**
ಕುಮಾರವ್ಯಾಸನಿಗೆ **'ರೂಪಕ ಸಾಮ್ರಾಜ್ಯ ಚಕ್ರವರ್ತಿ'** ಎಂಬ ಬಿರುದು ಇದೆ.
**5. ನಾರಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಏಕೆ ಬಂತು?**
ನಾರಣಪ್ಪನು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ಕರ್ನಾಟ ಭಾರತ ಕಥಾಮಂಜರಿ ಎಂಬ ಕೃತಿ ರಚಿಸಿದ್ದರಿಂದ ಕುಮಾರವ್ಯಾಸ ಎಂಬ ಹೆಸರು ಬಂದಿತು.

## ಪದ್ಯಪಾಠ – 7.

**ವೀರಲವ** **– ಲಕ್ಷ್ಮೀಶ**

**1. 'ಜೈಮಿನಿ ಭಾರತ' ಕಾವ್ಯವನ್ನು ಬರೆದ ಕವಿ ಯಾರು?**
ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಲಕ್ಷ್ಮೀಶ
**2. ಯಜ್ಞಾಶ್ವವನ್ನು ಕಟ್ಟಿದವರು ಯಾರು?**
ಯಜ್ಞಾಶ್ವವನ್ನು ಕಟ್ಟಿದವರು ಲವ
**3. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?**
ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿದನು.
**4. ಮುನಿಸುತರು ಹೆದರಲು ಕಾರಣವೇನು?**
ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಮುನಿಸುತರು ಹೆದರಿದರು.

**ಪದ್ಯಪಾಠ – 8.**

**ಸಂಕಟಕೆ ಗಡಿ ಇಲ್ಲ** **– ದು. ಸರಸ್ವತಿ**

**1. ಮಣ್ಣಿನ ಮಾಲೀಕ ಯಾರು?**
ಮಣ್ಣಿನ ಮಾಲೀಕ **ಮಾನವ.**
**2. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡ?**
ಮಾನವ ಗಡಿಯನ್ನು **ಮಣ್ಣಿನ (ಭೂಮಿಯ) ಮಾಲೀಕ ಆದೆನೆಂಬ ಅಮಲಿನಿಂದ ಭೂಮಿಯ ಮೇಲೆ ಗೆರೆ ಎಳೆದು**ನಿರ್ಮಿಸಿಕೊಂಡ.
**3. ಮಾನವನ ಕಾದಾಟಕ್ಕೆ ಕಾರಣವೇನು?**
ಮಾನವನ ಕಾದಾಟಕ್ಕೆ ಕಾರಣ **ಹಮ್ಮು (ಗರ್ವ)**
**4. ಗಡಿಯ ಆಚೆ–ಈಚೆ ಹರಿದದ್ದು ಏನು?**
ಗಡಿಯ ಆಚೆ– ಈಚೆ ಹರಿದದ್ದು **ನೆತ್ತರು (ರಕ್ತ).**
**5. 'ಸಂಕಟಕೆ ಗಡಿ ಇಲ್ಲ' ಕಾವ್ಯದ ಆಕರಗ್ರಂಥ ಯಾವುದು?**
'ಸಂಕಟಕೆ ಗಡಿ ಇಲ್ಲ' ಕಾವ್ಯದ ಆಕರಗ್ರಂಥ **'ಹೆಣೆದರೆ ಜೇಡನಂತೆ'.**

## ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು

**ಗದ್ಯಪಾಠ – 1**

**ಶಬರಿ – ಪು. ತಿ. ನರಸಿಂಹಾಚಾರ್**

**1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**

ರಾಮನು ಗಿರಿವನಗಳನ್ನು ಕುರಿತು "ಗಿರಿವನಗಳೇ ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ?ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಪ್ರಾರ್ಥಿಸಿದನು.

**2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ತಿಳಿಸಿ.**

ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು?ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?"ಎಂದು ಹೇಳಿ ಸಂತೈಸಿದನು.

**3. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?**

ರಾಮನ ಸ್ವಾಗತಕ್ಕಾಗಿ ಶಬರಿಯು ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಸಂಗ್ರಹಿಸಿ ಸಿದ್ಧಮಾಡಿಕೊಂಡಿದ್ದಳು.

**4. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.**

ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಕಣ್ಣಿಗೊತ್ತಿಕೊಂಡಳು. ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. "ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

**5. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದಳು?**

ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ "ನಾವು ನಿನ್ನ ಪ್ರೀತಿಯ ಸ್ವಾಗತದಿಂದ ಸಂತಸಗೊಂಡೆವು.ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು.ಕಣ್ಣಿಗೆ ಕಾಣದ ಆನಂದವನ್ನು ಅನುಭವಿಸುವ ಪುಣ್ಯ ನಮ್ಮದಾಯಿತು.ನಾವು ನಿನಗೆ ಎಂದೆಂದಿಗೂ ಋಣಿಗಳು" ಎಂದು ಹೇಳಿದರು.

**ಗದ್ಯಪಾಠ – 2.**

**ಅಮೆರಿಕದಲ್ಲಿ ಗೊರೂರು.– ಗೊರೂರು ರಾಮಸ್ವಾಮಿ ಅಯ್ಯಂಗಾರ್**

**1. ವಿದ್ಯಾರ್ಥಿಗಳು ಗೊರೂರರನ್ನು ಕಂಡು ಭಯಗೊಳ್ಳಲು ಕಾರಣವೇನು?**

ಅಗಲವಾದ ಎಂಟೂವರೆ ಮೊಳ ಉದ್ದದ, ನಾಲ್ಕು ಜರಿ ಗೆರೆಗಳುಳ್ಳ ಕೆಂಪು ಕಂಬಿಯ ಖಾದಿ ಕಚ್ಚೆ ಪಂಚೆ, ಕಾವಿ ಬಣ್ಣದ ನೀಳವಾದ ಜುಬ್ಬ, ಕೆಂಪು ಉಣ್ಣೆಯ ಶಾಲು, ಕೊರಳಿನಲ್ಲಿ ಜೋತಾಡುತ್ತಿದ್ದ ಮಫ್ಲರ್, ಹಣೆಯಲ್ಲಿ ಢಾಳಾದ ಕೆಂಪು ನಾಮ, ತಲೆಯ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು, ಬಿಳಿಗಡ್ಡ, ಮೀಸೆ, ಕಾಲಿಗೆ ದಪ್ಪನಾದ ಎಕ್ಕಡ ಇವುಗಳನ್ನೆಲ್ಲಧರಿಸಿದ್ದಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರನ್ನು ಕಂಡು ವಿದ್ಯಾರ್ಥಿಗಳು ಭಯಗೊಂಡರು.

**2. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತದ್ದು ಏಕೆ?**

ವಿದ್ಯುತ್ ಒಲೆಯಿಂದ ಬರುತ್ತಿದ್ದ ಸದ್ದನ್ನು ನಿಲ್ಲಿಸಲು ತಿಳಿಯದೆ, ಯಾರದಾದರೂ ಸಹಾಯ ಪಡೆಯುವ ಉದ್ದೇಶದಿಂದ ಗೊರೂರರು ಸ್ಕೂಲಿಗೆ ಹೋದರು. ಅವರ ವಿಚಿತ್ರ ಉಡುಪಿನಿಂದ ವಿದ್ಯಾರ್ಥಿಗಳು ಭಯಗೊಂಡರು.ಆಗ ಅಲ್ಲಿನ ಉಪಾಧ್ಯಾಯರು ಅವರ ಉಡುಪಿನ ಬಗ್ಗೆ ವಿಚಾರಿಸಿದರು.ಅವರೊಡನೆ ಗೊರೂರರು ತಮ್ಮ ಉಡುಪಿನ ಬಗ್ಗೆ ಮಾತನಾಡಲು ತೊಡಗಿದರು.ಈ ಅವಾಂತರದಲ್ಲಿ ಗೊರೂರರು ಶಾಲೆಗೆ ಬಂದ ಉದ್ದೇಶವನ್ನೇ ಮರೆತುಬಿಟ್ಟರು.

**3. ಗೊರೂರು ರಾಮಸ್ವಾಮಿ ಅಯ್ಯಂಗಾರರು ಇದ್ದ ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತು ಎಂದು ಆತಂಕ ಪಟ್ಟದ್ದು ಏಕೆ?**

ಗೊರೂರು ರಾಮಸ್ವಾಮಿ ಅಯ್ಯಂಗಾರರು ಇದ್ದ ಮನೆಯ ಅಡುಗೆಯ ಮನೆಯಎಲ್ಲ ಸ್ವಿಚ್‌ಗಳೂ ಆಫ್ ಆಗಿದ್ದರೂ ವಿದ್ಯುತ್ ಒಲೆಯಿಂದ ಕೊಂಬಿನ ಸದ್ದು ಒಂದೇ ಸಮನಾಗಿ ಬರುತ್ತಿತ್ತು. ವಿದ್ಯುತ್ ಒಲೆಗಳ ಸ್ವಿಚ್ ಜೋಡಣೆ ಹೊಸ ತರಹದಾಗಿದ್ದು ಅಸಂಖ್ಯಾತ ಅಂಕಿ, ಗೆರೆ ಮತ್ತು ಬಣ್ಣಗಳಿಂದ ಕೂಡಿತ್ತು. "ಯಾವುದನ್ನು ಮುಟ್ಟಿದರೆ ಏನೋ" ಎಂಬ ಭಯದಿಂದ "ಮನೆಯಲ್ಲಿ ಬೆಂಕಿ ಹೊತ್ತಿ ಕೊಂಡೀತು" ಎಂಬ ಆತಂಕವನ್ನು ಉಂಟುಮಾಡಿತ್ತು.

**ಗದ್ಯಪಾಠ – 3.**

## ಜೀವನದೃಷ್ಟಿ. – ವಿನಾಯಕ ಕೃಷ್ಣ ಗೋಕಾಕ್.

**1. ಅಂತರ್‌ಜೀವಿಗೆ ಸುಲಭವಾಗಿ ರಕ್ತಗತವಾಗದ ಸಂಗತಿ ಯಾವುದು?**
ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಹೊರಟ ಅವನಿಗೆ ಉಳಿದವರ ಯೋಗಕ್ಷೇಮವನ್ನು ಹೊರುವ ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು ಸುಲಭವಾಗಿ ರಕ್ತಗತವಾಗುವುದಿಲ್ಲ. ಉಳಿದವರನ್ನು ಪ್ರೀತಿಯಿಂದ ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರಪಡಬಲ್ಲ.

**2. ಕಲೋಪಾಸಕನ ಕರ್ತವ್ಯ ಏನು?**
ಕಲೋಪಾಸಕನೂ ಒಬ್ಬ ವ್ಯಕ್ತಿ; ಸಮಾಜದ–ಮನುಕುಲದ–ಒಂದು ಘಟಕ.ಪರಾಂತಃಕರಣಪ್ರವೇಶಿಯಾಗಿ ಜನತೆಯ ಮನವನ್ನೂ, ಅಂತಃಕರಣವನ್ನೂ ಅವನು ತಿದ್ದಬಹುದು.ಆದರೆ ಯಾವ ವ್ಯಕ್ತಿಗಳೊಡನೆ ಅವನ ಸಂಬಂಧ ಬರುವುದೋ ಅವರ ಅಂತಃಕರಣವನ್ನು ನೋಯಿಸದಂತೆ ತನ್ನನ್ನು ಅಲಕ್ಷಿಸಿಯಾದರೂ ಉಳಿದವರ ಹಿತಚಿಂತನೆ ಹಾಗೂ ಹಿತಸಾಧನೆಯಲ್ಲಿ ತೊಡಗುವುದು ಎಲ್ಲ ವ್ಯಕ್ತಿಗಳಂತೆ ಅವನ ಕರ್ತವ್ಯವೂ ಆಗಿದೆ.

**3. ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು?**
ಸಾಧಕನಿಗೆ ಯಾವ ತೊಂದರೆಯೂ ಆಗಬಾರದೆಂದು, ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು, ಎಲ್ಲ ಧರ್ಮಗಳು ಹೇಳಿವೆ. ಆದ್ದರಿಂದ ಸಾಧಕರ ಯೋಗಕ್ಷೇಮವನ್ನು ನೋಡಿಕೊಳ್ಳಲು ಧರ್ಮಶಾಲೆಗಳಲ್ಲಿ, ವಿಹಾರಗಳಲ್ಲಿ, ಅನ್ನಛತ್ರಗಳಲ್ಲಿ, ದೇವಸ್ಥಾನಗಳಲ್ಲಿ ಹಾಗೂ ಮಠಗಳಲ್ಲಿ ಉಚಿತ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತಿತ್ತು.ಕೆಲವರು ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಂಡಿದ್ದು ಉಂಟು.ಹೀಗೆ ಸಮಾಜವು ಸಾಧಕನ ಯೋಗಕ್ಷೇಮವನ್ನು ನಿರ್ವಹಿಸುತ್ತಿತ್ತು.

**4. ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳಾವುವು?**
ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳೆಂದರೆ ಒಂದು ತನ್ನಿಂದ ಹೆರವರಿಗೆ ಯಾವ ತೊಂದರೆಯೂ ಮಾನಸಿಕ ವ್ಯಥೆಯೂ ಆಗದಂತೆ ಎಚ್ಚರಪಡುವ ಕಣ್ಣು: ಇನ್ನೊಂದು ತನ್ನ ಅಳವಿನಲ್ಲಿ ಹೆರವರ ಐಹಿಕ, ಮಾನಸಿಕ ಇಲ್ಲವೆ ಆತ್ಮಿಕ ಹಿತಚಿಂತನೆ ಎಲ್ಲೆಲ್ಲಿ ಸಾಧ್ಯ ಎಂದು ಸದಾ ಅಭ್ಯಸಿಸುವ ಕಣ್ಣು.

## ಗದ್ಯಪಾಠ – 4

## ಧರ್ಮಸಮದೃಷ್ಟಿ. – ಶಾಸನ (ಸಂಗ್ರಹ)

**1. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?**
'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರನ್ನು ಪಾಷಂಡ (ನಾಸ್ತಿಕ) ಸಾಗರ ಮಹಾಬಡಬಾ ಮುಖಾಗ್ನಿಯಂತಿರುವವರು, ಶ್ರೀರಂಗರಾಜ ಪಾದಕಮಲಗಳಲ್ಲಿ ಮೂಲ ದಾಸರಾದವರು, ಶ್ರೀವಿಷ್ಣುಲೋಕ ಮುನಿಮಂಟಪ ಮಾರ್ಗದಾಯಿಗಳು, ಯತಿರಾಜರಾಜರಂತಿರುವವರು ಎಂದು ಕೊಂಡಾಡಲಾಗಿದೆ.

**2. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು?**
ಕೋವಿಲ್, ತಿರುಮಲೆ, ಪೆರುಮಾಳ್‌ಕೋವಿಲ್, ತಿರು ನಾರಾಯಣಪುರ ಮುಖ್ಯಕ್ಷೇತ್ರಗಳ ಸಕಲಾಚಾರ್ಯರು, ಸಕಲ ಧರ್ಮಾನುಯಾಯಿಗಳು, ಸಕಟ ಸಾತ್ವಿಕರು, ಮೋಷ್ಟಿಕರು, ತಿರುಪಣಿ, ತಿರುವಿಡಿ, ತಣ್ಣೀರವರು, ನಲವತ್ತೆಂಟು ಕುಲದವರು, ಸಾವಂತ ಸಾಮಂತರಾದ ಮಲೆನಾಡಿನವರು, ತಿರಿಕುಲ, ಜಾಂಬವಕುಲ ಒಳಗೊಂಡ ಹದಿನೆಂಟು ನಾಡಿನವರನ್ನು ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಆಹ್ವಾನಿಸಿದನು.

**3. ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?**
ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಸಮಸ್ತ ರಾಜ್ಯದ ಜೈನಮತದ ಜನಗಳ ಅನುಮತದಿಂದ "ಬೆಳುಗೊಳದ ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷೆಗಾಗಿ ಸಮಸ್ತ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಹಣ ಕೊಡುವುದು. ಹಾಗೆ ಸಂಗ್ರಹಿಸಿದ ಆ ಒಂದು ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ಸಂತವಿಟ್ಟು, ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿಸುವುದು" ಎಂದು ಶಾಸನ ಬರೆಸಿದನು.

## ಗದ್ಯಪಾಠ – 5

## ಭಾಗ್ಯಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ– ಡಿ. ಎಸ್. ಜಯಪ್ಪ ಗೌಡ

**1. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?**
ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ.ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು.ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ.

**2. ನೆಹರೂ ಅವರು ಸರ್. ಎಂ.ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**
ನೆಹರೂ ಅವರು ಸರ್.ಎಂ.ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ.ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಹೇಳಿದ್ದಾರೆ.

**3. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆ ಯಾವುದು?**
ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವ ಮೂಲಕ ಸಮಸ್ಯೆಯನ್ನು ವಿಶ್ವೇಶ್ವಯ್ಯನವರು ಬಗೆಹರಿಸಿದರು. ಅವರು ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

**4. ಎಂಜಿನಿಯರ್‌ಗಳಿಗೆ ವಿಶ್ವೇಶ್ವರಯ್ಯ ಅವರು ಏನೆಂದು ಮಾರ್ಗದರ್ಶನ ಮಾಡಿದರು?**
ವಿಶ್ವೇಶ್ವರಯ್ಯ ಅವರು ಎಂಜಿನಿಯರುಗಳಿಗೆ "ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು, ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜಿನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತವೆ ಈ ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ" ಎಂದು ಮಾರ್ಗದರ್ಶನ ಮಾಡಿದರು.

**5. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?**
ವಿಶ್ವೇಶ್ವರಯ್ಯ ಅವರು ಕ್ರಿ.ಶ. 1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು.ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು.ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು.ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

## ಗದ್ಯಪಾಠ – 6.
## ಎದೆಗೆ ಬಿದ್ದ ಅಕ್ಷರ – ದೇವನೂರು ಮಹಾದೇವ

**1. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು?**
ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿರುವಾಗ, ಇನ್ನೊಂದಿಷ್ಟು ಜನ ಇದರ ಅರಿವಿಲ್ಲದೆ ಇನ್ನೊಂದು ಪಕ್ಕದ ಕೊಠಡಿಯಲ್ಲಿ ಏನೋ ಮಾತುಕತೆ ಆಡುತ್ತ ತಮ್ಮಷ್ಟಕ್ಕೆ ತಾವು ಇರುವಾಗ, ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದೆ. ಅದೇ ಟೆಲಿವಿಷನ್‌ನಲ್ಲಿ ಯಾವುದಾರೊಂದು ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿರುವವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದೆ ತಮ್ಮಷ್ಟಕ್ಕೆ ತಾವೇ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಬೀರಿ ಸ್ವಲ್ಪಮಟ್ಟಿಗೆ ಸಂತೋಷದ ಭಾವನೆ ಉಂಟಾಗುತ್ತದೆ.ಇದು ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ.

**2. 'ವಚನಧರ್ಮ'ದ** ಬಗೆಗೆ ದೇವನೂರರ ಅಭಿಪ್ರಾಯ ಏನು?
"ಕರ್ನಾಟಕದ ಹನ್ನೆರಡನೆಯ ಶತಮಾನದಲ್ಲಿ ನಡೆದವಚನ ಆಂದೋಲನ ಜಗತ್ತಿನಲ್ಲಿ ಎಲ್ಲೂ ನಡೆದಿಲ್ಲ. ಈ ವಚನ ಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೆ ಇದು ಬೆಳಕಾಗಬಹುದು.ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ" ಎಂಬುದು 'ವಚನ ಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯವಾಗಿದೆ.

**3. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು?**

"ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸ. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತ ಕೂಡಿಸುತ್ತಾ ಹೋದವರು ಪರಮಹಂಸರು" ಎಂಬುದು ದೇವನೂರು ಮಹಾದೇವ ಅವರ ಅಭಿಪ್ರಾಯವಾಗಿದೆ.

**4. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು?**

**'ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ'** ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.

## ಗದ್ಯಪಾಠ – 7

**ವೃಕ್ಷಸಾಕ್ಷಿ – ದುರ್ಗಸಿಂಹ**

**1. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?**

ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುರ್ಬುದ್ಧಿಯಾದ ದುಷ್ಟಬುದ್ಧಿಯನ್ನು ಕರೆದು, "ಚಿನ್ನವನ್ನು ಹಂಚಿಕೊಳ್ಳೋಣ" ಎಂದಾಗ ದುಷ್ಟಬುದ್ಧಿಯು ಪಾಪಬುದ್ಧಿಯವನಾಗಿ "ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ.ಆಕಾರಣದಿಂದ ನಿನಗೂ ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನೆಲ್ಲವನ್ನು ಇಲ್ಲೆಯೇ ಇಟ್ಟು ಬಿಡೋಣ" ಎಂದು ಸಲಹೆಯಿತ್ತನು.

**2. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?**

ದುಷ್ಟಬುದ್ಧಿಯು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ "ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ, ಹಲವು ಕಾಲ ಹಸಿಯದೆ ಊಟಮಾಡಿ ಬಾಳುವಂತಹ ಸಾಧನೆಯನ್ನು ಮಾಡಬಹುದು.ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದನು.

**3. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?**

ಧರ್ಮಾಧಿಕರಣರು **ವಟವೃಕ್ಷಕ್ಕೆ** "ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯಾ, ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ, ನೀನು ತಪ್ಪದೆ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

## ಗದ್ಯಪಾಠ – 8.

**ವ್ಯಾಘ್ರಗೀತೆ – ಎ. ಎನ್. ಮೂರ್ತಿರಾವ್**

**1. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?**

ಶಾನುಭೋಗರು ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. ಅದು ಕಾಡುದಾರಿಯಾಗಿತ್ತು. ಆದಿನ ಬೆಳುದಿಂಗಳಿನ ರಾತ್ರಿ.ಆದರೂ ಶಾನುಭೋಗರ ಮನಸ್ಸಿನಲ್ಲಿ ಭಯ ಆವರಿಸಿತ್ತು. ಹೊಟ್ಟೆಯೂ ಹಸಿಯುತ್ತಿತ್ತು. "ಸ್ವಲ್ಪ ದೊಡ್ಡ ಹೆಜ್ಜೆ ಹಾಕಿ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು" ಎಂದು ಶಾನುಭೋಗರು ಯೋಚಿಸಿದರು.

**2. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?**

ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ ಏಕೆಂದರೆ ಶತ್ರುಗಳಾದರೂ ಸರಿಯೆ, ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಆದ್ದರಿಂದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

**3. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.**

ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರ ಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು. ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಸದ್ದನ್ನು ಕೇಳಿದ ಹುಲಿಯು ಕೆಲವು ನಿಮಿಷ ತಡೆದು ರೈತರ ಮಾತು ಕೇಳಿಬಂದ ಮೇಲೆ ನಿರಾಶೆಯಿಂದ ಪಲಾಯನಮಾಡಿತು.ಅನಂತರ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದೆ ಬಂದರು.ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

## ಪದ್ಯಪಾಠ – 1.

## ಎಮ್ಮನುಡಿಗೇಳ್ – ಆದಿಕವಿ ಪಂಪ

**1. ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಹೇಗೆ ಸಮರ್ಥಿಸಿದನು?**
ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ (ಭೇದವಿಲ್ಲ); ರಾಜ್ಯವನ್ನು ವಿಭಾಗ ಮಾಡಿ ಆಳೋಣ.ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವವರೇ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೇ; ಭೀಷ್ಮನಿಗೆ, ದ್ರೋಣನಿಗೆ, ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಕೋಪಿಸಿ ಯುದ್ಧ ಮಾಡುವವರು ಇನ್ನು ಯಾರು?ಸಂಧಿಯನ್ನು ಮಾಡೋಣ" ಎಂದು ಹೇಳಿ ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಸಮರ್ಥಿಸಿದನು.

**2. ದುರ್ಯೋಧನನಿಗೆ ಗಾಂಧಾರಿ ನೀಡಿದ ಉಪದೇಶವೇನು?**
ಗಾಂಧಾರಿಯು ದುರ್ಯೋಧನನನ್ನು ಕುರಿತು "ಕುರುವಂಶವೆಂಬ ತೋಟವು ಭೀಮನೆಂಬ ಮದದಿಂದ ಕುರುಡಾಗಿ ಸೊಕ್ಕೇರಿದ ಆನೆಯು ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು; ಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದೆ; ಇನ್ನು ಯುದ್ಧ ಮಾಡುವಂಥವರೂ ಇಲ್ಲ; ಮಗನೇ, ಮುದುಕರೂ ಕುರುಡರೂ ಎಂದು ಹೇಳದೆ ನಮ್ಮ ಮಾತನ್ನು ಕೇಳು, ಆಲೋಚಿಸು, ತಂದೆಯ ಮಾತಿಗೆ ಒಪ್ಪಿಗೆ ಕೊಡು" ಎಂದು ಹೇಳುತ್ತಾಳೆ.

## ಪದ್ಯಪಾಠ – 2
## ಹಕ್ಕಿ ಹಾರುತಿದೆ ನೋಡಿದಿರಾ – ದ. ರಾ. ಬೇಂದ್ರೆ

**1. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?**
ತರತಮರಹಿತ ಸಮದೃಷ್ಟಿಯಿಂದ ಕೂಡಿದ ನೀಲಮೇಘಮಂಡಲ – ಸಮಬಣ್ಣ ಎಂದು ಹೇಳಿ ಕಾಲದ ದೈತ್ಯತೆಯನ್ನು ಸಂಕೇತಿಸುವ ಕವಿ ಮುಗಿಲಿಗೆ ರೆಕ್ಕೆಗಳು ಮೂಡಿ ಇಡೀ ಆಕಾಶವೇ ಹಾರಿದಂತೆ ಆಗುತ್ತದೆ ಎನ್ನುತ್ತಾರೆ.ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ ಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿರುವ ನೋಟ ಅದ್ಭುತವಾದುದು ಎಂದು ಕವಿ ಬೇಂದ್ರೆ ವರ್ಣಿಸುತ್ತಾರೆ.

**2. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**
ಹಕ್ಕಿಯು (ಕಾಲಪಕ್ಷಿಯು) ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಹಕ್ಕಿಯು (ಕಾಲಪಕ್ಷಿಯು) ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಹೊಸಗಾಲದ ಹಸುಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.

## ಪದ್ಯಪಾಠ – 3.
## ಹಲಗಲಿ ಬೇಡರು – ಜಾನಪದ (ಸಂಗ್ರಹ)

**1. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**
ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು.ಈ ಆದೇಶವನ್ನು ವಿರೋಧಿಸಿ ಹಲಗಲಿಯ ಬೇಡರು ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರ ನಾಯಕತ್ವದಲ್ಲಿ ಸಭೆ ಸೇರಿ ತಮ್ಮ ಬದುಕಿನ ಆಧಾರವಾದ ಆಯುಧಗಳನ್ನು ಸರ್ಕಾರಕ್ಕೆ ಹಿಂದಿರುಗಿಸಲು ಒಪ್ಪಲಿಲ್ಲ. ಆದರೆ ಬ್ರಟಿಷ್ ಸಿಪಾಯಿಗಳು ಬಂದು ಬಲವಂತವಾಗಿ ಆಯುಧಗಳನ್ನು ಕಸಿದುಕೊಳ್ಳಲು ಪ್ರಾರಂಭಿಸಿದರು.ಇದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

**2. ಹಲಗಲಿಗೆ ದಂಡು ಬರಲು ಕಾರಣವೇನು?**
ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರುಗಳು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

**3. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?**

ನಿಶ್ಯಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು.ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು.ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು.ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

**4. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?**

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ.ಒಂದು ಘಟನೆಯನ್ನು ಆಧರಿಸಿ, ಕಥನಾತ್ಮಕವಾಗಿ ಕಟ್ಟಿದ ಹಾಡನ್ನು ಲಾವಣಿಗಳೆನ್ನುವರು. ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು ವೀರಗೀತೆಗಳು ಎನ್ನುವರು.

## ಪದ್ಯಪಾಠ – 4.

**ವಚನ ಸೌರಭ – ಜೇಡರ ದಾಸಿಮಯ್ಯ, ಬಸವಣ್ಣ**

**1. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯನ ಅಭಿಪ್ರಾಯವೇನು?**

ಪತಿ ಪತ್ನಿಯರು ಒಂದಾದ ಭಕ್ತಿ ಶಿವನಿಗೆ ಹಿತ.ಪತಿಪತ್ನಿಯರು ಒಂದಾಗದ ಭಕ್ತಿ ಅಮೃತದಲ್ಲಿ ವಿಷ ಬೆರತಂತೆ.ಇದನ್ನು ಶಿವನು ಮೆಚ್ಚುವುದಿಲ್ಲ. ನಿಷ್ಠನಾದ ಭಕ್ತ ದಟ್ಟವಾದ ಅರಣ್ಯದಲ್ಲಿ ಇದ್ದರೂ ಅದು ಅವನಿಗೆ ಪಟ್ಟಣ ಎನಿಸುವುದು. ನಿಷ್ಠೆಯಿಲ್ಲದೆ ಭಕ್ತ ನಗರವಾಸಿಯಾದರೂ ಅವನಿಗೆ ಅದು ದಟ್ಟಡವಿಯೇ ಎಂದು ಜೇಡರ ದಾಸಿಮಯ್ಯ ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಅಭಿಪ್ರಾಯಪಟ್ಟಿದ್ದಾನೆ.

**2. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.**

ಮರ್ಕಟವು ಮರ ಹತ್ತಿ ಹಲವು ಕೊಂಬೆಗಳಿಗೆ ನೆಗೆಯುವಂತೆ ಬೆಂದ ಮನವು ಚಂಚಲವಾಗಿರುತ್ತದೆ.ಹೀಗಾದಾಗ ಮನಸ್ಸು ದೇವರೆಡೆಗೆ ತಿರುಗಲು ಸಾಧ್ಯವಿಲ್ಲ. ಪಲ್ಲಕ್ಕಿಯನ್ನು ಏರಿದ ನಾಯಿ ಹೊಲಸು ಕಂಡಾಗ ತನ್ನ ಸ್ವಭಾವದಂತೆ ಆ ಕಡೆಗೆ ಓಡುತ್ತದೆ.ಅದೇ ರೀತಿ ಚಂಚಲ ಮನಸ್ಸು ವಿಷಯ ಸುಖದ ಕಡೆಗೆ ವಾಲುತ್ತದೆ.ದೇವರನ್ನು ನೆನೆಯಲು ಬಿಡುವುದಿಲ್ಲ ಎಂದು ಬಸವಣ್ಣನವರು ತಮ್ಮ ವಚನದಲ್ಲಿ ತಿಳಿಸಿದ್ದಾರೆ.

**3. ಮಾತಿನ ಮಹತ್ತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ?**

"ಮಾತು ಬೆಲೆ ಬಾಳುವ ಮುತ್ತಿನಹಾರದಂತೆ ಸ್ಪಷ್ಟವಾಗಿ, ಎಲ್ಲರಿಗೂ ಅರ್ಥವಾಗುವಂತೆ ಇರಬೇಕು.ಮಾತು ಮಾಣಿಕ್ಯದ ದೀಪ್ತಿಯಂತೆ ಹಿತವಾಗಿದ್ದು, ಜ್ಞಾನದ ಬೆಳಕನ್ನು ನೀಡಬೇಕು.ಮಾತು ಸ್ಫಟಿಕದ ಸಲಾಕೆಯಂತೆ ಪಾರದರ್ಶಕವಾಗಿದ್ದು ಸತ್ಯದಿಂದ ಕೂಡಿರಬೇಕು.ನಾವಾಡುವ ಮಾತು ದೇವರು ಮೆಚ್ಚುವಂತೆ ಇರಬೇಕು.ಅದೇರೀತಿ ನುಡಿಗೆ ತಕ್ಕ ನಡೆ ಇದ್ದರೆ ಮಾತ್ರ ದೇವರು ಒಲಿಯುವನು" ಎಂಬುದು ಬಸವಣ್ಣನವರ ಅಭಿಪ್ರಾಯವಾಗಿದೆ.

## ಪದ್ಯಪಾಠ – 5.

**ಸಂಕಲ್ಪ ಗೀತೆ – ಜಿ. ಎಸ್. ಶಿವರುದ್ರಪ್ಪ**

**1. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?**

ನಮ್ಮ ಬದುಕಿನ ಸುತ್ತಮುತ್ತಲು ಕವಿದಿರುವ ಕತ್ತಲೆಯನ್ನು ಕಳೆಯಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಜ್ಞಾನದೀವಿಗೆಯ ಮೂಲಕ ಎಚ್ಚರಿಕೆಯಿಂದ ಮುನ್ನಡೆಸಬೇಕಿದೆ.

**2. ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?**

ಋತುಗಳ ರಾಜನಾದ ವಸಂತನು ಬರಡಾಗಿರುವ ಕಾಡುಗಳು ಹಚ್ಚಹಸಿರಿನಿಂದ ಕಂಗೊಳಿಸುವಂತೆ ಮುಟ್ಟಬೇಕಿದೆ.ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ ಎಂಬುದು ಕವಿಯ ಆಶಯವಾಗಿದೆ.

**3. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?**

ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು.ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ.

**4. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**

ಎಲ್ಲ ಮತಧರ್ಮಗಳು ದಾರಿ ತೋರಿಸುವ ದೀಪಗಳಾಗಿರುವುದರಿಂದ ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು.ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸ್ಸನ್ನು ಬಿತ್ತುತ್ತ ಬದುಕು ನಡೆಸಬೇಕು.

## ಪದ್ಯಪಾಠ – 6.

**ಕೌರವೇಂದ್ರನ ಕೊಂದೆ ನೀನು – ಕುಮಾರ ವ್ಯಾಸ**

**1. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು?**
"ಕರ್ಣ ನಿಮಗೂ (ಪಾಂಡವರಿಗೂ) ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನೀನು ನಿಜವಾಗಿ ಭೂಮಿಯ ಒಡೆಯ.ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಭಿತ್ತಿದನು.
**2. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?**
ಕುಂತಿಯು ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನ್ನು ಪಡೆದಳು.ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.
**3. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?**
ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಿಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು" ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ.ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು"ಎಂದು ಮನದಲ್ಲಿ ನೊಂದುಕೊಂಡನು.
**4. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?**
ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು.ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ" ಎಂದನು.
**5. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?**
ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು.ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ  ಪಾಂಡವರನ್ನು ನೋಯಿಸೆನು" ಎಂದನು.

## ಪದ್ಯಪಾಠ – 7.

**ವೀರಲವ – ಲಕ್ಷ್ಮೀಶ**

**1. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**
ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು.ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.
**2. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**
ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯು ಮಗನಾದರಾಮನು ಒಬ್ಬನೇ ವೀರನು ಇದು ಅವನ ಯಜ್ಞ ಕುದುರೆ ಇದನ್ನು ತಡೆಯುವ  ಸಾಮರ್ಥ್ಯವುಳ್ಳವರು ಯಾರೇ ಆದರು ತಡೆಯಲಿ" ಎಂದ ಬರೆಯಲಾಗಿತ್ತು.
**3. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**
ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು" ಎಂದು ಹೇಳಿದರು.ಆಗ ಲವನು ನಗುತ "ಬ್ರಾಹ್ಮಣರ ಮಕ್ಕಳು ಹೆದರಿದರೆ.ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

## ಪದ್ಯಪಾಠ – 8.

**ಸಂಕಟಕೆ ಗಡಿ ಇಲ್ಲ – ದು. ಸರಸ್ವತಿ**

**1. ಗಡಿಯ ಆಚೆ–ಈಚೆ ಜೀವಿಗಳು ಏಕೆ ಶವವಾದವು?**

ಮಾನವನು ಭೂಮಿಯ ಮಾಲೀಕನಾದೆನೆಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡನು.ಈ ಗಡಿ ನನ್ನದು ಎಂದು ಗರ್ವಪಟ್ಟು ಕಾದಾಟ (ಯುದ್ಧ) ಮಾಡಿದ್ದರಿಂದ ಜೀವಿಗಳು ಶವವಾದವು.

**2. ಸಂಕಟಕೆ ಗಡಿ ಇಲ್ಲ ಏಕೆ?**

ಮಾನವನು ಗರ್ವಪಟ್ಟು ತಾನು ನಿರ್ಮಿಸಿಕೊಂಡ ಗಡಿಯ ರಕ್ಷಣೆಗಾಗಿ ಯುದ್ಧ ಮಾಡಿದನು.ಇದರಿಂದ ಗಡಿ ಆಚೆ – ಈಚೆ ಅನೇಕ ಜೀವಗಳು ಹೋರಾಡಿ ಶವವಾದವು.ಗಡಿಯ ಎರಡೂ ಕಡೆಯು ನೆತ್ತರು ಹರಿಯಿತು.ಇದರಿಂದಾಗಿ ಗಡಿಯ ಎರಡು ಕಡೆಯವರು ಅನುಭವಿಸಿದ ನೋವು, ಸಂಕಟ ಒಂದೇ ತೆರನಾದುದು.ಆದ್ದರಿಂದ ಸಂಕಟಕೆ ಗಡಿ ಇಲ್ಲ ಎಂಬುದು ಕವಿ ಅಭಿಪ್ರಾಯವಾಗಿದೆ.

## ಪಠ್ಯ ಪೋಷಕ ಅಧ್ಯಯನ – 1.

**ವಿಜ್ಞಾನ ಮತ್ತು ಸಮಾಜ – ಎಚ್. ನರಸಿಂಹಯ್ಯ**

**1. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ಎರಡು ವಾಕ್ಯಗಳಲ್ಲಿ ಉತ್ತರಿಸಿ.**

**1. ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ವಿವರಿಸಿರಿ.**

ವಿಜ್ಞಾನಿಗಳು ಪ್ರಯೋಗಶಾಲೆಗಳಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಪ್ರದರ್ಶಿಸುತ್ತಾರೆ. ಆದರೆ ನಿಜಜೀವನದಲ್ಲಿ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ.ಒಂದೇ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ.ಯೋಚನೆಯಲ್ಲಿ ಏಕಸೂತ್ರತೆ ಕಂಡುಬರುವುದಿಲ್ಲ.

**2. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?**

ವಿಜ್ಞಾನಿಯೊಬ್ಬನ ವಸ್ತು ಸ್ಥಿರತೆಯ ವಿಶ್ವ ನಿಯಮ ಸಮಾಜದ ಕೆಲವರಿಗೆ ಮಾತ್ರ ಅನ್ವಯಿಸುವುದಿಲ್ಲ ಎಂದರೆ ಅದು ಮೂರ್ಖತನ. ಶೂನ್ಯದಿಂದ ಏನನ್ನಾದರೂ ಸೃಷ್ಟಿಸಬಹುದೆಂದರೆ ಅದು ಮೂರ್ಖತನದ ಪರಮಾವಧಿ. ಅಶಿಕ್ಷಿತನೊಬ್ಬ ಹೀಗೆ ಹೇಳಿದರೆ ಕ್ಷಮೆಯುಂಟು; ಆದರೆ ವಿದ್ಯಾವಂತ ಈ ರೀತಿ ಅಭಿಪ್ರಾಯವನ್ನು ತಿಳಿಸುವುದು ಶೋಚನೀಯ. ಇದು ನಿಜವಾದರೆ ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ನಡೆದಿರುವ ಎಲ್ಲ ಶೋಧನೆಗಳು ಅರ್ಥರಹಿತವಾಗುತ್ತವೆ.

**3. ಲೇಖಕರ ಪ್ರಕಾರ 'ವಿಶ್ವಧರ್ಮ' ಯಾವಾಗ ರೂಪಿತವಾಗಬಲ್ಲದು?**

ಹೆಚ್. ನರಸಿಂಹಯ್ಯನವರ ಪ್ರಕಾರಪಠ್ಯಗಳಲ್ಲಿ ಸೇರ್ಪಡೆಯಾಗಿ ವ್ಯಾಪಕವಾಗಿ ಪ್ರಚಾರ ಒಳಪಡಬೇಕು.ನಮ್ಮ ಸಮಾಜ ಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರವನ್ನು ಸಹ ವೈಜ್ಞಾನಿಕ ಮನೋಭಾವಗಳಿಂದಲೇ ನೋಡಬೇಕು.ಆಗ ಮಾತ್ರ ವಿಶ್ವಧರ್ಮ ರೂಪಿತವಾಗ ಬಲ್ಲುದು."

**4. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಲೇಖಕರು ವಿವರಿಸಿದ್ದಾರೆ?**

ವಿಜ್ಞಾನ ಮತ್ತದರ ಬಳಕೆ ಹಾಗೂ ವೈಜ್ಞಾನಿಕ ಮನೋಧರ್ಮವನ್ನು ಪಡೆದು ಕಾರ್ಯಪ್ರವೃತ್ತರಾದಾಗ ಮಾತ್ರ ಬಡತನ ನಿರ್ಮೂಲನ ಮತ್ತು ಶೋಷಣೆಗಳ ನಾಶ ಸಾಧ್ಯವಾಗುತ್ತದೆ ಅದು ಪ್ರಗತಿವಿರೋಧಿ ಸಿದ್ಧಾಂತಗಳನ್ನೂ ಸ್ವಹಿತಾಸಕ್ತಿಯನ್ನೂ ದೂರಮಾಡಬಲ್ಲುದು. ವಿಜ್ಞಾನಿಗಳು ವಿಜ್ಞಾನದಲ್ಲಿ ಜೀವಂತ ನಂಬಿಕೆ ಹೊಂದಬೇಕು.ಅಂತೆಯೇ ತರ್ಕಬದ್ಧರಾಗಿ ಧೈರ್ಯದಿಂದ ವರ್ತಿಸಬೇಕು ಆಗ ಸಮಾಜದ ಸುಧಾರಣೆ ಆಗುತ್ತದೆ.

## ಪಠ್ಯ ಪೋಷಕ ಅಧ್ಯಯನ – 2.

**ನಾಮಫಲಕ – ನಿರ್ಮಲ**

**1. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಒಂದು – ಎರಡು ವಾಕ್ಯಗಳಲ್ಲಿ ಉತ್ತರಿಸಿ.**

**1. ನಾಮಫಲಕ ಎಲ್ಲಿ ಇದೆ?**

ಲೇಖಕರ ಮನೆಯ ಮುಂಗೋಡೆಯ ಮೇಲೆ ನಾಮಫಲಕ ಇದೆ.

**2. ಬಿಳಿಯ ಕೊಳ ಎಲ್ಲಿದೆ?**

ಶ್ರವಣಬೆಳಗೊಳದ ದೊಡ್ಡಬೆಟ್ಟ ಹಾಗೂ ಚಿಕ್ಕಬೆಟ್ಟಗಳ ನಡುವೆ ವಿಸ್ತಾರವಾದ ಬಿಳಿಯ ಕೊಳವಿದೆ.

**3. ಭರತಚಕ್ರವರ್ತಿಯು ತನ್ನ ಗೆಲುವಿನ ಶಾಸನವನ್ನು ಎಲ್ಲಿ ಬರೆಸಲು ಹೋಗುತ್ತಾನೆ?**

ಭರತಚಕ್ರವರ್ತಿಯು ತನ್ನ ಗೆಲುವಿನ ಶಾಸನವನ್ನು ವೃಷಭಾಚಲದಲ್ಲಿ ಬರೆಸಲು ಹೋಗುತ್ತಾನೆ.

**4. ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ?**

ಪಂಪನಿಗೆ ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸದಿದ್ದರೂ ತನ್ನ ಕೃತಿಗಳ ಮಹತ್ತ್ವದಿಂದ ಶತಮಾನಗಳ ಕಾಲ ಉಳಿಯುತ್ತದೆ ಎಂಬ ನಂಬಿಕೆಯಿತ್ತು.ದಿಗ್ವಿಜಯವನ್ನು ವೃಷಭಾಚಲದಲ್ಲಿ ಬರೆಸಲು ಹೋದ ಭರತನ ಗರ್ವಭಂಗವಾದ್ದನ್ನು ಪಂಪನೇ ತನ್ನ ಆದಿಪುರಾಣದಲ್ಲಿ ನಿರೂಪಿಸಿದ್ದನು.ಈ ಕಾರಣಗಳಿಂದ ಪಂಪನು ತನ್ನ ಹೆಸರನ್ನು ಕೆತ್ತಿಸಲಿಲ್ಲ.

**5. ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?**

ವೃಷಭಾಚಲದಲ್ಲಿ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮಪ್ರಶಂಸೆಗಳು ತುಂಬಿಹೋಗಿದ್ದು ಭರತಚಕ್ರವರ್ತಿಗೆ ತನ್ನ ಹೆಸರು ಬರೆಸಲು ಸೂಕ್ತವಾದ ಸ್ಥಳ ದೊರಕಲಿಲ್ಲ ಆದ್ದರಿಂದ ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಸಾಧ್ಯವಾಗಲಿಲ್ಲ.

## ಪಠ್ಯ ಪೋಷಕ ಅಧ್ಯಯನ – 3.

**ಉದಾತ್ತ ಚಿಂತನೆಗಳು – ಸಂಗ್ರಹ**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು – ಎರಡು ವಾಕ್ಯಗಳಲ್ಲಿ ಉತ್ತರಿಸಿ.**

**1. ಕ್ರಿಯಾ ಸ್ವಾತಂತ್ರ್ಯ ಎಂದರೇನು?**

ಕ್ರಿಯಾ ಸ್ವಾತಂತ್ರ್ಯವೆಂದರೆ ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು

**2. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?**

ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವ. ಇದರಿಂದ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ವ್ಯಕ್ತಿಗೆ ಪಾಲು ಇರುತ್ತದೆ ಅಲ್ಲದೆ ಜನರಿಗೆ ಜೀವನ, ಸ್ವಾತಂತ್ರ್ಯ ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಜವಾಬ್ದಾರಿಯೂ ಇರುತ್ತದೆ.

**3. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**

"ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಆವಶ್ಯಕ ಅಂಶ" ಎನ್ನುವುದು ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

**4. 'ಅನ್ ಟು ದಿ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?**

'ಅನ್ ಟು ದಿ ಲಾಸ್ಟ್' ಕೃತಿಯಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಗಾಂಧೀಜಿಯವರು ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು.

**5. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**

ಜನರಿಗೆ ಸಂಸ್ಕೃತಿಯನ್ನು ಕೊಡಬೇಕು ಆಗ ಮಾತ್ರ ದೇಶದ ಪ್ರಗತಿ ಸ್ಥಿರವಾಗಲು ಸಾಧ್ಯ ಏಕೆಂದರೆ ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು ಎಂಬುದು ವಿವೇಕಾನಂದರ ಅಭಿಪ್ರಾಯವಾಗಿತ್ತು.

**6. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?**

"ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣಕ್ಕಾಗಿ ಕಾರ್ಯೋನ್ಮುಖರಾಗಿ ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಲು ದುಡಿದಾಗ ಬಾಳಿನಲ್ಲಿ ತೃಪ್ತಿ ದೊರಕುತ್ತದೆ" ಎನ್ನುವುದು ವಿವೇಕಾನಂದರ ಅಭಿಪ್ರಾಯ.

## ಪಠ್ಯ ಪೋಷಕ ಅಧ್ಯಯನ – 4.

**ಪಾರಿವಾಳ – ಸು.ರಂ. ಎಕ್ಕುಂಡಿ**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು – ಎರಡು ವಾಕ್ಯಗಳಲ್ಲಿ ಉತ್ತರಿಸಿ.**

**1. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು?**

ದಟ್ಟ ಕಾಡಿನಲ್ಲಿ ಮರದ ಪೊಟರೆಯಲ್ಲಿ ಮುದ್ದು ಪಾರಿವಾಳಗಳ ಜೋಡಿ ಸಂಸಾರ ಹೂಡಿತ್ತು.

**2. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?**

ಜೋಡಿ ಪಾರಿವಾಳಗಳು ಒಂದನ್ನೊಂದು ಅಗಲದಂತೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು.

**3. ಪಾರಿವಾಳಗಳ ಆನಂದಕ್ಕೆ ಕಾರಣವೇನು?**

ಪಾರಿವಾಳ ಇಟ್ಟ ಮೊಟ್ಟೆಗಳು ಒಡೆದು ಹೊರಬಂದ ಮುದ್ದು ಮರಿಗಳ ಮಧುರ ಸದ್ದನ್ನು ಕೇಳಿ ಪಾರಿವಾಳಗಳು ಆನಂದಪಟ್ಟವು.

**4. 'ಮೋಹ ಮುಸುಕಿನ ಬುದ್ಧಿ ಸರ್ವನಾಶದ ಸಿದ್ಧಿ' – ಈ ಮಾತಿನ ಸ್ವಾರಸ್ಯವನ್ನು ವಿವರಿಸಿ.**

ವಸ್ತುಗಳ / ವ್ಯಕ್ತಿಗಳ ಮೇಲಿನ ಅತಿಯಾದ ಆಸೆಯೇ ಮೋಹ.ಮೋಹಕ್ಕೆ ಒಳಗಾದರೆ ಅಗುಹೋಗುಗಳ ಅರಿವು ಇರುವುದಿಲ್ಲ. ಆದ್ದರಿಂದ ಮೋಹವು ಅರಿವಿನ ನಾಶ ಮಾಡುತ್ತದೆ.ಅತಿಯಾದ ಮೋಹವು ಸರ್ವನಾಶಕ್ಕೆ ದಾರಿ ಮಾಡಿಕೊಡುತ್ತದೆ.ಇದಕ್ಕೆ ಪಾರಿವಾಳಗಳ ಮೋಹದ ಕಥೆಯೇ ಸಾಕ್ಷಿ.

**5. ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಬೇಡನ ಬಲೆಗೆ ಪಾರಿವಾಳದ ಮರಿಗಳು ಸಿಲುಕಿ ಚೀರುತ್ತಿರುತ್ತವೆ. ತಾಯಿ ಪಾರಿವಾಳ ಮೋಹದಿಂದ ಮರಿಗಳನ್ನು ರಕ್ಷಿಸಲು ಹೋಗಿ, ಬಲೆಗೆ ಸಿಲುಕುತ್ತದೆ.ಗಂಡು ಪಾರಿವಾಳವು ಮೋಹದಿಂದ ಹೆಣ್ಣು ಪಾರಿವಾಳವನ್ನು ಅನುಸರಿಸಿ, ಬಲೆಗೆ ಸಿಲುಕುತ್ತದೆ.ಹೀಗೆ ಪಾರಿವಾಳಗಳು ಮೋಹಕ್ಕೆ ಸಿಲುಕಿ, ವಿವೇಚನೆಯನ್ನು ಕಳೆದುಕೊಂಡು ದುಡುಕಿ ಬಲೆಗೆ ಬಿದ್ದು ತಮ್ಮ ಜೀವನವನ್ನು ನಾಶಮಾಡಿಕೊಳ್ಳುತ್ತವೆ. ಪಾರಿವಾಳಗಳು ಮೋಹಕ್ಕೆ ಸಿಲುಕದೆ, ಮರಿಗಳನ್ನು ಬಿಡಿಸಲು ಅರಿವಿನಿಂದ ಬೇರೆ ದಾರಿ ಹುಡುಕಿದ್ದರೆ ತಮ್ಮನ್ನು ಹಾಗೂ ಮರಿಗಳನ್ನು ರಕ್ಷಿಸಬಹುದಾಗಿತ್ತು ಎಂಬುದು ನಮ್ಮ ಅಭಿಪ್ರಾಯವಾಗಿದೆ.

## ಪಠ್ಯ ಪೋಷಕ ಅಧ್ಯಯನ – 5.

**ಜನಪದ ಒಗಟುಗಳು – ಸಂಗ್ರಹ**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು – ಎರಡು ವಾಕ್ಯಗಳಲ್ಲಿ ಉತ್ತರಿಸಿ.**

**1. ಒಂದನೆಯ ಒಗಟಿನ ಉತ್ತರ 'ಅಂಗಿ' ಎಂಬುದನ್ನು ಸಮರ್ಥಿಸಿರಿ.**

ಅಂಗಿಯ ಎರಡು ತೋಳುಗಳ ಭಾಗವೇ ಕೈ.ಅಂಗಿಗೆ ತಲೆಯಿಲ್ಲ. ಅಂಗಿಯ ಬೇರೆಬೇರೆ ಭಾಗ ಸೇರಿಸಿ ಹೊಲಿಗೆ ಹಾಕಿರುವುದೇ ನವಗಾಯ, ಮೆಲ್ಲನೆ ಬಂದು ಶರೀರಕ್ಕೆ ತೊಡಿಸುವುದರಿಂದ ಅದು ಅಂಗಿಯಾಗಿ ಎಲ್ಲರಿಗೂ ಪ್ರಚಂಡವಾಗಿದೆ.

**2. ಎರಡನೆಯ ಒಗಟಿಗೆ 'ಕುಪ್ಪಸ'ವು ಉತ್ತರ ಎಂಬುದನ್ನು ಹೇಗೆ ಹೇಳುವಿರಿ?**

ಕುಪ್ಪಸಕ್ಕೆ ಅಂಗೈಯನ್ನು ತೂರಿಸಿದರೆ ಮುಂಗೈಯನ್ನು ದಾಟಿ ಶರೀರಕ್ಕೆ ಕೂರುತ್ತದೆ.ಆದ್ದರಿಂದ ಅದು ಸಿಂಗಳೀಕನಾಗದೆ ಕುಪ್ಪಸವಾಗಿದೆ.

**3. ಐದನೆಯ ಒಗಟಿಗೆ 'ತಾವರೆ ಬೇರು' ಎಂಬುದು ಉತ್ತರ – ಹೇಗೆ?**

ಕೆಸರಿನಲ್ಲಿ ಹುಟ್ಟಿ ಕೆಸರಿನಲ್ಲಿ ಬೆಳೆದು ಗಿಡವಾಗುವುದೆಂದರೆ ಅದು ತಾವರೆಯೇ ಹೌದು.ತಾವರೆ ಹುಟ್ಟುವುದು ಕೆಸರಿನಲ್ಲೇ ಆಗಿದೆ.ಆದ್ದರಿಂದ ಆ ಒಗಟಿಗೆ ಅರ್ಥ ತಾವರೆ ಬೇರು.

**4. ಎಂಟನೆಯ ಒಗಟಿನ ಉತ್ತರ 'ಕೊಕ್ಕರೆ' ಎಂಬುದನ್ನು ಸಮರ್ಥಿಸಿ.**

ಕೊಕ್ಕರೆ ಕಲ್ಲಿನಲ್ಲಿ ಕುಕ್ಕುವುದಿಲ್ಲ. ನೀರಿನಲ್ಲಿ ಮುಳುಗದೆ ತೇಲುತ್ತದೆ.ಮಡಿಮಡಿಯಾಗಿ ಬಿಳಿಯಾಗಿ ಇರುವುದರಿಂದ ಈ ಒಗಟಿನ ಉತ್ತರ ಕೊಕ್ಕರೆ.

**5. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?**

ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ.ಉತ್ತರ ಕಂಡುಕೊಳ್ಳಲು ಮನಸ್ಸು ಆಲೋಚಿಸುತ್ತದೆ.ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

# ಕಂಠಪಾಠದ ಪದ್ಯಗಳು

**ಪದ್ಯಪಾಠ – 1.**

**ಎಮ್ಮನುಡಿಗೇಳ್** **– ಆದಿಕವಿ ಪಂಪ**

ನೀನುಳ್ದೊಡೆಲ್ಲರೊಳರೆಮ
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ ।
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ॥

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ ।
ರ್ಮರನುಳಿವಂತೆ ನೀನುಳಿದೆಯಿನ್ನಿರಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ॥

**ಪದ್ಯಪಾಠ – 2**

**ಹಕ್ಕಿ ಹಾರುತಿದೆ ನೋಡಿದಿರಾ** **– ದ. ರಾ. ಬೇಂದ್ರೆ**

ನೀಲಮೇಘ ಮಂಡಲ – ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೂ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತ್ತಿದೆ ನೋಡಿದಿರಾ?

ಯುಗ–ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತ್ತಿದೆ ನೋಡಿದಿರಾ?

**ಪದ್ಯಪಾಠ – 4.**

**ವಚನ ಸೌರಭ** **– ಜೇಡರ ದಾಸಿಮಯ್ಯ, ಬಸವಣ್ಣ**

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದಡೇನು
ಅದು ಪಟ್ಟಣವೆಂದೆನಿಸುವುದು
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ
ಅದು ನಟ್ಟಡವಿ ಕಾಣಾ ರಾಮನಾಥ

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮದೇವನೆಂತೊಲಿವನಯ್ಯ?

**ಪದ್ಯಪಾಠ – 5.**

**ಸಂಕಲ್ಪ ಗೀತೆ** **– ಜಿ. ಎಸ್. ಶಿವರುದ್ರಪ್ಪ**

ಕಲುಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

ಮತಗಳೆಲ್ಲವು ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

**ಪದ್ಯಪಾಠ – 6.**

**ಕೌರವೇಂದ್ರನ ಕೊಂದೆ ನೀನು** **– ಕುಮಾರ ವ್ಯಾಸ**

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ ॥
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ॥

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು ॥
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ॥

## ವ್ಯಾಕರಣಾಂಶಗಳು

## 1. ಕನ್ನಡ ವರ್ಣಮಾಲೆ

| ಕನ್ನಡ ವರ್ಣಮಾಲೆ – 49 | | | | | | | | |
|---|---|---|---|---|---|---|---|---|
| ಸ್ವರಗಳು – 13 | | | ವ್ಯಂಜನಗಳು – 34 | | | | ಯೋಗವಾಹಗಳು –2 | |
| ಹ್ರಸ್ವ ಸ್ವರಗಳು | ದೀರ್ಘ ಸ್ವರಗಳು | ಪ್ಲುತ ಸ್ವರಗಳು | ವರ್ಗೀಯ ವ್ಯಂಜನಗಳು 25 | | | ಅವರ್ಗೀಯ ವ್ಯಂಜನಗಳು | ಅನುಸ್ವಾರ | ವಿಸರ್ಗ |
| | | | ಅಲ್ಪ ಪ್ರಾಣಗಳು | ಮಹಾ ಪ್ರಾಣಗಳು | ಅನುನಾಸಿಕಗಳು | | | |
| 6 | 7 | | 10 | 10 | 5 | 9 | 1 | 1 |
| ಅ | ಆ | | ಕ್ ಗ್ | ಖ್ ಘ್ | ಙ್ | ಯ್ | ಂ | ಃ |
| ಇ | ಈ | | ಚ್ ಜ್ | ಛ್ ಝ್ | ಞ್ | ರ್ | | |
| ಉ | ಊ | | ಟ್ ಡ್ | ಠ್ ಢ್ | ಣ್ | ಲ್ | | |
| ಋ | ಏ | | ತ್ ದ್ | ಥ್ ಧ್ | ನ್ | ವ್ | | |
| ಎ | ಐ | | ಪ್ ಬ್ | ಫ್ ಭ್ | ಮ್ | ಶ್ | | |
| ಒ | ಓ | | | | | ಷ್ | | |
| | ಔ | | | | | ಸ್ | | |
| | | | | | | ಹ್ | | |
| | | | | | | ಳ್ | | |

## ಸಂಯುಕ್ತಾಕ್ಷರಗಳು

| ಸಜಾತಿ ಸಂಯುಕ್ತಾಕ್ಷರಗಳು | | ವಿಜಾತಿ ಸಂಯುಕ್ತಾಕ್ಷರಗಳು | |
|---|---|---|---|
| ತಮ್ಮ | ಎನ್ನ | ಸೂರ್ಯ | ಶ್ರಮಣಿ |
| ಹಣ್ಣು | ಮೆಚ್ಚು | ಲಕ್ಷ್ಮಣ | ಪುತ್ರ |
| | | ಪ್ರವೇಶ | ಹೊಗಳ್ವೆ |
| | | ಸದ್ಗುಣ | ಅಗ್ನಿ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ವ್ಯಂಜನಾಕ್ಷರಗಳಲ್ಲಿ ಅಲ್ಪಪ್ರಾಣಾಕ್ಷರಗಳ ಸಂಖ್ಯೆ :
   (ಎ) 6 (ಬಿ) 10
   (ಸಿ) 5 (ಡಿ) 9
2. ಙ್, ಞ್, ಣ್, ನ್, ಮ್– ಈ ಅಕ್ಷರಗಳು ವರ್ಣಮಾಲೆಯ ಈ ಗುಂಪಿಗೆ ಸೇರಿವೆ :
   (ಎ) ಅಲ್ಪಪ್ರಾಣಗಳು (ಬಿ) ಮಹಾಪ್ರಾಣಗಳು
   ಸಿ) ಅನುನಾಸಿಕಗಳು (ಡಿ) ಸ್ವರಗಳು

3. ಕನ್ನಡ ವರ್ಣಮಾಲೆಯಲ್ಲಿ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಸ್ವರಾಕ್ಷರಗಳು :
   (ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ
   (ಸಿ) ಪ್ಲುತಸ್ವರ (ಡಿ) ಸುಸ್ವರ
4. **'ರಸಭಾವ'** ಈ ಪದದಲ್ಲಿರುವ ಮಹಾಪ್ರಾಣಾಕ್ಷರ :
   (ಎ) ರ (ಬಿ) ಸ
   (ಸಿ) ಭಾ (ಡಿ) ವ
5. ಈ ಕೆಳಗಿನ ಪದಗಳಲ್ಲಿ ವಿಜಾತಿ ಸಂಯುಕ್ತಾಕ್ಷರ ಇರುವ ಪದ :
   (ಎ) ಚಪ್ಪಾಳೆ (ಬಿ) ಒತ್ತಡ
   (ಸಿ) ಕಟ್ಟಡ (ಡಿ) ಅತ್ಯಾಸೆ
6. ಇವುಗಳಲ್ಲಿ ಅನುಸ್ವಾರ ಮತ್ತು ವಿಸರ್ಗ ಸಹಿತ ಪದ
   (ಎ) ಅಂತಃಪುರ (ಬಿ) ದುಃಖ
   (ಸಿ) ಆನಂತರ (ಡಿ) ಸನ್ಮಾನ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ಹ್ರಸ್ವಸ್ವರಗಳು : 06 :: ದೀರ್ಘ ಸ್ವರಗಳು : ____________
2. ಯ್ ರ್ ಲ್ ವ್ : ಅವರ್ಗೀಯ ವ್ಯಂಜನಗಳು : : ಕ್ ಚ್ ಟ್ ತ್ ಪ್ : ________
3. ಹ್ರಸ್ವಸ್ವರ : ಒಂದು ಮಾತ್ರಾಕಾಲ :: ದೀರ್ಘಸ್ವರ : ____________
4. ಅಜ್ಜ : ಸಜಾತಿ ಸಂಯುಕ್ತಾಕ್ಷರ :: ಅಕ್ಷರ : ______________

*****

## ಸಂಧಿಗಳು

### ಕನ್ನಡ ಸಂಧಿಗಳು

#### 'ಲೋಪ ಸಂಧಿ'

| | | | |
|---|---|---|---|
| ಊ**ರೂ**ರು | ಬಲ್ಲೆ**ನೆಂ**ದು | ಮಾತ**ಂ**ತು | ಸಂಪನ್ನ**ರಾ**ದ |
| ಕಾಣ**ಲಾ**ಗದು | ತಪ್ಪ**ಲೀ**ಯದೆ | ಬಂದ**ಲ್ಲ**ದೆ | ತಕ್ಕ**ನಿ**ತು |
| ಪೊ**ಳ್ದ**ಡೆ | ಇರು**ಳ**ಳಿದು | ತೆರೆ**ದಿ**ಕ್ಕುವ | ಮನ**ದೊ**ಳಗೆ |
| ಚರಿಸು**ತ**ದ್ವರದ | ಲೇಖನವ**ನೋ**ದಿ | ನಿಂ**ತಿ**ರ್ದನು | ಕಾದಾಟ**ದಾ**ಟ |
| ಆದ**ನೆಂ**ಬ | ನೆತ್ತ**ರೊಂ**ದೆ | ತೆಗೆ**ದು**ತ್ತರೀಯಮಂ | ಬೇಡಬೇ**ಡ**ರಸುಗಳ |

#### 'ಆಗಮ ಸಂಧಿ'

| | | | |
|---|---|---|---|
| ಕೈ**ಯ**ನ್ನು | ಮಳೆ**ಯಿಂ**ದ | ಶಾಲೆ**ಯ**ಲ್ಲಿ | ಮರ**ವ**ನ್ನು |
| ಮಗು**ವಿ**ಗೆ | ಭೇದ**ವಿ**ಲ್ಲ | ವೃದ್ಧಿ**ಯಾ**ಗಿ | ಭೇದ**ವಾ**ಗಿ |
| ಮನೆ**ಯೊ**ಳಗೆ | ಶವ**ವಾ**ದವು | | |

#### 'ಆದೇಶ ಸಂಧಿ'

| | | | |
|---|---|---|---|
| ಮಳೆ**ಗಾ**ಲ | ಮೈ**ದೋ**ರು | ಬೆಂ**ಬ**ತ್ತು | ಕೈ**ವಿ**ಡಿದು |
| ಧೃತಿ**ಗೆ**ಟ್ಟು | ಪೊಗ**ಲ್ವೇ**ಳ್ಕುಂ | ಹೊಸ**ಗಾ**ಲ | |

## ಸಂಸ್ಕೃತ ಸಂಧಿಗಳು

**‘ಸವರ್ಣ ದೀರ್ಘ ಸಂಧಿ’**

| | | | |
|---|---|---|---|
| ಮಹಾತ್ಮ | ಗಿರೀಶ | ಸುರಾಸುರ | ವಧೂಪೇತ |
| ಸಕಳಾಚಾರ್ಯ | ಜಿನಾಲಯ | ಚಂದ್ರಾರ್ಕ | ನಿಜಾಶ್ರಮ |

**‘ಗುಣ ಸಂಧಿ’**

| | | | |
|---|---|---|---|
| ದೇವೇಂದ್ರ | ಜ್ಞಾನೇಶ್ವರ | ಸೂರ್ಯೋದಯ | ಮಹರ್ಷಿ |
| ಮಹೇಶ | ಮಂಡಳೇಶ್ವರ | ಕಲೋಪಾಸಕ | |

**‘ವೃದ್ಧಿ ಸಂಧಿ’**

| | | | |
|---|---|---|---|
| ಏಕೈಕ | ಜನೈಕ್ಯ | ವನೌಷಧಿ | ಅಷ್ಟೈಶ್ವರ್ಯ |

**‘ಯಣ್ ಸಂಧಿ’**

| | | | |
|---|---|---|---|
| ಅತ್ಯವಸರ | ಕೋಟ್ಯಧೀಶ್ವರ | ಕೋಟ್ಯನುಕೋಟಿ | ಜಾತ್ಯತೀತ |

**‘ಜಶ್ತ್ವ ಸಂಧಿ’**

| | | | | |
|---|---|---|---|---|
| ವಾಗ್ದೇವಿ | ಅಜಂತ | ಷಡಾನನ | ದಿಗಂತ | ಅಬ್ಧಿ |

**‘ಶ್ಚುತ್ವ ಸಂಧಿ’**

| | | | |
|---|---|---|---|
| ಪಯಶ್ಶಯನ | ಶರಚ್ಚಂದ್ರ | ಜಗಜ್ಜ್ಯೋತಿ | ಬೃಹಚ್ಛತ್ರ |

**‘ಅನುನಾಸಿಕ ಸಂಧಿ’**

| | | | |
|---|---|---|---|
| ಷಣ್ಮುಖ | ಸನ್ಮಾನ | ವಾಙ್ಮಯ | ಉನ್ಮಾದ |
| ತನ್ಮಯ | ಶ್ರೀಮನ್ಮಹಾ | | |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. **‘ಮಳೆಗಾಲ’** ಪದವು ಈ ಸಂಧಿಗೆ ಉದಾಹರಣೆ :
   (ಎ) ಲೋಪ (ಬಿ) ಆಗಮ
   (ಸಿ) ಆದೇಶ (ಡಿ) ಗುಣಸಂಧಿ
2. **‘ಮನದೊಳಗೆ’** ಪದವನ್ನು ಬಿಡಿಸಿ ಬರೆದಾಗ ಆಗುವ ರೂಪ :
   (ಎ) ಮನದ + ಒಳಗೆ (ಬಿ) ಮನ + ದೊಳಗೆ
   (ಸಿ) ಮನದಲ್ಲಿ + ಒಳಗೆ (ಡಿ) ಮನದಿ + ಒಳಗೆ
3. ಈ ಕೆಳಗಿನ ಪದಗಳಲ್ಲಿ ಗುಣಸಂಧಿಯಾಗಿರುವ ಪದ :
   (ಎ) ಏಕೈಕ (ಬಿ) ಸೂರ್ಯೋದಯ
   (ಸಿ) ಅತ್ಯವಸರ (ಡಿ) ದಿಗಂತ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ಮಹರ್ಷಿ : ಗುಣಸಂಧಿ :: ವನೌಷಧ : ______
2. ನೆತ್ತರೊಂದೆ : ಲೋಪಸಂಧಿ :: ಹೊಸಗಾಲ : ______
3. ಊರೂರು : ಸ್ವರಸಂಧಿ :: ಮೈದೋರು : ____________

## ದ್ವಿರುಕ್ತಿಗಳು

| | | | |
|---|---|---|---|
| ಹೌದುಹೌದು | ನಿಲ್ಲುನಿಲ್ಲು | ಬಂದೆಬಂದೆ | ದೊಡ್ಡದೊಡ್ಡ. |
| ಹೆಚ್ಚುಹೆಚ್ಚು | ಮನೆಮನೆ | ಕೇರಿಕೇರಿ | ಊರೂರು |
| ನಿಲ್ಲುನಿಲ್ಲು. | ಎಲೇಎಲೇ | ಬನ್ನಿಬನ್ನಿ | ಹತ್ತಿರಹತ್ತಿರ. |
| ಅಗೋಅಗೋ | ಅಬ್ಬಬ್ಬಾ! | ಆಹಾಹಾ | ಬೇಡಬೇಡ |
| ಕೊಡುಕೊಡು | ನಡೆನಡೆ | ಅಮ್ಮಾಅಮ್ಮಾ | ಆಗಲಿಆಗಲಿ |
| ಬೇಗಬೇಗ | ನಡೆನಡೆ | ಓಡುಓಡು | ಅಯ್ಯೋಅಯ್ಯೋ, |
| ದೇವರೆದೇವರೇ | ನೋಡಿನೋಡಿ | ಹಾವುಹಾವು, | ಕೆಟ್ಟೆಕೆಟ್ಟೆ, |
| ಬೆಂಕಿಬೆಂಕಿ. | ದುರುಳಾದುರುಳಾ | ಸಾಕುಸಾಕು | ಈಗೀಗ |
| ತಿರುತಿರುಗಿ | ಒಬ್ಬೊಬ್ಬ | | |

**ದ್ವಿರುಕ್ತಿಯಲ್ಲಿ ಬರುವ ಕೆಲವು ವಿಶೇಷ ರೂಪಗಳು.**

| | |
|---|---|
| ಮೊದಲು + ಮೊದಲು | = ಮೊತ್ತಮೊದಲು / ಮೊಟ್ಟಮೊದಲು |
| ಕಡೆಗೆ + ಕಡೆಗೆ | = ಕಟ್ಟಕಡೆಗೆ / ಕಡೆಕಡೆಗೆ |
| ನಡುವೆ + ನಡುವೆ | = ನಟ್ಟನಡುವೆ / ನಡುನಡುವೆ |
| ಬಯಲು +ಬಯಲು | = ಬಟ್ಟಬಯಲು |
| ತುದಿ + ತುದಿ | = ತುತ್ತತುದಿ |
| ಕೊನೆಗೆ + ಕೊನೆಗೆ | = ಕೊನೆಕೊನೆಗೆ |
| ಮೆಲ್ಲನೆ + ಮೆಲ್ಲನೆ | = ಮೆಲ್ಲಮೆಲ್ಲನೆ |

## ಜೋಡುನುಡಿಗಳು

| | | | |
|---|---|---|---|
| ಸತಿಪತಿ | ಕೆನೆಮೊಸರು | ಹಾಲ್ಜೇನು | ಮಕ್ಕಳುಮರಿ |
| ಹುಳಹುಪ್ಪಡಿ | ಸೊಪ್ಪುಸದೆ | ಬಟ್ಟೆಬರೆ | |

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. 'ಬಟ್ಟಬಯಲು' ಪದವು ಈ ವ್ಯಾಕರಣಕ್ಕೆ ಸೇರಿದೆ :
   (ಎ) ಜೋಡುನುಡಿ (ಬಿ) ದ್ವಿರುಕ್ತಿ
   (ಸಿ) ಅನುಕರಣಾವ್ಯಯ (ಡಿ) ನುಡಿಗಟ್ಟು
2. ಈ ಪದಗಳಲ್ಲಿ ದ್ವಿರುಕ್ತಿ ಪದವನ್ನು ಗುರುತಿಸಿ ಬರೆಯಿರಿ :
   (ಎ) ನಿಲ್ಲುನಿಲ್ಲು (ಬಿ) ಢಣಢಣ
   (ಸಿ) ಸತಿಪತಿ (ಡಿ) ಗಜಪತಿ
3. 'ಹಾಲ್ಜೇನು' ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ :
   (ಎ) ದ್ವಿರುಕ್ತಿ (ಬಿ) ನುಡಿಗಟ್ಟು
   (ಸಿ) ಅನುಕರಣಾವ್ಯಯ (ಡಿ) ಜೋಡುನುಡಿ

4. ಈ ಪದಗಳಲ್ಲಿ ಜೋಡುನುಡಿ ಪದವನ್ನು ಗುರುತಿಸಿ.
   (ಎ) ನಟ್ಟನಡುವೆ (ಬಿ) ಸೊಪ್ಪುಸದೆ
   (ಸಿ) ಜುಳುಜುಳು (ಡಿ) ಈಗೀಗ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ**

1. ಬನ್ನಿಬನ್ನಿ : ದ್ವಿರುಕ್ತಿ :: ಹುಳಹುಪ್ಪಡಿ : ____________
2. ಹಾಲ್ಜೇನು : ಜೋಡುನುಡಿ :: ತುತ್ತತುದಿ : ____________

*****

## ತತ್ಸಮ – ತದ್ಭವಗಳು

| ತತ್ಸಮ | ತದ್ಭವ | ತತ್ಸಮ | ತದ್ಭವ |
|---|---|---|---|
| ದೃಷ್ಟಿ | **ದಿಟ್ಟಿ** | ತಪಸ್ವಿ | **ತವಸಿ** |
| ಗ್ರಹ | **ಗರ** | ವಿಜ್ಞಾನ | **ಬಿನ್ನಣ** |
| ಮುಖಶಾಲೆ | **ಮೊಗಸಾಲೆ** | ದಾತೃ | **ದಾತಾರ** |
| ವಿಜ್ಞಾಪನೆ | **ಬಿನ್ನಹ** | ಸಾಮಂತ | **ಸಾವಂತ** |
| ಸುಧಾ / ಸುಧೆ | **ಸೊದೆ** | ತಟ | **ತಡಿ** |
| ವರ್ಷ | **ವರುಷ / ಬರಿಸ** | ಶ್ರೀ | **ಸಿರಿ** |
| ರಾಜ | **ರಾಯ** | ಭಕ್ತ | **ಬಕುತ** |
| ದಿಶಾ | **ದೆಸೆ** | ಚಂದ್ರ | **ಚಂದಿರ** |
| ವೀರ | **ಬೀರ** | ವಂಶ | **ಬಂಚ** |
| ಸ್ಥಾನ | **ತಾಣ** | ಯಶ | **ಜಸ** |
| ಪಟ್ಟಣ | **ಪತ್ತನ** | ಕಾರ್ಯ | **ಕಜ್ಜ** |
| ವ್ಯಯ | **ಬೀಯ** | ಕೋಕಿಲಾ | **ಕೋಗಿಲೆ** |
| ವ್ಯಾಪಾರಿ | **ಬೇಹಾರಿ** | ಸಂದೇಹ | **ಸಂದೆಯ** |
| ಅಮೃತ | **ಅಮರ್ದು** | ದೀಪಿಕಾ | **ದೀವಿಗೆ** |
| ಪುಣ್ಯ | **ಹೂನ್ಯ** | ಕಣಿ | **ಗಣಿ** |
| ಪಕ್ಷಿ | **ಹಕ್ಕಿ** | ಬ್ರಹ್ಮ | **ಬೊಮ್ಮ** |
| ಶಶಿ | **ಸಸಿ** | ಶಿರ | **ಸಿರ** |
| ಕಲಶ | **ಕಲಸ** | ಅಂಕುಶ | **ಅಂಕುಸ** |
| ದ್ಯೂತ | **ಜೂಜು** | ವಂಧ್ಯಾ | **ಬಂಜೆ** |
| ವಿದ್ಯಾಧರ | **ಬಿಜ್ಜೋದರ** | ವೈಶಾಖ | **ಬೇಸಗೆ** |
| ಕುಠಾರ | **ಕೊಡಲಿ** | ಪಾದುಕಾ | **ಹಾವುಗೆ** |
| ಅರ್ಕ | **ಎಕ್ಕ** | ಶುನಕ | **ಸೊಣಗ** |
| ಅಟವಿ | **ಅಡವಿ** | ಪ್ರಸಾದ | **ಹಸಾದ** |
| ಯಜ್ಞ | **ಜನ್ನ** | ಕಾವ್ಯ | **ಕಬ್ಬ** |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. 'ಅಮೃತ' ಪದದ ತದ್ಭವ ರೂಪ :
   (ಎ) ಆವೃತ (ಬಿ) ಅಮರ್ದು
   (ಸಿ) ಸುಧಾ (ಡಿ) ಹಾಲು
2. ಈ ಕೆಳಗಿನ ಪದಗಳಲ್ಲಿ ತತ್ಸಮ ಪದ :
   (ಎ) ರಾಯ (ಬಿ) ಬಿನ್ನಹ
   (ಸಿ) ಸೊದೆ (ಡಿ) ಸ್ಥಾನ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ರಾಯ : ರಾಜ :: ದೀವಿಗೆ : ______
2. ಭಕ್ತ : ತತ್ಸಮ :: ಬರಿಸ : ______

## ವಿಭಕ್ತಿ ಪ್ರತ್ಯಯಗಳು

| ಕ್ರ. ಸಂ. | ವಿಭಕ್ತಿಯ ಹೆಸರು | ಹಳಗನ್ನಡದ ವಿಭಕ್ತಿ ಪ್ರತ್ಯಯ | ಹೊಸಗನ್ನಡದ ವಿಭಕ್ತಿ ಪ್ರತ್ಯಯ | ಕಾರಕಾರ್ಥ |
|---|---|---|---|---|
| 1 | ಪ್ರಥಮ ವಿಭಕ್ತಿ ಪ್ರತ್ಯಯ | ಮ್ | ಉ | ಕರ್ತ್ರರ್ಥ |
| 2 | ದ್ವಿತೀಯಾ ವಿಭಕ್ತಿ ಪ್ರತ್ಯಯ | ಅಮ್ | ಅನ್ನು | ಕರ್ಮಾರ್ಥ |
| 3 | ತೃತೀಯಾ ವಿಭಕ್ತಿ ಪ್ರತ್ಯಯ | ಇಮ್ | ಇಂದ | ಕರಣಾರ್ಥ |
| 4 | ಚತುರ್ಥೀ ವಿಭಕ್ತಿ ಪ್ರತ್ಯಯ | ಗೆ/ಇಗೆ/ಕೆ/ಕ್ಕೆ | ಗೆ/ಕೆ/ಕ್ಕೆ | ಸಂಪ್ರದಾನ |
| 5 | ಪಂಚಮೀ ವಿಭಕ್ತಿ ಪ್ರತ್ಯಯ | ಅತ್ತಣಿಂ | ದೆಸೆಯಿಂದ | ಅಪಾದಾನ |
| 6 | ಷಷ್ಠೀ ವಿಭಕ್ತಿ ಪ್ರತ್ಯಯ | ಅ | ಅ | ಸಂಬಂಧ |
| 7 | ಸಪ್ತಮೀ ವಿಭಕ್ತಿ ಪ್ರತ್ಯಯ | ಒಳ್ | ಅಲ್ಲಿ | ಅಧಿಕರಣ |

*****

| ಕ್ರ. ಸಂ. | ವಿಭಕ್ತಿಯ ಹೆಸರು | ಹಳಗನ್ನಡದ ವಿಭಕ್ತಿ ಪ್ರತ್ಯಯ | ಹಳಗನ್ನಡ ಪದರೂಪಗಳು | ಕಾರಕಾರ್ಥ |
|---|---|---|---|---|
| 1 | ಪ್ರಥಮ ವಿಭಕ್ತಿ ಪ್ರತ್ಯಯ | ಮ್ | ಸಾವಿತ್ರಿ | ಕರ್ತ್ರರ್ಥ |
| 2 | ದ್ವಿತೀಯಾ ವಿಭಕ್ತಿ ಪ್ರತ್ಯಯ | ಅಮ್ | ಸಾವಿತ್ರಿಯಂ | ಕರ್ಮಾರ್ಥ |
| 3 | ತೃತೀಯಾ ವಿಭಕ್ತಿ ಪ್ರತ್ಯಯ | ಇಮ್ | ಸಾವಿತ್ರಿಯಿಂ | ಕರಣಾರ್ಥ |
| 4 | ಚತುರ್ಥೀ ವಿಭಕ್ತಿ ಪ್ರತ್ಯಯ | ಗೆ/ಇಗೆ/ಕೆ/ಕ್ಕೆ | ಸಾವಿತ್ರಿಂಗೆ | ಸಂಪ್ರದಾನ |
| 5 | ಪಂಚಮೀ ವಿಭಕ್ತಿ ಪ್ರತ್ಯಯ | ಅತ್ತಣಿಂ | ಸಾವಿತ್ರಿಯತ್ತಣಿಂ | ಅಪಾದಾನ |
| 6 | ಷಷ್ಠೀ ವಿಭಕ್ತಿ ಪ್ರತ್ಯಯ | ಅ | ಸಾವಿತ್ರಿಯ | ಸಂಬಂಧ |
| 7 | ಸಪ್ತಮೀ ವಿಭಕ್ತಿ ಪ್ರತ್ಯಯ | ಒಳ್ | ಸಾವಿತ್ರಿಯೊಳ್ | ಅಧಿಕರಣ |

*****

| ಕ್ರ. ಸಂ. | ವಿಭಕ್ತಿಯ ಹೆಸರು | ಹೊಸಗನ್ನಡದ ವಿಭಕ್ತಿ ಪ್ರತ್ಯಯ | ಹಳಗನ್ನಡ ಪದರೂಪಗಳು | ಕಾರಕಾರ್ಥ |
|---|---|---|---|---|
| 1 | ಪ್ರಥಮ ವಿಭಕ್ತಿ ಪ್ರತ್ಯಯ | ಉ | ಸಾವಿತ್ರಿಯು | ಕರ್ತ್ರರ್ಥ |
| 2 | ದ್ವಿತೀಯಾ ವಿಭಕ್ತಿ ಪ್ರತ್ಯಯ | ಅನ್ನು | ಸಾವಿತ್ರಿಯನ್ನು | ಕರ್ಮಾರ್ಥ |
| 3 | ತೃತೀಯಾ ವಿಭಕ್ತಿ ಪ್ರತ್ಯಯ | ಇಂದ | ಸಾವಿತ್ರಿಯಿಂದ | ಕರಣಾರ್ಥ |
| 4 | ಚತುರ್ಥೀ ವಿಭಕ್ತಿ ಪ್ರತ್ಯಯ | ಗೆ/ಕೆ/ಕ್ಕೆ | ಸಾವಿತ್ರಿಗೆ | ಸಂಪ್ರದಾನ |
| 5 | ಪಂಚಮೀ ವಿಭಕ್ತಿ ಪ್ರತ್ಯಯ | ದೆಸೆಯಿಂದ | ಸಾವಿತ್ರಿಯ ದೆಸೆಯಿಂದ | ಅಪಾದಾನ |
| 6 | ಷಷ್ಠೀ ವಿಭಕ್ತಿ ಪ್ರತ್ಯಯ | ಅ | ಸಾವಿತ್ರಿಯ | ಸಂಬಂಧ |
| 7 | ಸಪ್ತಮೀ ವಿಭಕ್ತಿ ಪ್ರತ್ಯಯ | ಅಲ್ಲಿ | ಸಾವಿತ್ರಿಯಲ್ಲಿ | ಅಧಿಕರಣ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. **'ಕಲೋಪಾಸಕನಿಗೆ'** ಈ ಪದದಲ್ಲಿ ಇರುವ ವಿಭಕ್ತಿಯ ಹೆಸರು :

   (ಎ) ಪ್ರಥಮ (ಬಿ) ದ್ವಿತೀಯ

   (ಸಿ) ತೃತೀಯ (ಡಿ) ಚತುರ್ಥಿ

2. **'ಕೆಲದೊಳ್'** ಪದದಲ್ಲಿರುವ ವಿಭಕ್ತಿ ಪ್ರತ್ಯಯ :

   (ಎ) ಪಂಚಮಿ (ಬಿ) ಷಷ್ಠಿ

   (ಸಿ) ಸಪ್ತಮಿ (ಡಿ) ಪ್ರಥಮ

3. ದ್ವಿತೀಯ ವಿಭಕ್ತಿಯಲ್ಲಿರುವ ಕಾರಕಾರ್ಥ :

(ಎ) ಕರ್ತೃಕಾರಕ (ಬಿ) ಕರ್ಮಕಾರಕ

(ಸಿ) ಕರಣಕಾರಕ (ಡಿ) ಸಂಪ್ರದಾನಕಾರಕ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ಕರ್ಣಂಗೆ : ಚತುರ್ಥಿ ವಿಭಕ್ತಿ :: ಗಾಂಡೀವಿಯೊಳ್ : ____________
2. ಚತುರ್ಥಿ ವಿಭಕ್ತಿ : ಸಂಪ್ರದಾನ :: ಪಂಚಮಿ ವಿಭಕ್ತಿ : ____________
3. ಅತ್ತಣಿಂ : ಪಂಚಮಿ ವಿಭಕ್ತಿ :: ಇಂ : ____________
4. ಉತ್ತ : ಕಾಲಪ್ರತ್ಯಯ :: ಇಂದ : ____________

**ನಾಮಪದಗಳು**

| ರೂಢನಾಮಗಳು | | | | |
|---|---|---|---|---|
| ನದಿ | ಪರ್ವತ | ಊರು | ದೇಶ | ಮನುಷ್ಯ |

*****

| ಅಂಕಿತನಾಮಗಳು | | | |
|---|---|---|---|
| ಸಹದೇವ | ಧರ್ಮರಾಯ | ರಾಹುಲ | ಕಮಲಾಕ್ಷ |

*****

| ಅನ್ವರ್ಥನಾಮಗಳು | | | |
|---|---|---|---|
| ವ್ಯಾಪಾರಿ | ವಿದ್ವಾಂಸ | ವಿಜ್ಞಾನಿ | ಪೂಜಾರಿ |

*****

| ಗುಣವಾಚಕಗಳು | | | |
|---|---|---|---|
| ಒಳ್ಳೆಯ | ಕೆಟ್ಟ | ದೊಡ್ಡದು | ಹಳತು |

*****

| ಸಂಖ್ಯಾವಾಚಕಗಳು | | | |
|---|---|---|---|
| ಹನ್ನೆರಡು | ಐವತ್ತು | ಎಂಬತ್ತು | |

*****

| ಭಾವನಾಮಗಳು | | | | |
|---|---|---|---|---|
| ಕೆಂಪು | ಹಿರಿಮೆ | ನೋಟ | ಮಾಟ | ಆಟ |

*****

| ಪರಿಮಾಣವಾಚಕಗಳು | | | | |
|---|---|---|---|---|
| ಅಷ್ಟು | ಎಷ್ಟು | ಹಲವು | ಇನಿತು | ಅನಿತು |

*****

| ದಿಗ್ವಾಚಕಗಳು | | | | |
|---|---|---|---|---|
| ಮೂಡಣ | ತೆಂಕಣ | ಪಡುವಣ | ಈಶಾನ್ಯ | ಆಗ್ನೇಯ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಈ ಕೆಳಗಿನ ಪದಗಳಲ್ಲಿ ರೂಢನಾಮ ಪದ ಗುರುತಿಸಿ ಬರೆಯಿರಿ :

(ಎ) ವ್ಯಾಪಾರಿ (ಬಿ) ಧರ್ಮರಾಯ

(ಸಿ) ನದಿ (ಡಿ) ಕೆಟ್ಟ

2. **'ಒಳ್ಳೆಯ'** ಈ ಪದವು ನಾಮಪದದ ಈ ಗುಂಪಿಗೆ ಸೇರಿದೆ :

(ಎ) ಸಂಖ್ಯೇಯವಾಚಕ (ಬಿ) ಗುಣವಾಚಕ

(ಸಿ) ದಿಗ್ವಾಚಕ (ಡಿ) ಪರಿಮಾಣವಾಚಕ

3. ಅರ್ಥಕ್ಕೆ ಅನುಗುಣವಾದ ಹೆಸರನ್ನು ಹೀಗೆ ಕರೆಯುತ್ತಾರೆ :

(ಎ) ರೂಢನಾಮ (ಬಿ) ಅಂಕಿತನಾಮ

(ಸಿ) ಅನ್ವರ್ಥನಾಮ (ಡಿ) ಭಾವನಾಮ

4. ವಿಶ್ವೇಶ್ವರಯ್ಯನವರು ‘ಶಿಕ್ಷಣವು ಸಂಜೀವಿನಿ’ ಎಂದು ಅರಿತಿದ್ದರು.
ಈ ವಾಕ್ಯದಲ್ಲಿರುವ ಅಂಕಿತನಾಮ :
(ಎ) ಶಿಕ್ಷಣ (ಬಿ) ವಿಶ್ವೇಶ್ವರಯ್ಯ
(ಸಿ) ಸಂಜೀವಿನಿ (ಡಿ) ಅರಿತಿದ್ದರು

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ನದಿ : ರೂಢನಾಮ :: ವಿದ್ವಾಂಸ : ___________
2. ಹನ್ನೆರಡು : ಸಂಖ್ಯಾವಾಚಕ :: ಹತ್ತನೆಯ : ______
3. ಹಿರಿಮೆ : ಭಾವನಾಮ :: ಎಷ್ಟು : _______
4. ವಿಜ್ಞಾನಿ : ಅನ್ವರ್ಥನಾಮ :: ಮೈಸೂರು : _________
5. ದಕ್ಷಿಣ : ದಿಗ್ವಾಚಕ :: ವ್ಯಾಪಾರಿ : _____________

*****

## ಸರ್ವನಾಮಗಳು

| | | |
|---|---|---|
| ಉತ್ತಮ ಪುರುಷ | ನಾನು | ನಾವು |
| ಮಧ್ಯಮ ಪುರುಷ | ನೀನು | ನೀವು |
| ಪ್ರಥಮ ಪುರುಷ ಪುಲ್ಲಿಂಗ<br>ಸ್ತ್ರೀ ಲಿಂಗ<br>ನಪುಂಸಕ ಲಿಂಗ | ಅವನು/ಇವನು<br>ಅವಳು/ಇವಳು<br>ಅದು/ಇದು | ಅವರು/ಇವರು<br>ಅವರು/ಇವರು<br>ಅವು/ಇವು |

*****

| **ಆತ್ಮಾರ್ಥಕ ಸರ್ವನಾಮಗಳು** | | | |
|---|---|---|---|
| ತಾನು | ತಾವು | ತನ್ನ | ತಮ್ಮ |

*****

| **ಪ್ರಶ್ನಾರ್ಥಕ ಸರ್ವನಾಮಗಳು** | | | |
|---|---|---|---|
| ಯಾರು? | ಏನು? | ಯಾವುದು? | |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಅವನು ಶಾಲೆಗೆ ದಿನವೂ ಬರುತ್ತಾನೆ. ಈ ವಾಕ್ಯದಲ್ಲಿರುವ ಸರ್ವನಾಮ :
(ಎ) ದಿನವೂ (ಬಿ) ಶಾಲೆಗೆ
(ಸಿ) ಬರುತ್ತಾನೆ (ಡಿ) ಅವನು

2. **‘ತಾನು’** ಎಂಬುದು ಈ ಸರ್ವನಾಮಪದವಾಗಿದೆ :
(ಎ) ಪ್ರಶ್ನಾರ್ಥಕ (ಬಿ) ಆತ್ಮಾರ್ಥಕ
(ಸಿ) ಪುರುಷಾರ್ಥಕ (ಡಿ) ದಿಗ್ವಾಚಕ

3. ಇವುಗಳಲ್ಲಿ ಮಧ್ಯಮ ಪುರುಷ ಸರ್ವನಾಮವನ್ನು ಗುರುತಿಸಿ ಬರೆಯಿರಿ.
(ಎ) ನಾನು (ಬಿ) ನೀನು
(ಸಿ) ತಾನು (ಡಿ) ಅವನು

4. **‘ಅವರು’** ಪದವು ಈ ಸರ್ವನಾಮಕ್ಕೆ ಉದಾಹರಣೆಯಾಗಿದೆ :
(ಎ) ಉತ್ತಮ ಪುರುಷ (ಬಿ) ಮಧ್ಯಮ ಪುರುಷ
(ಸಿ) ಪ್ರಥಮ ಪುರುಷ (ಡಿ) ಆತ್ಮಾರ್ಥಕ ಸರ್ವನಾಮ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ನನ್ನ : ಉತ್ತಮಪುರುಷ :: ನಿನ್ನ : ___________
2. ತಾನು : ಆತ್ಮಾರ್ಥಕ :: ಅವನು : _____________
3. ಯಾರು : ಪ್ರಶ್ನಾರ್ಥಕ :: ತಾವು : _____________
4. ರಾಮ : ಅಂಕಿತನಾಮ :: ಅವಳು : ___________

| ಗ್ರಾಮ್ಯ / ಆಡು ನುಡಿ ರೂಪಗಳು > ಗ್ರಾಂಥಿಕ ರೂಪಗಳು | | | |
|---|---|---|---|
| **ಗ್ರಾಮ್ಯ/ಆಡು ನುಡಿ** | **ಗ್ರಾಂಥಿಕ ರೂಪ** | **ಗ್ರಾಮ್ಯ/ಆಡು ನುಡಿ** | **ಗ್ರಾಂಥಿಕ ರೂಪ** |
| ಹೀಂಗ | **ಹೀಗೆ** | ಮ್ಯಾಗ | **ಮೇಲೆ** |
| ಕಳುವ್ಯಾರೆ | **ಕಳುಹಿಸಿದ್ದಾರೆ** | ಇಲ್ಲದ್ದಂಗ | **ಇಲ್ಲದ ಹಾಗೆ** |
| ಇಸವಾಸ | **ವಿಶ್ವಾಸ** | ಸಕ್ಕಾರಿ | **ಸಕ್ಕರೆ** |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಉತ್ತರಗಳಲ್ಲಿ ಸೂಕ್ತ ಉತ್ತರವನ್ನು ಗುರುತಿಸಿ ಬರೆಯಿರಿ.**

1. **'ಮ್ಯಾಗ'** ಪದದ ಗ್ರಾಂಥಿಕ ರೂಪ
   (ಎ) ಮಾಗಿ (ಬಿ) ಮೇಲೆ
   (ಸಿ) ಮೇಘ (ಡಿ) ಯಾಗ
2. **'ಇಸವಾಸ'** ಪದದ ಗ್ರಾಂಥಿಕ ರೂಪ :
   (ಎ) ಸಹವಾಸ (ಬಿ) ವಿಶ್ವಾಸ
   (ಸಿ) ಶ್ವಾಸ (ಡಿ) ನಿವಾಸ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ಹೀಂಗ : ಹೀಗೆ :: ಇಲ್ಲದಂಗ : ____________
2. ಕಳುವ್ಯಾರೆ: ಕಳುಹಿಸಿದ್ದಾರೆ :: ಸಕ್ಕಾರಿ : ____________

| ವಿರುದ್ಧಾರ್ಥಕ ಪದಗಳು | | | |
|---|---|---|---|
| | | | |
| ಅಂತರಂಗ | **ಬಹಿರಂಗ** | ಒಳಿತು | **ಕೆಡಕು** |
| ಸಮಷ್ಟಿ | **ವ್ಯಷ್ಟಿ** | ಪುಣ್ಯ | **ಪಾಪ** |
| ಬೆಳಕು | **ಕತ್ತಲು** | ಧರ್ಮ | **ಅಧರ್ಮ** |
| ಹುಸಿ | **ನನ್ನಿ** | ಮಿಥ್ಯ | **ಸತ್ಯ** |

*****

# ಪತ್ರ ಲೇಖನ

**ಮಾದರಿ ವ್ಯಾವಹಾರಿಕ ಪತ್ರ**

ಇಂದ,

ಇವರಿಗೆ,

ಮಾನ್ಯರೇ,

ವಿಷಯ :

ವಂದನೆಗಳೊಡನೆ

ಸ್ಥಳ :

ತಮ್ಮ ನಂಬುಗೆಯ

ದಿನಾಂಕ :

## ಪತ್ರಲೇಖನ

**1. ನಿಮ್ಮ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಕೋರಿ ನಿಮ್ಮ ಮುಖ್ಯಶಿಕ್ಷಕರಿಗೆ ಮನವಿ ಪತ್ರ ಬರೆಯಿರಿ.**

ಇಂದ

ಥವನೀಶ
s/oಶ್ರೀ ಗಿರೀಶ
ಬೆಟ್ಟದಪುರ
ಪಿರಿಯಾಪಟ್ಟಣ ತಾಲೂಕು
ಮೈಸೂರು ಜಿಲ್ಲೆ

ಇವರಿಗೆ

ಮಾನ್ಯ ಮುಖ್ಯ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ
ಬೆಟ್ಟದಪುರ
ಪಿರಿಯಾಪಟ್ಟಣ ತಾಲೂಕು
ಮೈಸೂರು ಜಿಲ್ಲೆ

ಮಾನ್ಯರೇ

ವಿಷಯ : ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಕೋರಿ ಮನವಿ.

ನಾನು ನಿಮ್ಮ ಶಾಲೆಯಲ್ಲಿ 2011–12 ನೇ ಸಾಲಿನಲ್ಲಿ 8 ನೇ ತರಗತಿಗೆ ದಾಖಲಾಗಿ ವ್ಯಾಸಂಗ ಮಾಡಿ 2013–14 ನೇ ಸಾಲಿನಲ್ಲಿ 10 ನೇ ತರಗತಿಯಲ್ಲಿ ತೇರ್ಗಡೆಯಾಗಿರುತ್ತೇನೆ. ನನ್ನ ಮುಂದಿನ ವಿದ್ಯಾಭ್ಯಾಸವನ್ನು ಮುಂದುವರಿಸಲು ನನಗೆ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳ ಆವಶ್ಯಕತೆ ಇರುತ್ತದೆ.ಆದ್ದರಿಂದ ದಯವಿಟ್ಟು ನನ್ನ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಸವಿನಯದಿಂದ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ.

ಸ್ಥಳ : ಬೆಟ್ಟದಪುರ — ತಮ್ಮ ನಂಬುಗೆಯ
ದಿನಾಂಕ : 05–06–2014 — ಥವನೀಶ

## ಲೇಖಕರ ಪರಿಚಯ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | ಶಬರಿ | ಪು. ತಿ. ನರಸಿಂಹಾಚಾರ್ | ಕ್ರಿ. ಶ. 1905 | ಮಂಡ್ಯ ಜಿಲ್ಲೆಯ ಮೇಲುಕೋಟೆ | ಶಬರಿ ಗೀತ ನಾಟಕ<br>ಶ್ರೀಹರಿ ಚರಿತೆ<br>ಹಂಸ ದಮಯಂತಿ | ಪಂಪ ಪ್ರಶಸ್ತಿ<br>ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 2 | ಅಮೆರಿಕಾದಲ್ಲಿ ಗೊರೂರು | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಕ್ರಿ. ಶ. 1904 | ಹಾಸನ ಜಿಲ್ಲೆಯ ಗೊರೂರು | ಅಮೆರಿಕಾದಲ್ಲಿ ಗೊರೂರು,<br>ಮೆರವಣಿಗೆ | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,<br>ಗೌರವ ಡಿ. ಲಿಟ್. |
| 3 | ಜೀವನದೃಷ್ಟಿ | ಡಾ. ವಿ. ಕೃ. ಗೋಕಾಕ್ 'ವಿನಾಯಕ' | ಕ್ರಿ. ಶ. 1909 | ಹಾವೇರಿ ಜಿಲ್ಲೆಯ ಸವಣೂರು | ಜೀವನಪಾಠಗಳು,<br>ಸಮುದ್ರಗೀತೆಗಳು,<br>ಭಾರತ ಸಿಂಧೂರಶ್ಮಿ | ಭಾರತೀಯ ಜ್ಞಾನಪೀಠ ಪ್ರಶಸ್ತಿ,<br>ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, |
| 4 | ಧರ್ಮದೃಷ್ಟಿ | | | | | |
| 5 | ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ | ಡಿ. ಎಸ್. ಜಯಪ್ಪಗೌಡ | ಕ್ರಿ. ಶ. 1947 | ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿ | ಸರ್. ಎಂ. ವಿಶ್ವೇಶ್ವರಯ್ಯ ಅವರ ಕಾರ್ಯಸಾಧನೆಗಳು,<br>ಕರ್ನಾಟಕದ ಕಡಲಾಚೆಯ ಸಂಪರ್ಕಗಳು<br>ಮೈಸೂರು ಒಡೆಯರು | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,<br>ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನ |
| 6 | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ಕ್ರಿ. ಶ. 1949 | ಮೈಸೂರು ಜಿಲ್ಲೆಯ ದೇವನೂರು | ಎದೆಗೆ ಬಿದ್ದ ಅಕ್ಷರ,<br>ಕುಸುಮ ಬಾಲೆ,<br>ದ್ಯಾವನೂರು | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 7 | ವೃಕ್ಷಸಾಕ್ಷಿ | ದುರ್ಗಸಿಂಹ | ಕ್ರಿ. ಶ. ಸು. 1031 | ಕಿಸುಕಾಡು ನಾಡಿನ ಸಯ್ಯಡಿ | ಕರ್ನಾಟಕ ಪಂಚತಂತ್ರಂ | |
| 8 | ವ್ಯಾಘ್ರಗೀತೆ | ಎ. ಎನ್. ಮೂರ್ತಿರಾವ್ | ಕ್ರಿ. ಶ. 1900 | ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು | ಸಮಗ್ರ ಲಲಿತ ಪ್ರಬಂಧಗಳು,<br>ದೇವರು, ಅಪರ ವಯಸ್ಕನ ಅಮೆರಿಕಾ ಯಾತ್ರೆ. | ಪಂಪ ಪ್ರಶಸ್ತಿ<br>ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |

## ಕವಿಗಳ ಪರಿಚಯ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | ಎಮ್ಮ ನುಡಿಗೇಳ್ | ಆದಿಕವಿ ಪಂಪ | ಕ್ರಿ. ಶ. ಸು. 941 | ವೆಂಗಿಪಳು | ಆದಿಪುರಾಣ, ವಿಕ್ರಮಾರ್ಜುನ ವಿಜಯಂ | ಕವಿತಾ ಗುಣಾರ್ಣವ, ಸರಸ್ವತೀ ಮಣೀಹಾರ, ಸಂಸಾರಸಾರೋದಯ |
| 2 | ಹಕ್ಕಿ ಹಾರುತಿದೆ ನೋಡಿದಿರಾ | ದ. ರಾ. ಬೇಂದ್ರೆ 'ಅಂಬಿಕಾತನಯದತ್ತ' | ಕ್ರಿ. ಶ. 1896 | ಧಾರವಾಡ | ಗರಿ, ನಾಕುತಂತಿ, ನಾದಲೀಲೆ | ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ/ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. |
| 3 | ಹಲಗಲಿಯ ಬೇಡರು | | | | | |
| 4 | ವಚನ ಸೌರಭ | ಜೇಡರ ದಾಸಿಮಯ್ಯ 'ರಾಮನಾಥ' | ಕ್ರಿ. ಶ. ಸು. 1150 | ಯಾದಗಿರಿ ಜಿಲ್ಲೆಯ ಮುದೇನೂರು | ವಚನಗಳು | |
| | | ಬಸವಣ್ಣ 'ಕೂಡಲ ಸಂಗಮದೇವ' | ಕ್ರಿ. ಶ. ಸು. 1260 | ಬಿಜಾಪುರ ಜಿಲ್ಲೆಯ ಬಾಗೇವಾಡಿ | ವಚನಗಳು | |
| 5 | ಸಂಕಲ್ಪಗೀತೆ | ಡಾ. ಜಿ. ಎಸ್. ಶಿವರುದ್ರಪ್ಪ | ಕ್ರಿ. ಶ. 1926 | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ | ಎದೆ ತುಂಬಿ ಹಾಡಿದೆನು, ಸಾಮಗಾನ, ಚೆಲುವು | ರಾಷ್ಟ್ರಕವಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ. |
| 6 | ಕೌರವೇಂದ್ರನ ಕೊಂದೆ ನೀನು | ಗದುಗಿನ ನಾರಣಪ್ಪ 'ಕುಮಾರ ವ್ಯಾಸ' | ಕ್ರಿ. ಶ. ಸು. 1430 | ಗದಗ ಪ್ರಾಂತ್ಯದ ಕೋಳಿವಾಡ | ಕರ್ಣಾಟ ಭಾರತ ಕಥಾಮಂಜರಿ | ರೂಪಕ ಸಾಮ್ರಾಜ್ಯ ಚಕ್ರವರ್ತಿ |
| 7 | ವೀರಲವ | ಲಕ್ಷ್ಮೀಶ | ಕ್ರಿ. ಶ. ಸು. 1550 | ಚಿಕ್ಕಮಗಳೂರು ಜಿಲ್ಲೆಯ ದೇವನೂರು | ಜೈಮಿನಿ ಭಾರತ | ಉಪಮಾಲೋಲ, ಕರ್ನಾಟ ಕವಿ ಚೂತವನ ಚೈತ್ರ |
| 8 | ಸಂಕಟಕೆ ಗಡಿ ಇಲ್ಲ | ದು. ಸರಸ್ವತಿ | ಕ್ರಿ. ಶ. 1963 | ಬೆಂಗಳೂರು | ಹೆಣೆದರೆ ಜೇಡನಂತೆ, ಜೀವ ಸಂಪಿಗೆ | |

ಕರ್ನಾಟಕ ಸರ್ಕಾರ
ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ, ಬೆಂಗಳೂರು – 560 001
ಮತ್ತು
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳನಿರ್ದೇಶನಾಲಯ,
ನೃಪತುಂಗ ರಸ್ತೆ, ಬೆಂಗಳೂರು.
*ಸಹಯೋಗ*
ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,
ಮಲ್ಲೇಶ್ವರಂ, ಬೆಂಗಳೂರು.

# ಸಮರ್ಥ

ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ
ಪ್ರಶ್ನೋತ್ತರ ಮಾಲಿಕೆ

## ಪ್ರಥಮ ಭಾಷೆ ಕನ್ನಡ

**ಆಯೋಜಕರು**

ಶ್ರೀ ಮೊಹಮ್ಮದ್ ಮೊಹಸಿನ್,
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ,ಬೆಂಗಳೂರು – 560 001.

**ಪರಿಕಲ್ಪನೆ**

ಶ್ರೀಮತಿ ಜ಼ೋಹರಾ ಜಬೀನ್ ಎಂ.
ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,
ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.

## ಸಂಯೋಜಕರು

**ಶ್ರೀಮತಿ ಮಂಜುಳ ಆರ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,

**ಶ್ರೀ ಮರಿಗೌಡ ಬಿ.ಎನ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ನಾಗರತ್ನ ಎಚ್.**
ಉಪನ್ಯಾಸಕರು
ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ,
ಮಂಗಳೂರು.

## ಸಂಪನ್ಮೂಲ ಶಿಕ್ಷಕರು

**ಶ್ರೀ ವೆಂಕಟಾಚಲ ಜಿ.**
ಉಪಪ್ರಾಂಶುಪಾಲರು
ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಮ್ಮರಗಾಲ,
ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ.

**ಶ್ರೀ ರಾಮನಾಥ ಹೆಗಡೆ**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಬೀರಿಹುಂಡಿ,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ ಜಿ. ವಿ.ರಾಜುಶೆಟ್ಟಿ**
ಕನ್ನಡ ಭಾಷಾ ಶಿಕ್ಷಕರು
ಸ. ಪ. ಪೂ.ಕಾಲೇಜು, ಹೊಮ್ಮರಗಳ್ಳಿ,
ಹೆ. ದೇ. ಕೋಟೆ ತಾಲೂಕು, ಮೈಸೂರು ಜಿಲ್ಲೆ.

**ಶ್ರೀ ಬಾಲಕೃಷ್ಣಯ್ಯ ಬಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಬೋಗಾದಿ,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ ಸಂತೋಷ್ ಕುಮಾರ್ ಕೆ.**
ಕನ್ನಡ ಭಾಷಾ ಶಿಕ್ಷಕರು
ಜಿ. ಎಂ. ಸಿ. ಜಿ. ಪ್ರೌಢಶಾಲೆ, ಧೂಳೇಹೊಳೆ,
ಹರಿಹರ ತಾಲೂಕು, ದಾವಣಗೆರೆ ಜಿಲ್ಲೆ.

**ಶ್ರೀ. ಅಶ್ವತ್ಥನಾರಾಯಣ ಪಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ವರಕೋಡು,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ.ಶಿವಣ್ಣ ಎಚ್.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಚೆನ್ನಾಲಿಂಗನ ಹಳ್ಳಿ,
ಕೊಳ್ಳೇಗಾಲ ತಾಲೂಕು, ಚಾ.ನಗರ ಜಿಲ್ಲೆ.

**ಶ್ರೀ.ರವೀಂದ್ರನಾಥಾಚಾರ್ ಕೆ. ಪಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಹೆಚ್. ಬಸವಾಪುರ,
ದಾವಣಗೆರೆ ತಾಲೂಕು ಮತ್ತು ಜಿಲ್ಲೆ.

**ಶ್ರೀ. ರವೀಶ್ ಕುಮಾರ್ ಬಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ,
ಮೈಸೂರು ತಾಲೂಕು ಮತ್ತು ಜಿಲ್ಲೆ

# ಆಶಯ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014–15 ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಮುನ್ನುಡಿ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ.ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ.ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಜ಼ೋಹರಾ ಜಬೀನ್ ಎಂ.**
**ನಿರ್ದೇಶಕರು,**
**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಅದರಕ್ಕಾಗಿ ನೀಡಿರುವ **'ಚೇತನ', 'ಸಮೃದ್ಧಿ', ಹಾಗೂ 'ಸಮರ್ಥ'** ಎಂಬ ಹೊತ್ತಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.

- ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು
  ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.

- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಚೇತನ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುಂತೆ ಮಾಡುವುದು.

- ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು **'ಚೇತನ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಸಮೃದ್ಧಿ'** ಹಾಗೂ ಕೊನೆಯಲ್ಲಿ **'ಸಮರ್ಥ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು **'ಚೇತನ'** ಹಾಗೂ **'ಸಮೃದ್ಧಿ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಸಮರ್ಥ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.

- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.

- ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.

- **'ಚೇತನ', 'ಸಮೃದ್ಧಿ', ಹಾಗೂ 'ಸಮರ್ಥ'** ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.

## ಕೊಟ್ಟಿರುವ ಪ್ರತಿ ಹೇಳಿಕೆಯನ್ನು ಸಂದರ್ಭದೊಂದಿಗೆ ವಿವರಿಸಿ, ಸ್ವಾರಸ್ಯವನ್ನು ಬರೆಯಿರಿ.

### ಗದ್ಯಪಾಠ – 1

**ಶಬರಿ** **– ಪು. ತಿ. ನರಸಿಂಹಾಚಾರ್**

**1. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು."**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ತಪಸ್ವೀ ದನುಪುತ್ರರ ಸೂಚನೆಯಂತೆ ಮಾತಂಗಾಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಎದುರಿಗೆ ಬರುತ್ತಿದ್ದ ವೃದ್ಧೆಯನ್ನು (ಶಬರಿಯನ್ನು) ಕಂಡು ರಾಮನು ಈ ಮಾತನ್ನು ಲಕ್ಷ್ಮಣನಿಗೆ ಹೇಳುತ್ತಾನೆ.

**ಸ್ವಾರಸ್ಯ :–** ಶ್ರೀರಾಮನ ಬರುವಿಕೆಗಾಗಿ ಕಾದು, ಕಾತರಿಸಿ,ಮರುಳಳಂತೆ ಆಗಿದ್ದ ವೃದ್ಧೆ ಶಬರಿಯನ್ನು ಕಂಡು ರಾಮಲಕ್ಷ್ಮಣರು ಭಯಗೊಂಡದ್ದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

**2. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ತನ್ನಿಂದ ಇನಿತು ಉಪಕಾರವಿಲ್ಲದಿದ್ದರು ತನ್ನನ್ನು ಪ್ರೀತಿಯಿಂದ ನೆನೆಯುತ್ತ ಹಂಬಲಿಸುತ್ತಿರುವ ವೃದ್ಧೆ ಶಬರಿಯನ್ನು ಕಂಡ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಪೂಜ್ಯೆಯಾದ ಶಬರಿಯು ತನ್ನನ್ನು ಪ್ರೀತಿಯಿಂದ ನೆನೆಯುತ್ತ, ಬರುವಿಕೆಗಾಗಿ ಭಕ್ತಿಯಿಂದ ಹಂಬಲಿಸುತ್ತ ಇರುವ ದೃಶ್ಯವನ್ನು ನೋಡಿ ರಾಮನು "ಅವಳ ಅನುರಾಗವನ್ನು ಕಂಡು ನಾಚಿದೆನು" ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

**3. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ?"**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ಮಾತಂಗಾಶ್ರಮವನ್ನು ಪ್ರವೇಶಿಸಿದ ಸಂದರ್ಭದಲ್ಲಿ "ಎಂದು ಕಾಣುವೆನು ಶ್ರೀರಾಮನನ್ನು, ಸನ್ಮಂಗಳ ಮೂರುತಿಯನ್ನು" ಎಂದು ಹಾಡುತ್ತ ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಂಡು ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕುರಿತು ರಾಮನು ಏನೂ ಅರಿಯದವನಂತೆ"ದಾರಿಗರಾದ ನಮಗೆ ಇಲ್ಲಿ ಉಳಿದುಕೊಳ್ಳಲು ಸ್ಥಳಾವಕಾಶ ದೊರೆಯುವುದೇ?"ಎಂದು ಕೇಳುವುದು ಸ್ವಾರಸ್ಯಪೂರ್ಣವಾಗಿದೆ.

**4. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ?"**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು "ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು, ಇಷ್ಟು ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು" ಎಂದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ಹೇಳುತ್ತಾಳೆ.

**ಸ್ವಾರಸ್ಯ :–** "ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮಧುರವಾದುದು" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾಳೆ.

**5. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ರಾಮನ ದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮುಕ್ತಿಯನ್ನು ಪಡೆಯುವುದಕ್ಕಾಗಿ ಅಗ್ನಿ ಪ್ರವೇಶಿಸಿದ ಸಂದರ್ಭದಲ್ಲಿ ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** "ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ" ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಠತೆಯನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.

## ಗದ್ಯಪಾಠ – 2.

## ಅಮೆರಿಕದಲ್ಲಿ ಗೊರೂರು.–ಗೊರೂರು ರಾಮಸ್ವಾಮಿ ಅಯ್ಯಂಗಾರ್

**1. "ನನಗೆ ಇಂಗ್ಲಿಷ್ ಬಂದಿದ್ದರೆ ನಾನು ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೇ ಕರೆಸಿ ಬಿಡುತ್ತಿದ್ದೆ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಗೊರೂರು ರಾಮಸ್ವಾಮಿ ಅಯ್ಯಂಗಾರರ ಅಡುಗೆಯ ಮನೆಯಎಲ್ಲ ಸ್ವಿಚ್‌ಗಳೂ ಆಫ್ ಆಗಿದ್ದರೂ ವಿದ್ಯುತ್ ಒಲೆಯಿಂದ ಕೊಂಬಿನ ಸದ್ದು ಒಂದೇ ಸಮನಾಗಿ ಬರುತ್ತಿತ್ತು. ಇದರಿಂದ ಭಯಗೊಂಡು ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತು ಎಂಬ ಆತಂಕ ಉಂಟಾದ ಸಂದರ್ಭದಲ್ಲಿ ಗೊರೂರರ ಹೆಂಡತಿಯು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಗೊರೂರರ ಹೆಂಡತಿಯು ತಮ್ಮ ಯಜಮಾನರಿಗೆ ಮನೆಯ ವಿದ್ಯುತ್ ಯಂತ್ರಗಳನ್ನು ಬಳಸುವುದರ ಜ್ಞಾನ ಇಲ್ಲದಿರುವ ಬಗ್ಗೆ ತಮ್ಮ ಕೋಪವನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ

**2. "ನಮ್ಮ ಪುಸ್ತಕದಲ್ಲಿ ಗಾಂಧಿ ಮೇಲೆ ಒಂದು ಪಾಠವಿದೆಯಲ್ಲ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅಮೆರಿಕದ ಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ "ನೀವು ಗಾಂಧೀಜಿಯವರ ಹೆಸರು ಕೇಳಿರುವಿರಾ?" ಎಂದು ಪ್ರಶ್ನಿಸಿದ ಸಂದರ್ಭದಲ್ಲಿ ಆ ಶಾಲೆಯ ವಿದ್ಯಾರ್ಥಿಯೊಬ್ಬನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಅಮೆರಿಕದ ವಿದ್ಯಾರ್ಥಿಗಳಿಗೆ ಗಾಂಧೀಜಿಯವರ ಪರಿಚಯವಿತ್ತು ಎಂಬುದು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**3. "ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–**ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅಮೆರಿಕದ ಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ತಾವು ಧರಿಸಿದ್ದ ಖಾದಿಬಟ್ಟೆಯ ವೈಶಿಷ್ಟ್ಯವನ್ನು ಕುರಿತು ವಿವರಿಸುವ ಸಂದರ್ಭದಲ್ಲಿ ಗೊರೂರರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಯಂತ್ರದ ಸಹಾಯವಿಲ್ಲದೆ ತಯಾರಾಗುವ ಖಾದಿಬಟ್ಟೆಯ ವೈಶಿಷ್ಟ್ಯತೆಯು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

**4. "ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಗೊರೂರರವರು ತಮ್ಮ ಅಡುಗೆ ಮನೆಯ ವಿದ್ಯುತ್ ಒಲೆಯಲ್ಲಿ ಉಂಟಾದ ಸಮಸ್ಯೆಯನ್ನು ಪರಿಹರಿಸಲು ಶಾಲೆಯ ಉಪಾಧ್ಯಾಯರ ಸಹಾಯವನ್ನು ಕೇಳಿದ ಸಂದರ್ಭದಲ್ಲಿ ಉಪಾಧ್ಯಾಯರು ಶಾಲೆಯ ಒಬ್ಬ ಹುಡುಗನಿಗೆ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಸಂಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡಬೇಕೆಂಬಅಮೆರಿಕದ ಉಪಾಧ್ಯಾಯರ ಮನೋಧರ್ಮ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

**5. "ಕೈಯಿಂದ ಇದನ್ನು ಮಾಡುವುದು ಹೇಗೋ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಅಮೆರಿಕದ ಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರರು "ತಾವು ಧರಿಸಿದ್ದ ಖಾದಿಬಟ್ಟೆ ಪೂರ್ಣವಾಗಿ ಕೈಯಿಂದಲೇ ತಯಾರಾದದ್ದು ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಸೋಂಕು ಉಂಟಾಗಿಲ್ಲ" ಎಂದು ಹೇಳಿದ ಸಂದರ್ಭದಲ್ಲಿ ಉಪಾಧ್ಯಾಯರೊಬ್ಬರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಅಮೆರಿಕದ ಉಪಾಧ್ಯಾಯರ ಮನದಲ್ಲಿ ಉಂಟಾದ ಆಶ್ಚರ್ಯ ಹಾಗೂ ಅಪನಂಬಿಕೆಯು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

## ಗದ್ಯಪಾಠ – 3.

## ಜೀವನದೃಷ್ಟಿ. – ವಿನಾಯಕ ಕೃಷ್ಣ ಗೋಕಾಕ್.

**1. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು".**
**ಆಯ್ಕೆ:–** ಈ ವಾಕ್ಯವನ್ನು **'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರು ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಒಂದು ಹೆಚ್ಚಿನ ಸ್ಥಾನವಿದೆ ಎಂಬುದನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ:–** ತನ್ನಲ್ಲಿಯೂ ಪರರಲ್ಲಿಯೂ ಅಡಗಿರುವ ಆತ್ಮವು ಒಂದೇ ಎಂದು ಅರಿತಾಗ ಬದುಕು ಸುಖಮಯವಾಗುತ್ತದೆ ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**2. "ತನ್ನ ಗುಂಗಿನಲ್ಲಿದ್ದ ಈ ಅಂತರ್ಜೀವಿಗೆ ಪರರ ಹಂಗೆಲ್ಲಿ?"**
**ಆಯ್ಕೆ:–** ಈ ವಾಕ್ಯವನ್ನು **'ವಿನಾಯಕ,** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರು ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** ಅಂತರ್‌ಜೀವಿಯ ವ್ಯಕ್ತಿತ್ವವನ್ನು ವರ್ಣಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ:–** ಅಂತರ್‌ಜೀವಿಯು ಪರರ ಹಂಗಿಗೆ ಒಳಪಡದೆ ತನ್ನ ಅಂತರಂಗದ ಭವ್ಯತೆಯ ಕಡೆಗೆ ಹೆಚ್ಚು ಗಮನ ಹರಿಸುತ್ತಾನೆ ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

**3. "ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು".**
**ಆಯ್ಕೆ:–** ಈ ವಾಕ್ಯವನ್ನು **'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರು ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** ಸಮಾಜದಲ್ಲಿ ಕಲೋಪಾಸಕನ ಮಹತ್ತ್ವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಲೇಖಕರು ಒಬ್ಬ ಹಿರಿಯ ಸಾಹಿತಿಯ ಈ ಮಾತನ್ನು ಉದಾಹರಿಸುತ್ತಾರೆ.
**ಸ್ವಾರಸ್ಯ:–** ಕಲೋಪಾಸಕರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸಮಾಜದ ಆದ್ಯ ಕರ್ತವ್ಯ ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

**4. "ದಾತೃವಿನ ಮನವನ್ನು ಹತ್ತುಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು".**
**ಆಯ್ಕೆ:–** ಈ ವಾಕ್ಯವನ್ನು **'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರು ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** ಲೇಖಕರು ಸಾಧಕನ ಕರ್ತವ್ಯಗಳನ್ನು ಕುರಿತು ವಿವರಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ:–** ಸಾಧಕನು ದಾನವನ್ನು ಸ್ವೀಕರಿಸುವ ಮೊದಲು ದಾನಿಯ ಯೋಗ್ಯತೆಯನ್ನು ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು ಅಂದರೆಅಪಾತ್ರರಿಂದ ದಾನವನ್ನು ಸ್ವೀಕರಿಸಬಾರದು ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

**5. "ಜೀವನರಥಕ್ಕೆ ಒಗ್ಗಾಲಿಯ ಭೀತಿಯಿದೆ".**
**ಆಯ್ಕೆ:–** ಈ ವಾಕ್ಯವನ್ನು **'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರು ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** ವ್ಯಕ್ತಿಯ ಜೀವನದಲ್ಲಿ ಆಂತರಿಕ ದೃಷ್ಟಿಯ ಹಾಗು ಅನ್ಯರ ಹಿತದೃಷ್ಟಿ ಪ್ರಜ್ಞೆಯು ಸಮ್ಮಿಲನವಾಗಿರಬೇಕು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ:–** ವ್ಯಕ್ತಿಯಲ್ಲಿ ಸ್ವಾನುಭೂತಿ ಮಾತ್ರ ಇದ್ದರೆ ಸಾಲದು; ಸಹಾನುಭೂತಿಯೂ ಇರಬೇಕು. ಇವೆರಡು ಜೀವನರಥದ ಎರಡು ಗಾಲಿಗಳಿದ್ದಂತೆ ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

## ಗದ್ಯಪಾಠ – 4

**ಧರ್ಮಸಮದೃಷ್ಟಿ. – ಶಾಸನ (ಸಂಗ್ರಹ)**

**1. "ಪಾಷಂಡ ಸಾಗರ ಮಹಾಬಡವಾಮುಖಾಗ್ನಿಃ"**

**ಆಯ್ಕೆ :–**ಈ ವಾಕ್ಯವನ್ನು ಶ್ರೀ ಬಿ. ಎಂ.ಶ್ರೀ ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.

**ಸಂದರ್ಭ :–** ವಿಜಯನಗರ ಸಾಮ್ರಾಜ್ಯದ ರಾಜ ವೀರಬುಕ್ಕರಾಯನ ಕಾಲದ 'ಧರ್ಮಸಮದೃಷ್ಟಿ' ಶಾಸನದ ಪ್ರಾರಂಭದಲ್ಲಿ ಶ್ರೀರಾಮಾನುಜಾಚಾರ್ಯರನ್ನು ಸ್ಮರಿಸುವ ಸಂದರ್ಭದಲ್ಲಿ ಶಾಸನಕಾರನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಸಮುದ್ರ ಮಧ್ಯದಲ್ಲಿ ಬಡಬಾನಲ ಇರುವಂತೆ ನಾಸ್ತಿಕರ ನಡುವೆ ಶ್ರೀರಾಮಾನುಜಾಚಾರ್ಯರು ಆಸ್ತಿಕರಾಗಿ ಶೋಭಿಸುತ್ತಿದ್ದರು ಎಂಬುದನ್ನು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**2. "ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಟ್ಟು ಪಾಲಿಸುವರು"**

**ಆಯ್ಕೆ :–**ಈ ವಾಕ್ಯವನ್ನು ಶ್ರೀ ಬಿ. ಎಂ.ಶ್ರೀ ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.

**ಸಂದರ್ಭ :–** ರಾಜನಾದವೀರಬುಕ್ಕರಾಯನು ಶ್ರೀವೈಷ್ಣವರು ಹಾಗೂ ಜೈನರ ನಡುವೆ ಸಂಘರ್ಷವುಂಟಾದ ಸಮಯದಲ್ಲಿ ಸಭೆ ಕರೆದು, ಅವರ ಕೈಕೈ ಹಿಡಿಸಿ ಸಾಮರಸ್ಯದಿಂದ ಇರುವಂತೆ ಸೂಚಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಶ್ರೀವೈಷ್ಣವರು ಜೈನ ಬಸದಿಗಳನ್ನು ಗೌರವಿಸಬೇಕು ಎಂದು ಶಾಸನ ಬರೆಸಿರುವುದರಲ್ಲಿ ರಾಜನಾದ ವೀರಬುಕ್ಕರಾಯನ ಧರ್ಮಸಮದೃಷ್ಟಿಯನ್ನು ಕಾಣಬಹುದಾಗಿದೆ.

**3. "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು."**

**ಆಯ್ಕೆ :–**ಈ ವಾಕ್ಯವನ್ನು ಶ್ರೀ ಬಿ. ಎಂ.ಶ್ರೀ ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.

**ಸಂದರ್ಭ :–** ರಾಜನಾದ ವೀರಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಸೂಚಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿದು ಪುನಶ್ಚೇತನಗೊಳಿಸಬೇಕು ಎಂಬ ವಿಶಾಲ ಮನೋಭಾವನೆಯನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ.

**4. "ಈ ಮಾಡಿದ ಕಟ್ಟಳೆಯನು ಆವನೊಬ್ಬನು ಮೀರಿದವನು ರಾಜದ್ರೋಹಿಯಪ್ಪನು".**

**ಆಯ್ಕೆ :–**ಈ ವಾಕ್ಯವನ್ನು ಶ್ರೀ ಬಿ. ಎಂ.ಶ್ರೀ ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.

**ಸಂದರ್ಭ :–** ರಾಜನಾದವೀರಬುಕ್ಕರಾಯನು ಶ್ರೀವೈಷ್ಣವರು ಹಾಗೂ ಜೈನರ ನಡುವೆ ಸಂಘರ್ಷವುಂಟಾದ ಸಮಯದಲ್ಲಿ ಸಭೆ ಕರೆದು, ಅವರ ಕೈಕೈ ಹಿಡಿಸಿ ಸಾಮರಸ್ಯದಿಂದ ಇರುವಂತೆ ಸೂಚಿಸಿ ಶಾಸನ ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ರಾಜನು ಮಾಡಿದ ಶಾಸನವನ್ನು ಯಾರು ಮೀರಬಾರದು; ಮೀರಿದರೆ ಅವರಿಗೆ ರಾಜದ್ರೋಹಿಗೆ ಆಗುವ ಶಿಕ್ಷೆಯು ಆಗುತ್ತದೆ ಎಂಬ ಎಚ್ಚರಿಕೆಯನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ.

## ಗದ್ಯಪಾಠ – 5
## ಭಾಗ್ಯಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ– ಡಿ. ಎಸ್. ಜಯಪ್ಪ ಗೌಡ

**1. "ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–**ಪಂಡಿತ್ ಜವಾಹರಲಾಲ್ ನೆಹರು ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಪ್ರಧಾನ ಭಾಷಣ ಮಾಡಿದ ಸಂದರ್ಭದಲ್ಲಿ ಈ ಮಾತುಗಳನ್ನು ಹೇಳುತ್ತಾರೆ.

**ಸ್ವಾರಸ್ಯ :–** ವಿಶ್ವೇಶ್ವರಯ್ಯ ಅವರು 'ಮಾತಿಗಿಂತ ಕೃತಿ ಲೇಸು' ಎಂದು ತಿಳಿದು ಕಾರ್ಯ ಪ್ರವೃತ್ತರಾಗಿದ್ದರು ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**2. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–**ವಿಶ್ವೇಶ್ವರಯ್ಯ ಅವರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವತಃ ತಾವೇ ಅನ್ವೇಷಣೆ ಮಾಡಿದ ಸ್ವಯಂಚಾಲಿತ ಬಾಗಿಲುಗಳನ್ನು ಯಶಸ್ವಿಯಾಗಿ ಅಳವಡಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ವಿಶ್ವೇಶ್ವರಯ್ಯ ಅವರಲ್ಲಿದ್ದ ಬುದ್ಧಿಶಕ್ತಿ ಹಾಗೂ ಅನ್ವೇಷಣಾ ಸಾಮರ್ಥ್ಯವನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**3. "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–**ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ದಿವಾನರಾಗಿ ನೇಮಕಗೊಂಡ ವಿಶ್ವೇಶ್ವರಯ್ಯ ಅವರು ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದ ಸಂದರ್ಭದಲ್ಲಿ ಜನರು ಈ ರೀತಿ ಹಾಡಿ ಹೊಗಳುತ್ತಾರೆ.

**ಸ್ವಾರಸ್ಯ :–** ಮೈಸೂರು ಸಂಸ್ಥಾನದ ದಿವಾನರಾಗಿ ವಿಶ್ವೇಶ್ವರಯ್ಯ ಅವರು ಮಾಡಿದ ಕಾರ್ಯಗಳು ಅಭೂತಪೂರ್ವವಾದವುಗಳು ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**4. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–**ದಿವಾನರಾಗಿದ್ದವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದಲ್ಲಿ ಶಿಕ್ಷಣಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ವಿಶ್ವೇಶ್ವರಯ್ಯ ಅವರ ಈ ಮಾತನ್ನು ಉದಾಹರಿಸುತ್ತಾರೆ.

**ಸ್ವಾರಸ್ಯ :–** ನಾಡಿನ ಎಲ್ಲರಿಗೂ ಸಮಾನ ಶಿಕ್ಷಣ ಅವಕಾಶಗಳು ದೊರೆಯಬೇಕೆಂಬ ವಿಶ್ವೇಶ್ವರಯ್ಯ ಅವರ ಹಂಬಲ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**5. "ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ"**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–**ವಿಶ್ವೇಶ್ವರಯ್ಯಅವರು ಎಂಜನಿಯರುಗಳಿಗೆ **"**ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು**"** ಎಂದು ಹೇಳಿ ಮಾರ್ಗದರ್ಶನ ಮಾಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಪ್ರತಿನಿತ್ಯಹೊಸಹೊಸಮಾಹಿತಿ ಸಂಗ್ರಹ ಮಾಡುವುದರಿಂದ ವ್ಯಕ್ತಿಯ ಕಾರ್ಯಕ್ಷಮತೆ ಹೆಚ್ಚಾಗುತ್ತದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

## ಗದ್ಯಪಾಠ – 6.

**ಎದೆಗೆ ಬಿದ್ದ ಅಕ್ಷರ** **– ದೇವನೂರು ಮಹಾದೇವ**

**1. "ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?"**
**ಆಯ್ಕೆ :–**ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
**ಸಂದರ್ಭ :–** ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಜನ ಪ್ರಾರಂಭಿಸಿದ ಸಂದರ್ಭದಲ್ಲಿ ಒಬ್ಬನ ಮೈ ಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರಿಗೆ ಈ ಪ್ರಶ್ನೆಯನ್ನು ಕೇಳುತ್ತಾಳೆ.
**ಸ್ವಾರಸ್ಯ :–** ಸ್ವತಃ ತಮಗೆ ಮನೆ ಇಲ್ಲದಿದ್ದರೂ ದೇವರಿಗೆ ಮನೆ ಕಟ್ಟಲು ಹೊರಟ ಜನರ ಮುಗ್ಧತೆಯನ್ನು ಪ್ರಶ್ನಿಸುವ ಮೂಲಕ ಮಂಚಮ್ಮ ಕಾರುಣ್ಯ ಮತ್ತು ಸಮಾನತೆ ದೇವತೆಯಂತೆ ಕಾಣುವುದು ಈ ಮಾತಿನ ಸ್ವಾರಸ್ಯವಾಗಿದೆ.

**2. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."**
**ಆಯ್ಕೆ :–**ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
**ಸಂದರ್ಭ :–** ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಜನ ಪ್ರಾರಂಭಿಸಿದಾಗ, ಒಬ್ಬನ ಮೈ ಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರೊಡನೆ ಮಾತನಾಡುವ ಸಂದರ್ಭದಲ್ಲಿ ಈ ಮಾತನ್ನು ಗ್ರಾಮದೇವತೆ ಮಂಚಮ್ಮ ಜನರಿಗೆ ಹೇಳುತ್ತಾಳೆ.
**ಸ್ವಾರಸ್ಯ :–** ತನ್ನ ಭಕ್ತರಿಗೆ ಮನೆ ಇಲ್ಲದ ಮೇಲೆ ನನಗೂ ಮನೆ ಬೇಡ ಎಂಬ ಮಂಚಮ್ಮ ದೇವತೆಯ ಮಾತು ಕಾರುಣ್ಯ ಮತ್ತು ಸಮಾನತೆಯ ದ್ಯೋತಕವಾಗಿರುವುದು ಈ ಮಾತಿನ ಸ್ವಾರಸ್ಯವಾಗಿದೆ.

**3. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."**
**ಆಯ್ಕೆ :–**ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
**ಸಂದರ್ಭ :–** ಲೇಖಕರಾದ ದೇವನೂರು ಮಹಾದೇವ ಅವರು ಡಾ. ಅಶೋಕ ಪೈ ಅವರ ಒಂದು ಸಂಶೋಧನಾ ಸತ್ಯಕತೆಯನ್ನು ಉದಾಹರಣೆ ನೀಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :–** "ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ, ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೆ" ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**4. "ನಾವು ಮನುಷ್ಯರು."**
**ಆಯ್ಕೆ :–**ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
**ಸಂದರ್ಭ :–** ಲೇಖಕರಾದ ದೇವನೂರು ಮಹಾದೇವ ಅವರು "ಕೊಲೆ. ಸುಲಿಗೆ, ದ್ವೇಷ, ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನು ಘಾಸಿಗೊಳಿಸುತ್ತಿದೆ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :–** "ಜಾಗತೀಕರಣದ ಸಂದರ್ಭದಲ್ಲಿ ಮನುಷ್ಯರಾದ ನಾವು ನಮ್ಮೊಳಗೆ ಮೂರ್ಛಾವಸ್ಥೆಯಲ್ಲಿರುವ ಕಾರುಣ್ಯವನ್ನು ಎಚ್ಚರಗೊಳಿಸಬೇಕಾಗಿದೆ" ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**5. "ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ."**
**ಆಯ್ಕೆ :–**ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
**ಸಂದರ್ಭ :–** ಲೇಖಕರಾದ ದೇವನೂರು ಮಹಾದೇವ ಅವರು "ಕೊಲೆ. ಸುಲಿಗೆ, ದ್ವೇಷ, ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನು ಘಾಸಿಗೊಳಿಸುತ್ತಿದೆ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :–** ಸಮಷ್ಟಿ ಮನಸ್ಸಿನಲ್ಲಿ ಎಲ್ಲರೂ ಇರುವುದರಿಂದ ಕಾರುಣ್ಯ ಹಾಗೂ ಸರ್ವಸಮಾನತೆ ಮನೋಭಾವ ಮೂಡಿಸಿಕೊಂಡು ಬದುಕಬೇಕು ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

## ಗದ್ಯಪಾಠ – 7

**ವೃಕ್ಷಸಾಕ್ಷಿ – ದುರ್ಗಸಿಂಹ**

**1. "ಪೊನ್ನನೆಲ್ಲಮಂ ನೀನೆ ಕೊಂಡೆ"**

**ಆಯ್ಕೆ :–**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ ಮುಚ್ಚಿ, ತಾನೇ ಧರ್ಮಬುದ್ಧಿಯ ಹತ್ತಿರ ಬಂದು "ಖರ್ಚಿಗೆ ಹೊನ್ನು ಇಲ್ಲ, ಸ್ವಲ್ಪ ಹೊನ್ನನ್ನು ತೆಗೆದುಕೊಳ್ಳೋಣ ಬಾ" ಎಂದು ಜೊತೆಯಲ್ಲಿ ಕರೆದುಕೊಂಡು ಹೋಗಿ, ಹೂತಿಟ್ಟ ಸ್ಥಳದಲ್ಲಿ ಹೊನ್ನನ್ನು ಕಾಣದೆ ಇದ್ದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ದುಷ್ಟಬುದ್ಧಿಯುಇನ್ನುಮಾತನಾಡದಿದ್ದರೆ ಅಪವಾದವು ತನ್ನ ಮೇಲೆ ಬರುವುದೆಂದು, "ಹೊನ್ನೆಲ್ಲವನ್ನು ನೀನೆ ತೆಗೆದುಕೊಂಡಿದ್ದೀಯೆ" ಎಂದನು ಎಂದು ಕವಿ ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

**2. "ಈತನ ಮಾತು ಅಶ್ರುತಪೂರ್ವಮ್"**

**ಆಯ್ಕೆ :–**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ದುಷ್ಟಬುದ್ಧಿಯು "ಆ ಸ್ಥಳದಲ್ಲಿ ಹೊನ್ನನ್ನು ಇಡುವಾಗ ಈತ ಮತ್ತು ನಾನು ಅಲ್ಲದೆ ಬೇರೆ ಯಾರು ಮನುಷ್ಯರು ಇರಲಿಲ್ಲ. ಆ ಸ್ಥಳದಲ್ಲಿ ಇದ್ದ ಆಲದ ಮರವೇ ಸಾಕ್ಷಿ" ಎಂದ ಸಂದರ್ಭದಲ್ಲಿ ಧರ್ಮಾಧಿಕರಣರು ಆಶ್ಚರ್ಯಗೊಂಡು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಧರ್ಮಾಧಿಕರಣರು "ವೃಕ್ಷವು ಸಾಕ್ಷಿಯನ್ನು ಹೇಳುವುದುಎಂಬುದನ್ನು ಹಿಂದೆ ಎಂದೂ ಕೇಳಿಲ್ಲ"ಎಂದು ವಿಸ್ಮಯದಿಂದ ಹೇಳುವುದು ಬಹುಸ್ವಾರಸ್ಯಪೂರ್ಣವಾಗಿದೆ.

**3. "ನಿನ್ನ ಪಳುವಗೆ ನಮ್ಮ ಕುಲಮನೆಲ್ಲಮನಳಿವ ಬಗೆ"**

**ಆಯ್ಕೆ :–**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ, ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದ ಸಂದರ್ಭದಲ್ಲಿ ಅವನಿಗೆ ಬುದ್ಧಿಯನ್ನು ಹೇಳುತ್ತ ತಂದೆಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ದುಷ್ಟಬುದ್ಧಿಯನ್ನು ಕುರಿತು ಅವನ ತಂದೆಯು "ನಿನ್ನ ಕೆಟ್ಟತನ ನಮ್ಮ ಕುಲವನ್ನು ನಾಶಮಾಡುವ ರೀತಿಯದಾಗಿದೆ" ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

**4. "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"**

**ಆಯ್ಕೆ :–**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಮರದ ಪೊಟರೆಯೊಳಗೆ ಅಡಗಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿಯು ಮತಿಗೆಟ್ಟು, ಧರ್ಮದ ಹಾದಿಯನ್ನು ಬಿಟ್ಟು "ಧರ್ಮಬುದ್ಧಿಯೇ ಹೊನ್ನನ್ನು ತೆಗೆದುಕೊಂಡನೆಂದು" ನುಡಿದ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಪಾಪಕರ್ಮನಾದ ದುಷ್ಟಮಗನ ಮಾತನ್ನು ಕೇಳಿ ತಂದೆಯು ತೊಂದರೆಗೆ ಒಳಗಾದನು ಎಂಬುದನ್ನು 'ಪ್ರಕೃತಿ ವಿಕೃತಿಯಾದ ಮನುಷ್ಯನ ಆಯುಷ್ಯವು ಕಡಿಮೆಯಾಗುತ್ತದೆ' ಎಂಬ ಮಾತು ಸ್ವಾರಸ್ಯಪೂರ್ಣವಾಗಿ ವರ್ಣಿಸಲ್ಪಟ್ಟಿದೆ.

**5. ಹುಸಿಯದ ಬೇಹಾರಿಯೇ ಇಲ್ಲ"**

**ಆಯ್ಕೆ :–**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಧರ್ಮಬುದ್ಧಿಯು ಆಲದ ಮರದ ಬಳಿ ಬಂದು ನೋಡಿ, ಮರವನ್ನು ಸುತ್ತು ಹಾಕಿ, ದೊಡ್ಡದಾದ ಪೊಟರೆಯನ್ನು, ಮನುಷ್ಯ ಸಂಚಾರವಾಗಿರುವುದನ್ನು ಕಂಡು ನಿಶ್ಚಯಿಸಿದ ಸಂದರ್ಭದಲ್ಲಿ ಧರ್ಮಾಧಿಕಾರಿಗಳಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ವ್ಯಾಪಾರಿ ವೃತ್ತಿಧರ್ಮದಲ್ಲಿ ಧರ್ಮಬುದ್ಧಿಯು ಅಧರ್ಮಬುದ್ಧಿಯಾಗಿ ಸುಳ್ಳು ಹೇಳುವ ಮನಸ್ಸು ಉಂಟಾಗುತ್ತದೆ ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

## ಗದ್ಯಪಾಠ – 8.

**ವ್ಯಾಘ್ರಗೀತೆ** – ಎ. ಎನ್. ಮೂರ್ತಿರಾವ್

**1. "ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ"**

**ಆಯ್ಕೆ :–**ಈ ವಾಕ್ಯವನ್ನು ಶ್ರೀ **ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು, ಗೊಂದಲದಲ್ಲಿ ಇದ್ದ ಸಂದರ್ಭದಲ್ಲಿ ಪುಣ್ಯಕೋಟಿಯ ಈ ಮಾತನ್ನು ಲೇಖಕರು ನೆನಪಿಸಿಕೊಳ್ಳುತ್ತಾರೆ.

**ಸ್ವಾರಸ್ಯ :–** ತನ್ನನ್ನು ತಿನ್ನಲು ಆಹ್ವಾನ ಕೊಟ್ಟಾಗಲೂ ಹುಲಿರಾಯ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಪ್ರಾಣಬಿಟ್ಟು, ತನ್ನ ಆದರ್ಶವನ್ನು ಹಾಗೂ ಧರ್ಮಶ್ರದ್ಧೆಯನ್ನು ಮೆರೆಯಿತು ಎಂಬುದನ್ನು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**2. "ಸ್ವಧರ್ಮೇ ನಿಧನಂ ಶ್ರೇಯಃ"**

**ಆಯ್ಕೆ :–**ಈ ವಾಕ್ಯವನ್ನು ಶ್ರೀ **ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು, ಗೊಂದಲದಲ್ಲಿ ಇದ್ದ ಸಂದರ್ಭದಲ್ಲಿ ಹುಲಿಗೆ ಭಗವದ್ಗೀತೆಯ ಈ ಮಾತು ನೆನಪಿಗೆ ಬಂದಿತು.

**ಸ್ವಾರಸ್ಯ :.–**ಸದ್ವಂಶದಲ್ಲಿ ಜನಿಸಿದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಆಕ್ರಮಣ ಮಾಡದೆ ಭಗವದ್ಗೀತೆಯ ಈ ಮಾತನ್ನು ನೆನೆಯುವುದು ಸ್ವಾರಸ್ಯಪೂರ್ಣವಾಗಿದೆ.

**3. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು"**

**ಆಯ್ಕೆ :–**ಈ ವಾಕ್ಯವನ್ನು ಶ್ರೀ **ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಳ್ಳಲು, ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖದ ಮೇಲೆ ಎಸೆದು, ಮರದ ಕಡೆಗೆ ಓಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** 'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯಪೂರ್ಣವಾಗಿದೆ.

**4. "ನಾನು ಮುಖ ಮೇಲಾಗಿ ಬಿದ್ದಿದ್ದೇನೇ?"**

**ಆಯ್ಕೆ :–**ಈ ವಾಕ್ಯವನ್ನು ಶ್ರೀ **ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಶಾನುಭೋಗರು ಹುಲಿಯ ಆಕ್ರಮಣದಿಂದ ಹೆದರಿ, ಮರ ಹತ್ತಲು ಓಡುವಾಗ ಕಲ್ಲನ್ನು ಎಡವಿ ಬಿದ್ದು, ಪ್ರಜ್ಞೆ ತಪ್ಪಿದಾಗ, ಅದೇ ದಾರಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** **"**ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದುಕೊಂಡು ಹೋಗಲಿಲ್ಲ**?"** ಎಂಬ ಸಮಸ್ಯೆಗೆ ಶಾನುಭೋಗರು ಈ ಪ್ರಶ್ನೆಯ ಮೂಲಕ ಉತ್ತರ ಕಂಡುಕೊಳ್ಳುವುದು ಇಲ್ಲಿಯ ಸ್ವಾರಸ್ಯವಾಗಿದೆ.

**5. "ಹುಲಿ ಈಗ ಎಷ್ಟು ಹಸಿದಿರಬೇಕು"**

**ಆಯ್ಕೆ :–**ಈ ವಾಕ್ಯವನ್ನು ಶ್ರೀ **ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಂಡ ಶಾನುಭೋಗರು ಜೀವ ಸಹಿತ ಮನೆಗೆ ಬಂದು ರಸದೂಟವನ್ನು ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ನಾನು ಹುಲಿಯಿಂದ ತಪ್ಪಿಸಿಕೊಂಡು ಬಂದು ರಸದೂಟವನ್ನು ಮಾಡುತ್ತಿದ್ದೇನೆ ಆದರೆ ನನ್ನನ್ನು ಕೊಲ್ಲಲು ಬಂದ ಹುಲಿಯು ಕೊಲ್ಲಲಾಗದೆ ಹಸಿವಿನಿಂದ ಬಳಲುತ್ತಿರಬಹುದು ಎಂದು ಶಾನುಭೋಗರು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

## ಪದ್ಯಪಾಠ – 1.

**ಎಮ್ಮನುಡಿಗೇಳ್ – ಆದಿಕವಿ ಪಂಪ**

**1. "ಎನಗಂ ಪಾಂಡುಗಮಿಲ್ಲ ಭೇದಂ"**

**ಆಯ್ಕೆ :–**ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ದುರ್ಯೋಧನನು ತನ್ನ ಬಳಿಗೆ ಬಂದ ಮಾತಾಪಿತೃಗಳಿಗೆ (ಧೃತರಾಷ್ಟ್ರ ಮತ್ತು ಗಾಂಧಾರಿ) ವಿನಯದಿಂದ ನಮಸ್ಕರಿಸಿ ತಲೆಬಾಗಿದ ಸಂದರ್ಭದಲ್ಲಿ ದುರ್ಯೋಧನನಿಗೆ ಧೃತರಾಷ್ಟ್ರನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**ಧೃತರಾಷ್ಟ್ರನು ದುರ್ಯೋಧನನ್ನು ಕುರಿತು "ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ (ಭೇದವಿಲ್ಲ); ರಾಜ್ಯವನ್ನು ವಿಭಾಗ ಮಾಡಿ ಆಳೋಣ. ಸಂಧಿಯನ್ನು ಮಾಡೋಣ" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**2. "ಈ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ ಮುನಿವೈ"**

**ಆಯ್ಕೆ :–**ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ದುರ್ಯೋಧನನು ತನ್ನ ಬಳಿಗೆ ಬಂದ ಮಾತಾಪಿತೃಗಳಿಗೆ (ಧೃತರಾಷ್ಟ್ರ ಮತ್ತು ಗಾಂಧಾರಿ) ವಿನಯದಿಂದ ನಮಸ್ಕರಿಸಿ ತಲೆಬಾಗಿದ ಸಂದರ್ಭದಲ್ಲಿ ದುರ್ಯೋಧನನಿಗೆ ಧೃತರಾಷ್ಟ್ರನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಧೃತರಾಷ್ಟ್ರನು ದುರ್ಯೋಧನನ್ನು ಕುರಿತು "ರಾಜ್ಯವನ್ನು ವಿಭಾಗ ಮಾಡಿ ಆಳೋಣ. ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವವರೇ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೆ" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**3. "ಪಗೆಗೆ ಕಣೆಯೊಂದುಂಟೇ"**

**ಆಯ್ಕೆ :–**ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :**ಧೃತರಾಷ್ಟ್ರನು ದುರ್ಯೋಧನನಿಗೆ "ಪಾಂಡವರೊಡನೆ ಸಂಧಿ ಮಾಡಿಕೊಳ್ಳೋಣ ಯುದ್ಧ ಮಾಡುವುದು ಬೇಡ" ಎಂದು ಬುದ್ಧಿವಾದವನ್ನು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಧೃತರಾಷ್ಟ್ರನು ದುರ್ಯೋಧನನ್ನು ಕುರಿತು "ಮಗನೇ, ದ್ವೇಷಕ್ಕೆ ಒಂದು ಸ್ಥಳ; ಬಾಂಧವ್ಯಕ್ಕೆ ಒಂದು ಸ್ಥಳ ಎಂದು ಇದೆಯೇ? ಆಲೋಚನೆ ಮಾಡು" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**4. "ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ"**

**ಆಯ್ಕೆ :–**ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಧೃತರಾಷ್ಟ್ರನು ದುರ್ಯೋಧನನಿಗೆ "ಪಾಂಡವರೊಡನೆ ಸಂಧಿ ಮಾಡಿಕೊಳ್ಳೋಣ ಯುದ್ಧ ಮಾಡುವುದು ಬೇಡ" ಎಂದು ಬುದ್ಧಿವಾದವನ್ನು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಧೃತರಾಷ್ಟ್ರನು ದುರ್ಯೋಧನನ್ನು ಕುರಿತು "ರಾಜರುಗಳಿಗೆ ಹಗೆತನವೂ ಬಾಂಧವ್ಯವೂ ಮಾಡಿದ ಕಾರ್ಯದಿಂದ ಉಂಟಾಗುತ್ತವೆ ಎಂದು ಪ್ರಸಿದ್ಧವಾದ ದಂಡನೀತಿಶಾಸ್ತ್ರದಲ್ಲಿ ಹೇಳಿಲ್ಲವೇ?" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**5. "ಪಗಲೆನಿತಾನುಂ ದೀವಿಗೆಗಳುರಿದೊಡೇಮ್."**

**ಆಯ್ಕೆ :–**ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಧೃತರಾಷ್ಟ್ರನು ದುರ್ಯೋಧನನಿಗೆ "ಪಾಂಡವರೊಡನೆ ಸಂಧಿ ಮಾಡಿಕೊಳ್ಳೋಣ ಯುದ್ಧ ಮಾಡುವುದು ಬೇಡ" ಎಂದು ಬುದ್ಧಿವಾದವನ್ನು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ಮಗನೇ, ನಮಗೆ ನೀನು ಇದ್ದ ಪಕ್ಷದಲ್ಲಿ ಎಲ್ಲರೂ ಇರುವರು. ಮನದಲ್ಲಿ ದುಃಖವೇನೂ ಇಲ್ಲ. ಅದು ಹೇಗೆಂದರೆ ಹಗಲಿನಲ್ಲಿ ಸೂರ್ಯನೇ ಸಾಲದೆ; ಎಷ್ಟು ದೀಪಗಳು ಉರಿದರೇನು?ಆರಿ ಹೋದರೇನು?"ಎಂದುಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**6. "ಪೆರ್ಮರನುಳಿವಂತೆ ನೀನುಳಿದೆ"**

**ಆಯ್ಕೆ :–**ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಧೃತರಾಷ್ಟ್ರನು ದುರ್ಯೋಧನನಿಗೆ **"**ಪಾಂಡವರೊಡನೆ ಸಂಧಿ ಮಾಡಿಕೊಳ್ಳೋಣ ಯುದ್ಧ ಮಾಡುವುದು ಬೇಡ**"** ಎಂದು ಬುದ್ಧಿವಾದವನ್ನು ಹೇಳುವ ಸಂದರ್ಭದಲ್ಲಿ ಧೃತರಾಷ್ಟ್ರನ ಆ ಮಾತಿಗೆ ಬೆಂಬಲವಾಗಿ ಗಾಂಧಾರಿಯು ಈ ಮಾತನ್ನು ಹೇಳುತ್ತಾಳೆ.
**ಸ್ವಾರಸ್ಯ :–** ಗಾಂಧಾರಿಯು ದುರ್ಯೋಧನನ್ನು ಕುರಿತು **"**ಕುರುವಂಶವೆಂಬ ತೋಟವು ಭೀಮನೆಂಬ ಮದದಿಂದ ಕುರುಡಾಗಿ ಸೊಕ್ಕೇರಿದ ಆನೆಯು, ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು; ಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದೆ**"** ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾಳೆ.

## ಪದ್ಯಪಾಠ – 2
## ಹಕ್ಕಿ ಹಾರುತಿದೆ ನೋಡಿದಿರಾ – ದ. ರಾ. ಬೇಂದ್ರೆ

**1. "ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ"**
**ಆಯ್ಕೆ :–**ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :–** ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಯಿಸಿ, ಅವುಗಳ ಫಲಿತವನ್ನು ಕೊಯ್ಲು ಮಾಡಿದೆ ಎಂಬ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :–** ಕಾಲಪಕ್ಷಿಯು ಅನೇಕ ಸಾಮ್ರಾಜ್ಯದ ಏಳುಬೀಳುಗಳಿಗೆ ಸಾಕ್ಷಿಯಾಗಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.
**2. "ಸಾರ್ವಭೌಮರ ನೆತ್ತಿಯ ಕುಕ್ಕಿ"**
**ಆಯ್ಕೆ :–**ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :–** ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂಬ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :–** ಕಾಲದ ಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.
**3. ಮನ್ವಂತರಗಳ ಭಾಗ್ಯವ ತೆರೆಸಿ"**
**ಆಯ್ಕೆ :–**ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :–** ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ ಎಂಬ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :–** ಕಾಲಪಕ್ಷಿಯು ಪ್ರಪಂಚದ ಹೊಸ ಪರಿವರ್ತನೆಗೆ / ಪ್ರಗತಿಗೆ ಕಾರಣೀಭೂತವಾಗಿದೆಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.
**4. "ಹೊಸಗಾಲದ ಹಸುಮಕ್ಕಳ ಹರಸಿ"**
**ಆಯ್ಕೆ :–**ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :–** ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂಬ ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :–** ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುತ್ತಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

## ಪದ್ಯಪಾಠ – 3.

**ಹಲಗಲಿ ಬೇಡರು** **– ಜಾನಪದ (ಸಂಗ್ರಹ)**

**1. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"**

**ಆಯ್ಕೆ :–**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :–** "ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಭಾರತೀಯರ ಮೇಲಿನ ಬ್ರಿಟಿಷರ ದರ್ಪ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**2. "ಜೀವ ಸತ್ತು ಹೋಗುವುದು ಗೊತ್ತ"**

**ಆಯ್ಕೆ :–**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :–** ಬ್ರಿಟಿಷರು ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಹಲಗಲಿಯ ಬೇಡರು"ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು" ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**3. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"**

**ಆಯ್ಕೆ :–**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :–** ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದು, ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು ಎಂದು ಲಾವಣಿಕಾರನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**4. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"**

**ಆಯ್ಕೆ :–**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :–** ಬ್ರಿಟಿಷ್ ಸೈನಿಕರು ಹಲಗಲಿಯನ್ನು ಲೂಟಿಮಾಡಿ, ಬೆಂಕಿ ಹಚ್ಚಿ ನಾಶಗೊಳಿಸಿದರು ಎಂದು ಲಾವಣಿಕಾರನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ :– "ಹಲಗಲಿಯ ಬೇಡರ ಮೇಲಿನ ಬ್ರಿಟಿಷರ ದೌರ್ಜನ್ಯವು ವರ್ಣಿಸಲು ಅಸಾಧ್ಯವಾದುದು" ಎಂದು ಲಾವಣಿಕಾರನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾನೆ.

## ಪದ್ಯಪಾಠ – 4.

**ವಚನ ಸೌರಭ** **– ಜೇಡರ ದಾಸಿಮಯ್ಯ, ಬಸವಣ್ಣ**

**1. "ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ ಅದು ನಟ್ಟಡವಿ"**

**ಆಯ್ಕೆ :–**ಈ ವಾಕ್ಯವನ್ನು **ಫ. ಗು. ಹಳಕಟ್ಟಿ** ಅವರು ಸಂಪಾದಿಸಿರುವ **'ದಾಸಿಮಯ್ಯನ ವಚನಗಳು'** ಕೃತಿಯಿಂದ ಆಯ್ದ **'ವಚನ ಸೌರಭ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ನಿಷ್ಠನಾದ ಭಕ್ತ ದಟ್ಟವಾದ ಅರಣ್ಯದಲ್ಲಿ ಇದ್ದರೂ ಅದು ಅವನಿಗೆ ಪಟ್ಟಣ ಎನಿಸುವುದು. ನಿಷ್ಠೆಯಿಲ್ಲದೆ ಭಕ್ತ ನಗರವಾಸಿಯಾದರೂ ಅವನಿಗೆ ಅದು ದಟ್ಟಡವಿಯೇ ಎಂದು ಜೇಡರ ದಾಸಿಮಯ್ಯ ಅವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** 'ದೇವರಲ್ಲಿ ನಿಷ್ಠೆ ಅತ್ಯವಶ್ಯಕವಾದುದು' ಎಂಬುದನ್ನು ಜೇಡರ ದಾಸಿಮಯ್ಯ ಅವರು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾರೆ.

**2. "ಸುಡು! ಸುಡು! ಮನವಿದು ವಿಷಯಕ್ಕೆ ಹರಿವುದು"**

**ಆಯ್ಕೆ :–**ಈ ವಾಕ್ಯವನ್ನು ಸಂ. ಶಿ. ಭೂಸನೂರು ಮಠ ಅವರು ಸಂಪಾದಿಸಿರುವ **'ವಚನ ಸಾಹಿತ್ಯ ಸಂಗ್ರಹ'**ಕೃತಿಯಿಂದ ಆಯ್ದ **'ವಚನ ಸೌರಭ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** "ಪಲ್ಲಕ್ಕಿಯನ್ನು ಏರಿದ ನಾಯಿ ಹೊಲಸು ಕಂಡಾಗ ತನ್ನ ಸ್ವಭಾವದಂತೆ ಆ ಕಡೆಗೆ ಓಡುತ್ತದೆ. ಅದೇ ರೀತಿ ಚಂಚಲ ಮನಸ್ಸು ವಿಷಯ ಸುಖದ ಕಡೆಗೆ ವಾಲುತ್ತದೆ.ದೇವರನ್ನು ನೆನೆಯಲು ಬಿಡುವುದಿಲ್ಲ" ಎಂದು ಬಸವಣ್ಣನವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** "ಮಾನವನ ಮನಸ್ಸು ಯಾವಾಗಲೂ ವಿಷಯ ಸುಖದ ಕಡೆಗೆ ಹರಿಯುತ್ತದೆ' ಎಂಬುದನ್ನು ಈ ಮಾತಿನಲ್ಲಿ ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**3. "ಹಲವು ಕೊಂಬೆಗೆ ಹಾಯುತಲಿದೆ."**

**ಆಯ್ಕೆ :–**ಈ ವಾಕ್ಯವನ್ನು ಸಂ. ಶಿ. ಭೂಸನೂರು ಮಠ ಅವರು ಸಂಪಾದಿಸಿರುವ **'ವಚನ ಸಾಹಿತ್ಯ ಸಂಗ್ರಹ'**ಕೃತಿಯಿಂದ ಆಯ್ದ **'ವಚನ ಸೌರಭ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** "ಮರ್ಕಟವು ಮರ ಹತ್ತಿ ಹಲವು ಕೊಂಬೆಗಳಿಗೆ ನೆಗೆಯುವಂತೆ ಬೆಂದ ಮನವು ಚಂಚಲವಾಗಿರುತ್ತದೆ. ಹೀಗಾದಾಗ ಮನಸ್ಸು ದೇವರೆಡೆಗೆ ತಿರುಗಲು ಸಾಧ್ಯವಿಲ್ಲ" ಎಂದು ಬಸವಣ್ಣನವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** 'ಮಾನವನ ಮನಸ್ಸು ಮಂಗನಂತೆ ಚಂಚಲವಾದುದು' ಎಂಬುದನ್ನು ಈ ಮಾತಿನಲ್ಲಿ ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**4. "ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು."**

**ಆಯ್ಕೆ :–**ಈ ವಾಕ್ಯವನ್ನು ಸಂ. ಶಿ. ಭೂಸನೂರು ಮಠ ಅವರು ಸಂಪಾದಿಸಿರುವ **'ವಚನ ಸಾಹಿತ್ಯ ಸಂಗ್ರಹ'**ಕೃತಿಯಿಂದ ಆಯ್ದ **'ವಚನ ಸೌರಭ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** ಮಾತು ಮುತ್ತಾಗಬೇಕು, ಸ್ಫಟಿಕದ ಸಲಾಕೆಯಾಗಬೇಕು, ದೇವರು ಮೆಚ್ಚುವಂತೆ ಇರಬೇಕು ಎಂದು ಬಸವಣ್ಣ ಅವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :–** 'ಮಾತು ಹಿತವಾಗಿರಬೇಕು'ಎಂಬುದನ್ನು ಈ ಮಾತಿನಲ್ಲಿ ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

## ಪದ್ಯಪಾಠ – 5.

## ಸಂಕಲ್ಪ ಗೀತೆ – ಜಿ. ಎಸ್. ಶಿವರುದ್ರಪ್ಪ

**1. "ಪ್ರೀತಿಯ ಹಣತೆಯ ಹಚ್ಚೋಣ"**

**ಆಯ್ಕೆ :–**ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :–** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು" ಎಂದು ಕವಿಗಳು**ಸ್ವಾರಸ್ಯಪೂರ್ಣ**ವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**2. "ಮುಂಗಾರಿನ ಮಳೆಯಾಗೋಣ"**

**ಆಯ್ಕೆ :–**ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :–** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು" ಎಂದು ಕವಿಗಳು**ಸ್ವಾರಸ್ಯಪೂರ್ಣ**ವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**3. "ಹೊಸ ಭರವಸೆಗಳ ಕಟ್ಟೋಣ"**

**ಆಯ್ಕೆ :–**ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :–** ಕವಿಗಳು **"ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು"** ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು"ಎಂದು ಕವಿಗಳು**ಸ್ವಾರಸ್ಯ**ಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**4. "ಹೊಸ ಎಚ್ಚರದೊಳು ಬದುಕೋಣ"**

**ಆಯ್ಕೆ :–**ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :–** ಕವಿಗಳು **"ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು"** ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** "ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು"ಎಂದು ಕವಿಗಳು**ಸ್ವಾರಸ್ಯ**ಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

## ಪದ್ಯಪಾಠ – 6.

## ಕೌರವೇಂದ್ರನ ಕೊಂದೆ ನೀನು – ಕುಮಾರ ವ್ಯಾಸ

**1. "ರವಿಸುತನ ಕಿವಿಯಲಿ ಬಿತ್ತಿದನು ಭಯವ"**

**ಆಯ್ಕೆ :–**ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ :–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.

**ಸ್ವಾರಸ್ಯ :–** "ಕರ್ಣ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ. ರಾಜ ನೀನು, ಮನದಲ್ಲಿ ನಡೆದುದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು ಎಂದು ಕವಿಯು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

**2. "ಬಾಯ್ದಂಬುಲಕೆ ಕೈಯಾನುವರೆ"**

**ಆಯ್ಕೆ :–**ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ :–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :–** "ಕರ್ಣ ನೀನು ಹಸ್ತಿನಾಪುರದ ರಾಜನಾದರೆ ನಿನಗೆ ಕೌರವರು ಮತ್ತು ಪಾಂಡವರು ಸೇವೆಯನ್ನು ಮಾಡುವರು ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ" ಎಂದು ಕೃಷ್ಣನು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

**3. "ಜೀಯ ಹಸಾದವೆಂಬುದು ಕಷ್ಟ"**

**ಆಯ್ಕೆ :–**ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ :–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :–** "ಕರ್ಣ ನಿನ್ನಎಡಗಡೆ ಕೌರವರು, ಬಲಗಡೆ ಪಾಂಡವರು, ಎದುರಿನಲ್ಲಿ ಮಾದ್ರ ಮಾಗಧ ಯಾದವಾದಿಗಳು ಇರುವಾಗ, ನೀನು ಓಲಗದಲ್ಲಿ ವಿಲಾಸದಿಂದ ಮೆರೆಯುವುದನ್ನು ಬಿಟ್ಟು, ಕೌರವನಿಗೆ ಜೀಯ ಹಸಾದವೆಂಬುದು ಕಷ್ಟವಾಗುವುದಿಲ್ಲವೇ?"ಎಂದು ಕೃಷ್ಣನು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**4. "ನಿನ್ನಪದೆಸೆಯ ಬಯಸುವನಲ್ಲ"**

**ಆಯ್ಕೆ :–**ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ :–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.
**ಸ್ವಾರಸ್ಯ :–** ತನ್ನಜನ್ಮ ರಹಸ್ಯವನ್ನು ಅರಿತು ಕರ್ಣನು ಮನದಲ್ಲಿ ಚಿಂತಿತನಾಗಿ ಮೌನವಾದಾಗ, ಕೃಷ್ಣನು ಈ ಮಾತನ್ನು ಹೇಳುವುದರ ಮೂಲಕ ಕರ್ಣನನ್ನು ಸಮಾಧಾನಪಡಿಸಿದ್ದು ಸ್ವಾರಸ್ಯಪೂರ್ಣವಾಗಿದೆ.
**5. "ಮಾರಿಗೌತಣವಾಯ್ತು ನಾಳಿನ ಭಾರತವು"**
**ಆಯ್ಕೆ :–**ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**
**ಸಂದರ್ಭ :–** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು, ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.
**ಸ್ವಾರಸ್ಯ :–** ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರ ಯುದ್ಧದ ಭೀಕರತೆಯನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

## ಪದ್ಯಪಾಠ – 7.

**ವೀರಲವ** **– ಲಕ್ಷ್ಮೀಶ**

**1. "ರಘೂದ್ವಹನ ಸೊಲ್ಗೇಳಿ ನಮಿಸಲ್"**
**ಆಯ್ಕೆ:–**ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** ಶ್ರೀರಾಮನ ಅಶ್ವಮೇಧ ಯಾಗದ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ರಾಜರುಗಳಿಂದ ಅದಕ್ಕೆ ದೊರೆತ ಭವ್ಯ ಸ್ವಾಗತ ಹಾಗೂ ನೀಡಿದ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ:–** ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟರು ಎಂದು ವರ್ಣಿಸಿರುವುದು ಸ್ವಾರಸ್ಯಪೂರ್ಣವಾಗಿದೆ.
**2. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"**
**ಆಯ್ಕೆ:–**ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** ಲವನು ತನ್ನ ಆಶ್ರಮದ ತೋಟವನ್ನು ಧ್ವಂಸ ಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರಹವನ್ನು ಓದಿ ಅದನ್ನು ಕಟ್ಟಿಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ:–** ಕ್ಷತ್ರಿಯನಾದ ವೀರಲವನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ, ತನ್ನ ವೀರತ್ವವನ್ನು ಪ್ರದರ್ಶಿಸುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.
**3. "ಅರಸುಗಳ ವಾಜಿಯಂ ಬಿಡು"**
**ಆಯ್ಕೆ:–**ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿಹಾಕಿದ ಸಂದರ್ಭದಲ್ಲಿ ಮುನಿಪುತ್ರರು ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ:–** ರಾಜನ ಯಜ್ಞಾಶ್ವವನ್ನು ಕಟ್ಟಿಹಾಕುವುದು ಅಪರಾಧ ಅದರಿಂದ ಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿಪುತ್ರರು ಭಯಗೊಳ್ಳುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.
**4. "ಜಾನಕಿಯ ಮಗನಿದಕೆ ಬೆದರುವನೆ"**
**ಆಯ್ಕೆ:–**ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಮುನಿಪುತ್ರರು ಕುದುರೆಯನ್ನು ಬಿಡು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಲವನು ಹೇಳುತ್ತಾನೆ.
**ಸ್ವಾರಸ್ಯ:–** ಸೀತೆಯ ಮಗನಾದ ಲವನ ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

## ಪದ್ಯಪಾಠ – 8.

**ಸಂಕಟಕೆ ಗಡಿ ಇಲ್ಲ** **– ದುರ್ಗಪ್ಪ ಸರಸ್ವತಿ**

**1. “ಗೆರೆ ಎಳೆದು ‘ಗಡಿ’ ಎಂದ”**

**ಆಯ್ಕೆ :–**ಈ ವಾಕ್ಯವನ್ನು **ಶ್ರೀಮತಿ ದು. ಸರಸ್ವತಿ** ಅವರು ರಚಿಸಿರುವ **‘ಹೆಣೆದರೆ ಜೇಡನಂತೆ’** ಕೃತಿಯಿಂದ ಆಯ್ದ **‘ಸಂಕಟಕೆ ಗಡಿ ಇಲ್ಲ’** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** “ಮಾನವನು ಭೂಮಿಯ ಮಾಲೀಕನಾದೆನೆಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡನು” ಎಂದು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** “ಎಲ್ಲ ಪ್ರಾಣಿಗಳಿಗೂ ಸಮಾನವಾಗಿ ಸೇರಬೇಕಾದ ಭೂಮಿಯ ಮೇಲೆ ಮಾನವನು ಅಹಂಕಾರದಿಂದ ಗೆರೆ ಎಳೆದು ಗಡಿ ನಿರ್ಮಿಸಿ ಅಸಮಾನತೆಗೆ ಕಾರಣನಾಗಿದ್ದಾನೆ” ಎಂಬುದನ್ನು ಕವಿಗಳು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**2. “ಜೀವಗಳು ಶವವಾದವು”**

**ಆಯ್ಕೆ :–**ಈ ವಾಕ್ಯವನ್ನು **ಶ್ರೀಮತಿ ದು. ಸರಸ್ವತಿ** ಅವರು ರಚಿಸಿರುವ **‘ಹೆಣೆದರೆ ಜೇಡನಂತೆ’** ಕೃತಿಯಿಂದ ಆಯ್ದ **‘ಸಂಕಟಕೆ ಗಡಿ ಇಲ್ಲ’** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** “ಮಾನವನು ಭೂಮಿಯ ಮಾಲೀಕನಾದೆನೆಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನುನಿರ್ಮಿಸಿಕೊಂಡು, ಅದರ ರಕ್ಷಣೆಗಾಗಿ ಯುದ್ಧ ಮಾಡುತ್ತಿದ್ದಾನೆ” ಎಂದು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** “ಮಾನವನು ತಾನೇ ಅಹಂಕಾರದಿಂದ ನಿರ್ಮಿಸಿಕೊಂಡ ಗಡಿಯ ರಕ್ಷಣೆಯ ನೆಪದಲ್ಲಿ ಯುದ್ಧ ಮಾಡಿದ್ದರಿಂದ ನಿರಪರಾಧಿಗಳು ಪ್ರಾಣ ಕಳೆದುಕೊಂಡರು” ಎಂಬುದನ್ನು ಕವಿಗಳು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**3. “ಗಡಿಯ ‘ಮ್ಯಾಜಿಕ್’ನಿಂದ ಜೀವತೆತ್ತವರು”**

**ಆಯ್ಕೆ :–**ಈ ವಾಕ್ಯವನ್ನು **ಶ್ರೀಮತಿ ದು. ಸರಸ್ವತಿ** ಅವರು ರಚಿಸಿರುವ **‘ಹೆಣೆದರೆ ಜೇಡನಂತೆ’** ಕೃತಿಯಿಂದ ಆಯ್ದ **‘ಸಂಕಟಕೆ ಗಡಿ ಇಲ್ಲ’** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** “ಮಾನವನು ತಾನೇ ಅಹಂಕಾರದಿಂದ ನಿರ್ಮಿಸಿಕೊಂಡ ಗಡಿಯ ರಕ್ಷಣೆಯ ನೆಪದಲ್ಲಿ ಯುದ್ಧ ಮಾಡಿದ್ದರಿಂದ ನಿರಪರಾಧಿಗಳು ಪ್ರಾಣ ಕಳೆದುಕೊಂಡರು” ಎಂದು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** “ಗಡಿಯ ರಕ್ಷಣೆಗಾಗಿ ಪ್ರಾಣಕೊಟ್ಟವರು ವೀರಮರಣ ಹೊಂದಿದರು; ಆದರೆ ಜೀವ ತೆಗೆದವರು ವೀರಯೋಧರಾದರು ಎನ್ನುವುದು ಒಂದು ಮ್ಯಾಜಿಕ್”ಎಂಬುದನ್ನು ಕವಿಗಳು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**4. “ಗಡಿಯೂ ಇಲ್ಲ ಆಚೆ ಈಚೆಯೂ ಇಲ್ಲ”**

**ಆಯ್ಕೆ :–**ಈ ವಾಕ್ಯವನ್ನು **ಶ್ರೀಮತಿ ದು. ಸರಸ್ವತಿ** ಅವರು ರಚಿಸಿರುವ **‘ಹೆಣೆದರೆ ಜೇಡನಂತೆ’** ಕೃತಿಯಿಂದ ಆಯ್ದ **‘ಸಂಕಟಕೆ ಗಡಿ ಇಲ್ಲ’** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–** “ಮಾನವನು ಗರ್ವಪಟ್ಟು ತಾನು ನಿರ್ಮಿಸಿಕೊಂಡ ಗಡಿಯ ರಕ್ಷಣೆಗಾಗಿ ಯುದ್ಧ ಮಾಡಿದ್ದರಿಂದ ಗಡಿ ಆಚೆ – ಈಚೆ ಅನೇಕ ಜೀವಗಳು ಹೋರಾಡಿ ಶವವಾದವು” ಎಂದು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** “ಗಡಿಯ ಎರಡು ಕಡೆಯವರು ಅನುಭವಿಸುವ ಒಡಲಿನ ನೋವು, ಸಂಕಟ ಒಂದೇ ತೆರನಾದುದು. ಆದ್ದರಿಂದ ಸಂಕಟಕೆ ಗಡಿ ಇಲ್ಲ” ಎಂಬುದನ್ನು ಕವಿಗಳು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

## ಕೊಟ್ಟಿರುವ ಪ್ರತಿಪ್ರಶ್ನೆಗೂ ಎಂಟು / ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.

### ಗದ್ಯಪಾಠ – 1
**ಶಬರಿ – ಪು. ತಿ. ನರಸಿಂಹಾಚಾರ್**

**1. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.**
ರಾಮಲಕ್ಷ್ಮಣರನ್ನು ಕಂಡು ಶಬರಿ ಹಿಗ್ಗಿ, ಸಂತಸವನ್ನು ತುಂಬಿಕೊಳ್ಳುತ್ತಾಳೆ.ರಾಮಲಕ್ಷ್ಮಣರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ.ರಾಮನನ್ನು ಕಂಡ ತಾನು ಪರಮಸುಖಿಯೆಂದು ನರ್ತಿಸುತ್ತಾಳೆ.ರಾಮನೂ ಕೂಡ "ನಿನ್ನ ಆದರದಿಂದ ನಾವು ಸುಖಿ, ನಿನಗೆ ನಾವು ಋಣಿ" ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು "ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು ತೃಷೆ ಹಿಂಗಿತೇ?ನಾನೊಬ್ಬಳು ಬಡವಿ, ನನ್ನ ಮೇಲೆ ಮರುಕ ತೋರಿದಿರಾ?"ಎನ್ನುತ್ತಾಳೆ.ಶ್ರೀರಾಮನು "ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ, ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ, ನಿನ್ನ ಮನೆಯೇ ನಮ್ಮ ಮನೆ, ನೀನೇ ತಾಯಿಯಂತೆ" ಎನ್ನುತ್ತಾನೆ. ಶಬರಿಯು "ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ.ನಾನು ಧನ್ಯಳಾದೆ ಸಿದ್ಧಮಾತಂಗರ ವರ ನನಗೆ ಫಲಿಸಿತು.ನಿಮ್ಮನ್ನು ಕಂಡು ಪುಣ್ಯವು ತುಂಬಿತು.ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು.ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು" ಎನ್ನುತ್ತಾಳೆ.ಶ್ರೀರಾಮನು ಗುರುಗಳ ಮಹಿಮೆಯನ್ನು ಬಲ್ಲೆನೆಂದು ಹೇಳುತ್ತ."ದುಃಖವನ್ನು ಮರೆಸಿ, ಶಾಂತಿ ನೀಡುವ ಈ ವನದಲ್ಲಿ ಶುದ್ಧಪ್ರೇಮಮೂರ್ತಿ ನೀನು ಇದ್ದೀಯೆ.ಈ ದಿನ ನಮಗೆ ಸುದಿನ" ಎಂದು ಶಬರಿಯನ್ನು ಬಾಯಿತುಂಬ ಹೊಗಳುತ್ತಾನೆ.

**2. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ? ತಿಳಿಸಿ.**
ರಾಮನು ಬಂದು ತನ್ನ ಆಶ್ರಮದಲ್ಲಿ ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯಪಟ್ಟಳು.ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ, ಪಾದಕ್ಕೆ ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು.ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು.ಸಿದ್ಧತೆಯೇ ಇಲ್ಲವಲ್ಲ ಎಂದು ಹಂಬಲಿಸಿದಳು.ಮನಸ್ಸಿನ ಬಯಕೆಯಂತೆ ಬಗೆಬಗೆಯ ಕಂಪು ಇರುವ ವನಮಾಲೆಯನ್ನು ರಾಮನ ಕೊರಳಿಗೆ ಇಟ್ಟು ಹಿಗ್ಗಿದಳು.ಜಗತ್ತಿನಲ್ಲಿ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತ, ನಿಮಗಾಗಿ ತಂದಿದ್ದೇನೆಂದು ತಿಳಿಸಿ ರಾಮನ ಕೈಗೆ ಇತ್ತಳು. ಶಬರಿಯ ಸೇವೆಯಿಂದ ರಾಮನು ಸುಪ್ರಸನ್ನನಾದನು.ರಾಮಲಕ್ಷ್ಮಣರು ಧನ್ಯತಾಭಾವದಿಂದ ಮಂದಹಾಸ ಬೀರಿದರು.ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

**3. 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ.**
ಶಬರಿ ಮಾತಂಗ ಋಷಿಯ ಆಶ್ರಮದಲ್ಲಿ ಇರುತ್ತಾಳೆ.ಸಿದ್ಧರಾದ ಮಾತಂಗ ಋಷಿಗಳು ಶಬರಿಯ ಮನದಾಸೆಯನ್ನು ತಿಳಿದವರಾಗಿದ್ದು, "ರಾಮಲಕ್ಷ್ಮಣರು ಆಶ್ರಮಕ್ಕೆ ಬಂದೇ ಬರುತ್ತಾರೆ.ನಿನ್ನಿಷ್ಟಾರ್ಥ ನೆರವೇರುತ್ತದೆ" ಎಂದಿದ್ದರು.ಅವರ ಮಾತಿನಂತೆ ರಾಮಲಕ್ಷ್ಮಣರು ಶಬರಿಯ ಆಶ್ರಮಕ್ಕೆ ಭೇಟಿ ನೀಡುತ್ತಾರೆ.ಶಬರಿಯು ರಾಮನ ದರ್ಶನದಿಂದ ಪುಳಕಿತಳಾದಳು.ಕಣ್ತುಂಬ ರಾಮನ ದರ್ಶನ ಮಾಡಿ, ಮುಟ್ಟಿ, ನಮಸ್ಕರಿಸಿ, ಸಂಭ್ರಮಿಸಿದಳು.ಪರಿಮಳದ ವನಮಾಲೆಯನ್ನು ರಾಮನ ಕೊರಳಿಗೆ ಹಾಕಿ, ರುಚಿಕರ ಹಣ್ಣುಗಳನ್ನು ನೀಡಿ ಉಪಚರಿಸಿದಳು.ಧನ್ಯಳಾದೆನೆಂದು ಸಂತಸ ವ್ಯಕ್ತಪಡಿಸಿದಳು. ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಕಾದು, ಮುನಿಗಳ ಮಾತನ್ನು ನಂಬಿ, ರಾಮನು ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಯಿತು. ಶಬರಿಯ ಮನದಾಸೆ ಈಡೇರಿತು. ಹಾಗಾಗಿ 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

### ಗದ್ಯಪಾಠ – 2.
## ಅಮೆರಿಕದಲ್ಲಿ ಗೊರೂರು.–ಗೊರೂರು ರಾಮಸ್ವಾಮಿ ಅಯ್ಯಂಗಾರ್

**1. ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಹೇಗಿದ್ದವು?**
ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅಗಲವಾದ ಎಂಟೂವರೆ ಮೊಳ ಉದ್ದದ, ನಾಲ್ಕು ಜರಿ ಗೆರೆಗಳುಳ್ಳ ಕೆಂಪು ಕಂಬಿಯ ಖಾದಿ ಕಚ್ಚೆ ಪಂಚೆ ಹಾಗೂ ಕಾವಿ ಬಣ್ಣದ ನೀಳವಾದ ಜುಬ್ಬ ಧರಿಸಿದ್ದರು.ಚಳಿಗಾಗಿ ಒಂದು ಕೆಂಪು ಉಣ್ಣೆಯ ಶಾಲು ಹಾಗೂ ಮಫ್ಲರ್ ಕಟ್ಟಿದ್ದರು.ಹಣೆಯಲ್ಲಿ ಢಾಳಾದ ಕೆಂಪು ನಾಮ ಹಾಕಿದ್ದರು. ತಲೆಯ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು, ಬಿಳಿಗಡ್ಡ, ಮೀಸೆ ಇತ್ತು.ಕಾಲಿಗೆ ದಪ್ಪನಾದ ಎಕ್ಕಡ ಧರಿಸಿದ್ದರು.ಅವರ ಮೈಮೇಲಿದ್ದ ಉಡುಪುಗಳು ಏಳೆಂಟು ಬಣ್ಣಗಳಿಂದ ಕೂಡಿ ಹೊಳೆಯುತ್ತಿತ್ತು. ಈ ವಿಚಿತ್ರವಾದ ವೇಷಭೂಷಣಗಳನ್ನು ಕಂಡು ಅಮೆರಿಕದ ವಿದ್ಯಾರ್ಥಿಗಳು ಪೈಡ್ ಪೈಪರ್, ಸಾಂತಾ ಕ್ಲಾಸ್ ಎಂದು ಕೂಗಿದರು. ಉಪಾಧ್ಯಾಯರು "ನಿಮ್ಮ ಉಡುಪು ಸ್ವಲ್ಪ ವಿಚಿತ್ರವಾಗಿದೆ" ಎಂದು ಗೊರೂರರಿಗೆ ಹೇಳಿದರು.

**2. ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು?**

ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಗಾಂಧೀಜಿಯವರನ್ನು ನೆನಪಿಸಿಕೊಳ್ಳುವ ಮೂಲಕ ಖಾದಿಬಟ್ಟೆಯ ವೈಶಿಷ್ಟ್ಯವನ್ನು ಪರಿಚಯಿಸಿದರು.ಗೊರೂರರು "ನಾನು ಗಾಂಧಿ ಭಾರತದಲ್ಲಿ ಜನಿಸಿದವನು ಭಾರತದ ಹವೆ ಬಹಳ ಹಿತವಾಗಿರುತ್ತದೆ ಅಲ್ಲಿ ಅತ್ಯಂತ ಕಡಿಮೆ ಬಟ್ಟೆಗಳಿಂದಲೇ ಜೀವಿಸಬಹುದು ಈ ಬಟ್ಟೆಯನ್ನು ಭಾರತದಲ್ಲಿ ಪ್ರಚಾರಕ್ಕೆ ತಂದವರು ಗಾಂಧೀಜಿ. ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಸೋಂಕು ಉಂಟಾಗಿಲ್ಲ" ಎಂದು ಹೇಳಿದರು."ನಾನು ಧರಿಸಿರುವ ಈ ಖಾದಿಬಟ್ಟೆ ಕೈಯಿಂದಲೇ ಮಾಡಿದ್ದು" ಎಂದು ಗೊರೂರರು ಹೇಳಿದ ಕೂಡಲೇ ಎಲ್ಲ ಉಪಾಧ್ಯಾಯರು ಹಾಗೂ ಹುಡುಗರು ಬಂದು ಅವರ ಬಟ್ಟೆಗಳನ್ನು ಮುಟ್ಟಿ ನೋಡಿದರು. ಒಬ್ಬ ಉಪಾಧ್ಯಾಯರು "ಕೈಯಿಂದ ಇದನ್ನು ಮಾಡುವುದು ಹೇಗೋ" ಎಂದು ಗೊರೂರರ ಮಾತಿನಲ್ಲಿ ಅಪನಂಬಿಕೆಯನ್ನು ವ್ಯಕ್ತ ಪಡಿಸಿದರು ಆಗ ಗೊರೂರರು ರಾಟೆ(ಚರಕ)ದಿಂದ ಹತ್ತಿಯನ್ನು ನೂಲುವ, ಹಾಗೂ ಮಗ್ಗದಿಂದ ಬಟ್ಟೆಯನ್ನು ನೇಯುವ ವಿಧಾನಗಳನ್ನು ಕುರಿತು ಅವರೆಲ್ಲರಿಗೆ ವಿವರಿಸಿದರು.

**3. ವಿದ್ಯುತ್ ಒಲೆಯಿಂದ ಉಂಟಾದ ಅಪಾಯವನ್ನು ಗೊರೂರರು ಹೇಗೆ ಪರಿಹರಿಸಿ ಕೊಂಡರು?**

ಗೊರೂರು ರಾಮಸ್ವಾಮಿ ಅಯ್ಯಂಗಾರರು ಇದ್ದ ಮನೆಯ ಅಡುಗೆಯ ಮನೆಯಎಲ್ಲ ಸ್ವಿಚ್‌ಗಳೂ ಆಫ್ ಆಗಿದ್ದರೂ ವಿದ್ಯುತ್ ಒಲೆಯಿಂದ ಕೊಂಬಿನ ಸದ್ದು ಒಂದೇ ಸಮನಾಗಿ ಬರುತ್ತಿತ್ತು. ವಿದ್ಯುತ್ ಒಲೆಗಳ ಸ್ವಿಚ್ ಜೋಡಣೆ ಹೊಸ ತರಹದಾಗಿದ್ದು "ಯಾವುದನ್ನು ಮುಟ್ಟಿದರೆ ಏನೋ" ಎಂಬ ಭಯದಿಂದ "ಮನೆಯಲ್ಲಿ ಬೆಂಕಿ ಹೊತ್ತಿ ಕೊಂಡೀತು" ಎಂಬ ಆತಂಕವನ್ನು ಉಂಟುಮಾಡಿತ್ತು. ಅಡುಗೆ ಮನೆಯ ವಿದ್ಯುತ್ ಒಲೆಯಿಂದ ಬರುತ್ತಿದ್ದ ಕೊಂಬಿನ ಸದ್ದನ್ನು ನಿಲ್ಲಿಸಲು ತಿಳಿಯದೆ, ಯಾರನ್ನಾದರೂ ಕರೆಯುವ ಉದ್ದೇಶದಿಂದ ಗೊರೂರರು ಸ್ಕೂಲಿನತ್ತ ಹೆಜ್ಜೆ ಹಾಕಿದರು.ಅವರು ಆ ಶಾಲೆಯ ಉಪಾಧ್ಯಾಯರು ಹಾಗೂ ವಿದ್ಯಾರ್ಥಿಗಳನ್ನು ಪರಿಚಯ ಮಾಡಿಕೊಂಡು, ತಮ್ಮ ಸಮಸ್ಯೆಯನ್ನು ತಿಳಿಸಿ, ಸಹಾಯ ಮಾಡುವಂತೆ ಕೇಳಿಕೊಂಡರು.ಆಗ ಶಾಲೆಯ ಉಪಾಧ್ಯಾಯರು ಬಲಿಷ್ಠನಾದ ಹುಡುಗನೊಬ್ಬನನ್ನು ಅವರೊಡನೆ ಕಳುಹಿಸಿ ಕೊಟ್ಟರು.ಆ ಹುಡುಗ ಗೊರೂರರ ಜೊತೆ ನೆಟ್ಟನೆ ಅಡುಗೆ ಮನೆಗೆ ಬಂದು, ಸುತ್ತ ನೋಡಿ ವಿದ್ಯುತ್ ಒಲೆಗೆ ಸಂಬಂಧಿಸಿದ ಒಂದು ಮುಳ್ಳಿಗೆ ಆ ಧ್ವನಿ ಸಂಬಂಧಿಸಿದ್ದು ಎಂದು ತಿಳಿದು, ಆ ಸ್ವಿಚ್ಚನ್ನು ಪತ್ತೆಮಾಡಿ, ಅದನ್ನು ಅಮುಕಿದನು, ಕೂಡಲೆ ಧ್ವನಿ ನಿಂತಿತು ಹೀಗೆ ವಿದ್ಯುತ್ ಒಲೆಯಿಂದ ಉಂಟಾದ ಅಪಾಯವನ್ನು ಗೊರೂರರು ಪರಿಹರಿಸಿಕೊಂಡರು.

## ಗದ್ಯಪಾಠ – 3.

## ಜೀವನದೃಷ್ಟಿ. – ವಿನಾಯಕ ಕೃಷ್ಣ ಗೋಕಾಕ್.

**1. ಜೀವನದೃಷ್ಟಿ ಗದ್ಯದಲ್ಲಿ ಅಂತರ್‌ಜೀವಿಯ ವ್ಯಕ್ತಿತ್ವ ಹೇಗೆ ವರ್ಣಿತವಾಗಿದೆ?**

ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ.ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಹೊರಟ ಅವನಿಗೆ ಉಳಿದವರ ಯೋಗಕ್ಷೇಮವನ್ನು ಹೊರುವ ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು ಸುಲಭವಾಗಿ ರಕ್ತಗತವಾಗುವುದಿಲ್ಲ. ಉಳಿದವರನ್ನು ಪ್ರೀತಿಯಿಂದ ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಿರಬಾರದೆಂದು ಅವನು ಎಚ್ಚರಪಡಬಲ್ಲ. ಸಾಹಿತ್ಯಿಕ ದೃಷ್ಟಿಯಿಂದ ಪರಾಂತಃಕರಣವನ್ನು ಪ್ರವೇಶಿಸಿ ಅದನ್ನು ತಿಳಿದುಕೊಳ್ಳಲುಬಲ್ಲ. ಆದರೆ ಉಳಿದ ಹೃದಯಗಳ ಆಸೆಗಳನ್ನು ತಾನಾಗಿಯೇ ಅಭ್ಯಸಿಸಿ ಅವುಗಳನ್ನು ಕಳೆಯಲು ಹವಣಿಸುವುದು ಅವನ ಸಹಜ ಸಿದ್ಧಿಯ ಆಚೆಗಿನ ಮಾತು. ಏಕೆಂದರೆ ಅಂತರ್‌ಜೀವಿಗೆ ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತಿರುತ್ತದೆ.ತನ್ನ ಅಂತರಗದ ಭವ್ಯತೆಯು ಅವನನ್ನು ಕರೆಯುತ್ತಿರುತ್ತದೆ, ತನ್ನ ಗುಂಗಿನಲ್ಲಿದ್ದ ಈ ಅಂತರ್‌ಜೀವಿಗೆ ಪರರ ಹಂಗು ಇರುವುದಿಲ್ಲ.

**2. ಸಮಾಜದಲ್ಲಿ ಕಲೋಪಾಸಕನ ಮಹತ್ವವನ್ನು ವಿ.ಕೃ.ಗೋಕಾಕ್ ಹೇಗೆ ವಿಶ್ಲೇಷಿಸಿದ್ದಾರೆ?**

ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು.ಸಮಾಜದ ಕಲ್ಯಾಣವನ್ನು ಪೋಷಿಸುವ ಒಂದು ಶಕ್ತಿಯು ಅವನಲ್ಲಿರುತ್ತದೆ ಅದಕ್ಕಾಗಿ ಅವನನ್ನು ಪೋಷಿಸುವ ಹೊಣೆಯು ಸಮಾಜದ ಮೇಲೆ. ಕಲೋಪಾಸಕನೆಂಬುದನ್ನು ತಿಳಿದ ಕೂಡಲೆ ಎಲ್ಲ ವ್ಯಕ್ತಿಗಳೂ ಅವನ ಆವಶ್ಯಕತೆಯನ್ನು ಪೂರೈಸಬೇಕು.ಕಲೋಪಾಸಕನೂ ಒಬ್ಬ ವ್ಯಕ್ತಿ; ಸಮಾಜದ–ಮನುಕುಲದ–ಒಂದು ಘಟಕ.ಪರಾಂತಃಕರಣಪ್ರವೇಶಿಯಾಗಿ ಜನತೆಯ ಮನವನ್ನೂ, ಅಂತಃಕರಣವನ್ನೂ ಅವನು ತಿದ್ದಬಹುದು.ಆದರೆ ಯಾವ ವ್ಯಕ್ತಿಗಳೊಡನೆ ಅವನ ಸಂಬಂಧ ಬರುವುದೋ ಅವರ ಅಂತಃಕರಣವನ್ನು ನೋಯಿಸದಂತೆ ತನ್ನನ್ನು ಅಲಕ್ಷಿಸಿಯಾದರೂ ಉಳಿದವರ ಹಿತಚಿಂತನೆ ಹಾಗೂ ಹಿತಸಾಧನೆಯಲ್ಲಿ ತೊಡಗುವುದು ಎಲ್ಲ ವ್ಯಕ್ತಿಗಳಂತೆ ಅವನ ಕರ್ತವ್ಯವೂ ಆಗಿದೆ.

## ಗದ್ಯಪಾಠ – 5

## ಭಾಗ್ಯಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ– ಡಿ. ಎಸ್. ಜಯಪ್ಪ ಗೌಡ

**1. ಮುಂಬೈ ಮತ್ತು ಪೂನಾ ನಗರಗಳಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆಯನ್ನು ವಿವರಿಸಿ.**
ವಿಶ್ವೇಶ್ವರಯ್ಯ ಅವರು ಕ್ರಿ. ಶ. 1884 ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಸೇವೆ ಪ್ರಾರಂಭಿಸಿದರು.ಖಾನ್‌ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ತೂಗು ಮೇಲ್ಗಾಲುವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಯಶಸ್ಸು ಗಳಿಸಿ ಮೇಲಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು.ಮುಂಬೈ ಸರ್ಕಾರದ ಸೂಚನೆಯ ಮೇರೆಗೆ ಸಿಂಧ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು.ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಫೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದರು ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆ ವಿಶ್ವೇಶ್ವರಯ್ಯ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು.ತಮ್ಮ ಕಾರ್ಯಚಟುವಟಿಕೆಗಳಿಂದ ಮೆಚ್ಚುಗೆಗೆ ಪಾತ್ರರಾದ ವಿಶ್ವೇಶ್ವರಯ್ಯ ಅವರು ಮುಂಬೈ ಪ್ರಾಂತ್ಯದ ಸ್ಯಾನಿಟರಿ ಎಂಜಿನಿಯರಾಗಿ ನೇಮಕಗೊಂಡರು ಈ ಹುದ್ದೆಗೆ ನೇಮಕವಾದ ಪ್ರಥಮ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

**2. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.**
ವಿಶ್ವೇಶ್ವರಯ್ಯ ಮೈಸೂರು ಸಂಸ್ಥಾನದ ದಿವಾನರಾಗಿ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದರು ಕಛೇರಿಯ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಸುಧಾರಣೆ ಮಾಡಿದರು.ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು.ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು.ರಾಜ್ಯ ಪ್ರವಾಸ ಮಾಡಿ ಅಜಮಾಯಿಷಿ ಕಾರ್ಯ ನಡೆಸಿದರು. ಸಮರ್ಥ ಕಾರ್ಯನಿರ್ವಹಣೆಗಾಗಿ ಸಮಿತಿಗಳನ್ನು ರಚಿಸಿದರು.ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು.ತಾಂತ್ರಿಕ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಭಾಷೆ ಸಾಹಿತ್ಯ ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಿದರು.ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು.ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು.

**3. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.**
ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದರು.ಕ್ರಿ.ಶ. 1913 ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು.ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರೌಢಶಿಕ್ಷಣ ಶಾಲೆಗಳನ್ನು ಬದಲಿಸಿ ಸಂಸ್ಥಾನವೇ ಪ್ರತ್ಯೇಕವಾದ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ಜಾರಿಗೆ ತಂದರು.ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ದೂರದೃಷ್ಟಿಯ ಮತ್ತೊಂದು ಫಲಶ್ರುತಿ. "ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು.ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂಬುದನ್ನು ಮನಗಂಡ ಇವರು ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು.ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು.ಮಹಿಳಾ ಶಿಕ್ಷಣದ ಬಗ್ಗೆ ಸಹಾನುಭೂತಿ ಹೊಂದಿದ್ದ ಇವರು ಗೃಹಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿ ವೇತನವನ್ನು ಕೊಡುವ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು.

## ಗದ್ಯಪಾಠ – 7

**ವೃಕ್ಷಸಾಕ್ಷಿ** – **ದುರ್ಗಸಿಂಹ**

**1. 'ವೃಕ್ಷಸಾಕ್ಷಿ' ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ?**
'ವೃಕ್ಷಸಾಕ್ಷಿ' ಪಾಠದಲ್ಲಿ ನಾವು ಮೆಚ್ಚುವ ಪಾತ್ರ ಧರ್ಮಬುದ್ಧಿಯದು.ಧರ್ಮಬುದ್ಧಿಯು ವ್ಯಾಪಾರಿ ಆದರೂ ಕಪಟವರಿಯದ ಸತ್ಯವಂತ, ಆಧ್ಯಾತ್ಮಿಕ ಮನೋಭಾವವುಳ್ಳವನು.ಸೂರ್ಯೋದಯಕ್ಕೆ ಮೊದಲೇ ಎದ್ದು ನಿತ್ಯಕರ್ಮ ಮುಗಿಸಿ ದೇವರು, ಗುರುಗಳು, ವೇದಾಧ್ಯಯನ ನಿರತರನ್ನು ಪೂಜಿಸುವವನು.ದುಷ್ಟಬುದ್ಧಿಯು ಮರದ ಪೊಟರೆಯೊಳಗೆ ತಂದೆಯನ್ನು ಕೂರಿಸಿ ಧರ್ಮಬುದ್ಧಿಯೇ ಚಿನ್ನ ಕದ್ದನೆಂದು ಹೇಳಿಸಿದಾಗಲೂ ಧರ್ಮಬುದ್ಧಿ ಕೂಗಾಡಲಿಲ್ಲ, ಶಾಂತನಾಗಿಯೇ ಇದ್ದನು.ಅವನಿಗೆ ದೇವರ ಮೇಲೆ ನಂಬಿಕೆ.ದೇವರಿದ್ದರೆ ಸತ್ಯವೇ ಹೊರಬರಬೇಕಿತ್ತು ಎಂಬುದು ಅವನ ಅನಿಸಿಕೆ.ಮರವನ್ನು ಪರೀಕ್ಷಿಸಬೇಕೆಂದು ಮರವನ್ನು ಸುತ್ತಿದಾಗ ಮನುಷ್ಯ ಸಂಚಾರವಾಗಿರುವುದನ್ನು ಬುದ್ಧಿವಂತಿಕೆಯಿಂದ ಕಂಡುಕೊಂಡನು.ದುಷ್ಟಬುದ್ಧಿಗೆ ಬುದ್ಧಿ ಕಲಿಸುವ ಚಾಣಾಕ್ಷತನವನ್ನು ಮೆರೆಯುತ್ತಾನೆ. "ಸುಳ್ಳನ್ನು ಸುಳ್ಳಿನಿಂದಲೇ; ಮುಳ್ಳನ್ನು ಮುಳ್ಳಿನಿಂದಲೇ ಜಯಿಸುವಂತೆ" ಧರ್ಮಬುದ್ಧಿಯು ತಂತ್ರಬುದ್ಧಿಯಿಂದ ತನಗೆ ಒದಗಿದ್ದ ಕೆಟ್ಟ ಹೆಸರನ್ನು ಹೋಗಲಾಡಿಸಿ ಕೊಂಡನು.ಆದ್ದರಿಂದ ಸತ್ಯವಂತನಾದ ಧರ್ಮಬುದ್ಧಿ ಮೆಚ್ಚುಗೆಗೆ ಪಾತ್ರನಾಗುತ್ತಾನೆ.

**2. ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.**

ದುಷ್ಟಬುದ್ಧಿಯು ಧರ್ಮಬುದ್ಧಿಯೊಡನೆ ಸೇರಿ ವ್ಯಾಪಾರ ಮಾಡಿ, ಲಾಭ ಗಳಿಸಿದ್ದ ಹೊನ್ನನು ತಾನೇ ದೋಚಿ, ಕಳ್ಳತನವನ್ನು ಧರ್ಮಬುದ್ಧಿಯ ಮೇಲೆ ಹೊರಿಸಿ, ಇದಕ್ಕೆ ವಟವೃಕ್ಷವೇ ಸಾಕ್ಷಿ ಎಂದು ಧರ್ಮಾಧಿಕಾರಿಗಳ ಮುಂದೆ ಹೇಳುತ್ತಾನೆ. ಇದರಿಂದ ಧರ್ಮಬುದ್ಧಿ ಮತ್ತು ಧರ್ಮಾಧಿಕಾರಿಗಳಿಗೆ ಆಶ್ಚರ್ಯವಾಗುತ್ತದೆ.ದುಷ್ಟಬುದ್ಧಿಯು ತಂದೆಯ ಬುದ್ಧಿ ಮಾತನ್ನು ಆಲಿಸದೇ, ಮರದಿಂದ ಸಾಕ್ಷಿ ಹೇಳಿಸಲು ತನ್ನ ತಂದೆಯನ್ನೇ ಪೊಟರೆಯಲ್ಲಿ ಕೂರಿಸಿ, ಅವನಿಂದ ಧರ್ಮಬುದ್ಧಿಯೇ ಚಿನ್ನ ಕದ್ದನೆಂದು ಸುಳ್ಳು ಹೇಳಿಸುತ್ತಾನೆ. ಧರ್ಮಬುದ್ಧಿಯು ದೈವ ಭಕ್ತನಾಗಿದ್ದು ಸತ್ಯ ಹೊರ ಬರುತ್ತದೆ ಎಂದು ನಂಬಿದ್ದನು. ಅವನ ನಂಬಿಕೆಯು ಸುಳ್ಳಾದಾಗ ಮರದ ಬಳಿ ಪರೀಕ್ಷಿಸಿ ಪೊಟರೆಯೊಳಗೆ ಮನುಷ್ಯ ಸಂಚಾರವಾಗಿರುವುದನ್ನು ಕಂಡುಕೊಳ್ಳುತ್ತಾನೆ. ಧರ್ಮಾಧಿಕಾರಿಗಳಿಗೆ ತಾನು ವ್ಯಾಪಾರಿಯ ಮನೋಭಾವದಂತೆ ಸುಳ್ಳು ಹೇಳಿದ್ದಾಗಿ, ಚಿನ್ನವನ್ನು ತಾನೇ ತೆಗೆದುಕೊಂಡುದ್ದಾಗಿ ತಿಳಿಸಿ, ಈಗ ಆ ಚಿನ್ನಕ್ಕೆ ಹಾವು ಸುತ್ತುಕೊಂಡಿದೆ ಎಂದು ಹೇಳಿ, ಚಿನ್ನವನ್ನು ತೆಗೆಯಲು ಮರದ ಪೊಟರೆಗೆ ಹುಲ್ಲುಕಡ್ಡಿಯಿಟ್ಟು ಬೆಂಕಿ ಇಡುತ್ತಾನೆ. ಪೊಟರೆಗೆ ಹೊಗೆ ತುಂಬಿ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಉಸಿರುಕಟ್ಟಿ ಕೂಗಾಡುತ್ತ ಪೊಟರೆಯಿಂದ ಉರುಳಿ ಪ್ರಾಣಬಿಡುತ್ತಾನೆ. ದುಷ್ಟಬುದ್ಧಿಯ ಕುಟಿಲತೆ ಧರ್ಮಾಧಿಕಾರಿಗಳಿಗೆ ತಿಳಿಯುತ್ತದೆ. ಹೀಗೆ ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗು ಬಾಣವಾಯಿತು.

## ಗದ್ಯಪಾಠ – 8.

**ವ್ಯಾಘ್ರಗೀತೆ – ಎ. ಎನ್. ಮೂರ್ತಿರಾವ್**

**1. ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.**

"ಶಾಕಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನ ಬಹುದಾದರೆ ಆಹಾರಕ್ಕಾಗಿ ಹುಲಿಯು ಪ್ರಾಣಿಗಳನ್ನು ಕೊಂದು ತಿನ್ನುವುದರಲ್ಲಿ ತಪ್ಪಿಲ್ಲ.ಆದರೆ ಹಾಗೆ ಕೊಲ್ಲುವಾಗ ಯಾವುದಾರೂ ಒಂದು ಧರ್ಮವನ್ನು ಅನುಸರಿಸಿ ಕೊಲ್ಲುವುದೋ ಅಥವಾ ಧರ್ಮಾಧರ್ಮಗಳ ಲೆಕ್ಕ ಇಡದೆ ಸ್ವಚ್ಛಂದದಿಂದ ವರ್ತಿಸುತ್ತದೆಯೇ ಎಂಬುದೇ ಮುಖ್ಯ ಪ್ರಶ್ನೆ. ಇತರ ದೇಶಗಳಲ್ಲಿ ಇರುವ ಹುಲಿಗಳ ವಿಷಯ ಹೇಗೋ ಗೊತ್ತಿಲ್ಲ ಆದರೆ ಯಾವ ನಾಡಿನಲ್ಲಿ ಶ್ರೀರಾಮನಂಥ ದೊರೆಗಳು ಆಳಿದರೋ, ಭಗವದ್ಗೀತೆಯಂಥ ಗ್ರಂಥ ಉದ್ಭವಿಸಿತೋ, ಆ ಭರತ ಭೂಮಿಯಲ್ಲಿ ಹುಲಿಗಳು ಅಧರ್ಮಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ ಏಕೆಂದರೆ ಶತ್ರುಗಳಾದರೂ ಸರಿಯೆ, ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಭಗವದ್ಗೀತೆಯ 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಮಾತಿನಂತೆ ಹುಲಿಗಳು ಧರ್ಮಪರತೆಯಿಂದ ಬೇಟೆಯಾಡುತ್ತವೆ" ಎಂದು ಮೂರ್ತಿರಾಯರು ಅಭಿಪ್ರಾಯಪಡುತ್ತಾರೆ.

**2. ಶಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ? ಹುಲಿಯ ಧರ್ಮವೇ? ಸಮರ್ಥನೆಯೊಂದಿಗೆ ವಿವರಿಸಿ.**

ಶಾನುಭೋಗರು ಖಿರ್ದಿ ಪುಸ್ತಕ ಹುಲಿಗೆ ಎಸೆದು ಓಡುವಾಗ ಎಡವಿ ಬಿದ್ದು ಮೂರ್ಛೆ ಹೋದರು.ಮೂರ್ಛೆಯಿಂದ ಎದ್ದಾಗ ಅವರ ಸುತ್ತ ನಾಲ್ಕೈದು ಜನ ರೈತರು ಇದ್ದರು.ಅವರು ನೀರು ಚಿಮುಕಿಸಿ ಶಾನುಭೋಗರನ್ನು ಎಚ್ಚರಿಸಿದ್ದರು.ಮನೆಗೆ ಬಂದ ಶಾನುಭೋಗರು ಖಿರ್ದಿ ಪುಸ್ತಕವನ್ನು ಜೋಪಾನವಾಗಿ ತೊಲೆಯ ಮೇಲೆ ಇಟ್ಟರು.ಶಾನುಭೋಗರು ಆ ಪುಸ್ತಕವನ್ನು ಅನಂತ ವಾತ್ಸಲ್ಯದಿಂದ, ಕೃತಜ್ಞತೆಯಿಂದ ನೋಡಿದರು.ತನ್ನ ಪ್ರಾಣವನ್ನು ಖಿರ್ದಿ ಪುಸ್ತಕವೇ ಉಳಿಸಿತು ಎಂಬ ಕೃತಜ್ಞತೆ ಶಾನುಭೋಗರಲ್ಲಿ ಇದೆ. ಹುಲಿಯಿಂದ ತಪ್ಪಿಸಿಕೊಳ್ಳಲು ಖಿರ್ದಿ ಪುಸ್ತಕ ಆಕ್ಷಣಕ್ಕೆ ಒಂದು ಸಾಧನವಾದರೂ ಅವರು ಎಡವಿ ಬಿದ್ದಾಗ ಬೆನ್ನು ಮೇಲಾಗಿ ಬಿದ್ದು ಮೂರ್ಛೆ ಹೋಗಿರುತ್ತಾರೆ. ಹುಲಿಯ ಧರ್ಮಶ್ರದ್ಧೆ ಬೆನ್ನ ಕಡೆಯಿಂದ ಬೇಟೆಯಾಡುವುದಲ್ಲ. ಆದ್ದರಿಂದ ಅದು ಶಾನುಭೋಗರನ್ನು ಕೊಲ್ಲದೆ ಬಿಟ್ಟಿದೆ.ಖಿರ್ದಿ ಪುಸ್ತಕಕ್ಕಿಂತ ಹುಲಿಯ ಧರ್ಮಶ್ರದ್ಧೆಯೇ ಶಾನುಭೋಗರ ಪ್ರಾಣ ಉಳಿಯಲು ಕಾರಣವೆಂಬುದು ಲೇಖಕರ ಅಭಿಪ್ರಾಯವಾಗಿದೆ.

## ಪದ್ಯಪಾಠ – 1.

**ಎಮ್ಮನುಡಿಗೇಳ್ – ಆದಿಕವಿ ಪಂಪ**

**1. ಧೃತರಾಷ್ಟ್ರನು ಸಂಧಿ ಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು?**

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ಮಗನೇ, ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ (ಭೇದವಿಲ್ಲ); ರಾಜ್ಯವನ್ನು ವಿಭಾಗ ಮಾಡಿ ಆಳೋಣ.ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವವರೇ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೇ; ಭೀಷ್ಮನಿಗೆ, ದ್ರೋಣನಿಗೆ, ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಕೋಪಿಸಿ ಯುದ್ಧ ಮಾಡುವವರು ಇನ್ನು ಯಾರು?ಸಂಧಿಯನ್ನು ಮಾಡೋಣ.ದ್ವೇಷಕ್ಕೆ ಒಂದು ಸ್ಥಳ; ಬಾಂಧವ್ಯಕ್ಕೆ ಒಂದು ಸ್ಥಳ ಎಂದು ಇದೆಯೇ? ಆಲೋಚನೆ ಮಾಡು.ರಾಜರುಗಳಿಗೆ ಹಗೆತನವೂ ಬಾಂಧವ್ಯವೂ ಮಾಡಿದ ಕಾರ್ಯದಿಂದ ಉಂಟಾಗುತ್ತವೆ ಎಂದು ಪ್ರಸಿದ್ಧವಾದ ದಂಡನೀತಿಶಾಸ್ತ್ರದಲ್ಲಿ ಹೇಳಿಲ್ಲವೇ?ಮಿತ್ರರನ್ನೂ ಶತ್ರುಗಳನ್ನೂ ಉಂಟುಮಾಡುವ ಕಾರ್ಯವನ್ನು ಏಕೆ ಮಾಡುತ್ತೀಯೇ?ನಮಗೆ ನೀನು ಇದ್ದ ಪಕ್ಷದಲ್ಲಿ ಎಲ್ಲರೂ ಇರುವರು.ಮನದಲ್ಲಿ ದುಃಖವೇನೂ ಇಲ್ಲ. ಅದು ಹೇಗೆಂದರೆ ಹಗಲಿನಲ್ಲಿ ಸೂರ್ಯನೇ ಸಾಲದೆ; ಎಷ್ಟು ದೀಪಗಳು ಉರಿದರೇನು?ಆರಿ ಹೋದರೇನು?ಅದಲ್ಲದೆಯೂ ಪಾಂಡವರಾದರೆ ನನಗೆ ಪಾಂಡುರಾಜನಿಗೆ ಮಾಡಿದುದನ್ನೇ ಮಾಡುವರು.(ಹೇಳಿದಂತೆ

ಕೇಳುವರು). ಹೇಳಿದ ಮಾತನ್ನು ಮೀರುವವರಲ್ಲ. ಅವರನ್ನು ನಾನು ಹೇಗಾದರೂ ಒಪ್ಪಿಸಿ, ನೀನು ಹೇಳಿದುದ್ದನ್ನು ಹೇಳಿಸುವೆನು. ಅದಕ್ಕೆ ಪ್ರತಿಭಟಿಸದೆ ಒಪ್ಪಿಕೋ, ನಿನ್ನನ್ನು ಕೈಯೊಡ್ಡಿ ಬೇಡುವೆನು" ಎಂದು ಹೇಳುತ್ತಾನೆ.

**2. ದುರ್ಯೋಧನನ ತಂದೆತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.**

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ಮಗನೇ, ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ (ಭೇದವಿಲ್ಲ); ರಾಜ್ಯವನ್ನು ವಿಭಾಗ ಮಾಡಿ ಆಳೋಣ.ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವವರೇ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೇ; ಭೀಷ್ಮನಿಗೆ, ದ್ರೋಣನಿಗೆ, ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಕೋಪಿಸಿ ಯುದ್ಧ ಮಾಡುವವರು ಇನ್ನು ಯಾರು?ಸಂಧಿಯನ್ನು ಮಾಡೋಣ.ನಮಗೆ ನೀನು ಇದ್ದ ಪಕ್ಷದಲ್ಲಿ ಎಲ್ಲರೂ ಇರುವರು.ಮನದಲ್ಲಿ ದುಃಖವೇನೂ ಇಲ್ಲ. ಅದು ಹೇಗೆಂದರೆ ಹಗಲಿನಲ್ಲಿ ಸೂರ್ಯನೇ ಸಾಲದೆ; ಎಷ್ಟು ದೀಪಗಳು ಉರಿದರೇನು?ಆರಿ ಹೋದರೇನು? ಪ್ರತಿಭಟಿಸದೆ ಸಂಧಿಗೆ ಒಪ್ಪಿಕೋ, ನಿನ್ನನ್ನು ಕೈಯೊಡ್ಡಿ ಬೇಡುವೆನು" ಎಂದು ಹೇಳುತ್ತಾನೆ. ಧೃತರಾಷ್ಟ್ರನ ಆ ಮಾತಿಗೆ ಬೆಂಬಲವಾಗಿ ಗಾಂಧಾರಿಯು ದುರ್ಯೋಧನನ್ನು ಕುರಿತು "ಕುರುವಂಶವೆಂಬ ತೋಟವು ಭೀಮನೆಂಬ ಮದದಿಂದ ಕುರುಡಾಗಿ ಸೊಕ್ಕೇರಿದ ಆನೆಯು ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು; ಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದೆ; ಇನ್ನು ಯುದ್ಧ ಮಾಡುವಂಥವರೂ ಇಲ್ಲ; ಮಗನೇ, ಮುದುಕರೂ ಕುರುಡರೂ ಎಂದು ಹೇಳದೆ ನಮ್ಮ ಮಾತನ್ನು ಕೇಳು, ಆಲೋಚಿಸು, ತಂದೆಯ ಮಾತಿಗೆ ಒಪ್ಪಿಗೆ ಕೊಡು" ಎಂದು ಹೇಳುತ್ತಾಳೆ.ಹೀಗೆದುರ್ಯೋಧನನ ತಂದೆತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದರು.

## ಪದ್ಯಪಾಠ – 2

## ಹಕ್ಕಿ ಹಾರುತಿದೆ ನೋಡಿದಿರಾ – ದ. ರಾ. ಬೇಂದ್ರೆ

**1. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?**

ದ. ರಾ. ಬೇಂದ್ರೆ ಅವರು 'ಹಕ್ಕಿ ಹಾರುತ್ತಿದೆ ನೋಡಿದಿರಾ' ಕವನದಲ್ಲಿ ಚಲನಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಿದ್ದಾರೆ.

ಇರುಳು ಇರುಳು ಅಳಿದು ದಿನ ದಿನ ಬೆಳಗೆ ಸುತ್ತಮುತ್ತಲೂ ಮೇಲೆ ಕೆಳಗೆ ಕಣ್ಣು ರೆಪ್ಪೆ ಮಿಟಕಿಸುವಷ್ಟು ಸಮಯದಲ್ಲಿ (ನಿಮಿಷದಲ್ಲಿ) ಕಾಲಪಕ್ಷಿಯು ಗಾವುದ ಗಾವುದ ಗಾವುದ ಮುಂದೆ ಸಾಗುತ್ತಿರುತ್ತದೆ.

ಕಾಲಪಕ್ಷಿಗೆ ಕರಿನರೆ ಬಣ್ಣದ ಪುಚ್ಚಗಳು (ಬಾಲ) ಉಂಟು, ಬಿಳಿಹೊಳೆ ಬಣ್ಣದ ಗರಿ ಗರಿ ಉಂಟು, ಕೆನ್ನನ ಹೊನ್ನನ ಬಣ್ಣ–ಬಣ್ಣಗಳ ರೆಕ್ಕೆಗಳು ಎರಡೂ ಪಕ್ಕದಲಿ ಉಂಟು ಅಂದರೆ ಇಲ್ಲಿ ಕವಿಗಳು ಕಾಲದ ಮೂರು ಅವಸ್ಥೆಗಳನ್ನು ಬಣ್ಣಗಳ ಹೋಲಿಕೆಯ ಮುಖಾಂತರ ಬಹುಸ್ವಾರಸ್ಯವಾಗಿ ವರ್ಣಿಸುತ್ತಾರೆ.

ತರತಮರಹಿತ ಸಮದೃಷ್ಟಿಯಿಂದ ಕೂಡಿದ ನೀಲಮೇಘಮಂಡಲ – ಸಮಬಣ್ಣದಂತೆ, ಅನಂತ ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳು ಮೂಡಿದಂತೆ, ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ ಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿರುವ ನೋಟ ಅದ್ಭುತವಾದುದು ಎಂದು ಕವಿಗಳು ವರ್ಣಿಸುತ್ತಾರೆ.

ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಯಿಸಿ, ಅವುಗಳ ಫಲಿತವನ್ನು ಕೊಯ್ಲು ಮಾಡಿದೆ.ಅದೇ ರೀತಿ ಅನೇಕ ಸಾಮ್ರಾಜ್ಯಗಳನ್ನು, ರಾಜ್ಯಗಳನ್ನು, ಕೋಟೆಕೊತ್ತಲಗಳನ್ನು ನಾಶಗೊಳಿಸಿದೆ.ಕಾಲಪಕ್ಷಿಯು ತನ್ನ ಪಯಣದಲ್ಲಿ ಭೂಮಂಡಲದ ಮೇಲಿರುವ ಖಂಡಗಳನ್ನು ತೇಲಿಸಿ, ಮುಳುಗಿ ಪ್ರಾಕೃತಿಕ (ಪ್ರಗತಿ ಮತ್ತು ವಿನಾಶ) ಬದಲಾವಣೆಗಳಿಗೂ ಕಾರಣವಾಗಿದೆ.ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂದು ಕವಿಗಳು ವರ್ಣಿಸುತ್ತಾರೆ.

ಕಾಲಪಕ್ಷಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.

## ಪದ್ಯಪಾಠ – 5.

## ಸಂಕಲ್ಪ ಗೀತೆ – ಜಿ. ಎಸ್. ಶಿವರುದ್ರಪ್ಪ

**1. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?**

“ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚುವ, ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ, ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಂತಹ ಪರಿಸರ ಪ್ರೇಮಿಯಾಗುವ, ಬರಡಾಗಿರುವ ಕಾಡುಮೇಡುಗಳು ಹಚ್ಚಹಸಿರಿನಿಂದ ಕಂಗೊಳಿಸಿ, ಸಮೃದ್ಧವಾಗುವಂತಹ ವಸಂತಕಾಲವಾಗುವ, ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ, ಅಸ್ಪೃಶ್ಯತೆ, ಅಸಮಾನತೆಗಳಿಂದ ಅಧಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವ, ಭಾಷೆ, ಜಾತಿ, ಮತ, ಧರ್ಮಗಳ ಭೇದಭಾವದಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ. ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗುವ, ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ, ಭಯ ಹಾಗೂ ಸಂಶಯಗಳಿಂದ ಮಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು”ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ.

**2. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.**

ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು.ನಾವು ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನಡೆಯುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು.ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು.ನಾವು ವನಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಂವೃದ್ಧವಾಗುವಂತೆ ಮಾಡಬಹುದು.ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು.ನಾವು ಸಮಾನತೆ ಮನೋಭಾವನೆಯುಳ್ಳವರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡುಹಬಹುದು.ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು.ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಭವಿಷ್ಯದ ಹೊಂಗನಸನ್ನು ಕಾಣಬಹುದು. ಹೀಗೆ ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪನವರುಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

## ಪದ್ಯಪಾಠ – 6.

## ಕೌರವೇಂದ್ರನ ಕೊಂದೆ ನೀನು – ಕುಮಾರ ವ್ಯಾಸ

**1. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?**

“ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ.ನೀನು ನಿಜವಾಗಿ ಭೂಮಿಯ ಒಡೆಯ.ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ” ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು.ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಕಲಿಭೀಮ, ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದರು.ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ ಸಹದೇವರು ಇಬ್ಬರು ಹುಟ್ಟಿದರು.ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು.ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು.ನಿನಗೆ ಎರಡು ವಂಶವು ಮರುಮಾತನಾಡದೆ ಸೇವೆಯನ್ನು ಮಾಡುವುವು.ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ ಹೇಳು.ಎಡಭಾಗದಲ್ಲಿ ಕೌರವೇಂದ್ರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ್ರ ಮಾಗಧ ಯಾದವಾದಿಗಳು ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆದು, ದುರ್ಯೋಧನ ನುಡಿಸಲು ‘ಒಡೆಯ ಅನುಗ್ರಹವಾಗಲಿ’ ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ?”ಎಂದು ಆಮಿಷ ಒಡ್ಡಿದನು.

**2. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.**

ಕೃಷನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ “ಅಯ್ಯೋ, ದುರ್ಯೋಧನನಿಗೆ ಕೇಡಾದುದು” ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ.ಕೃಷ್ಣನು “ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು” ಎಂದು ಮನದಲ್ಲಿ ನೊಂದುಕೊಂಡನು.“ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ ಕೊಂದೆ.ವೀರ ದುರ್ಯೋಧನನೇ ಒಡೆಯನು.ಆತನ ಹಗೆಯೆ ಹಗೆ, ಅಭಿಮಾನವೇ ಅಭಿಮಾನವು, ದುರ್ಯೋಧನ ಆದಂತೆ ಆಗುವೆನು.ಕೃಷ್ಣ ಕೇಳು, ನಾಳೆ ಸಮರದ ವಿಷಯದಲ್ಲಿ ಪಾಂಡವರಲ್ಲಿ ನಿಜ ಪರಾಕ್ರಮದ ಶ್ರೇಷ್ಠತನವನ್ನು ತೋರುವೆನು.ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು

ಮೃತ್ಯುದೇವತೆಗೆ ಭೋಜನ ಕೂಟ ಆಗುವುದು.ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

**3. ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?**

ಕೃಷ್ಣನು ಕರ್ಣನ ಜನ್ಮ ರಹಸ್ಯವನ್ನು ತಿಳಿಸುತ್ತಾ ಆತನನ್ನು ಸಕಲ ಸಾಮ್ರಾಜ್ಯಕ್ಕೆ ಚರ್ಕವರ್ತಿಯನ್ನಾಗಿ ಮಾಡುವುದಾಗಿ ತಿಳಿಸುತ್ತಾನೆ. ಸೂರ್ಯನ ಅನುಗ್ರಹದಿಂದ ಜನಿಸಿದ ಕರ್ಣನನ್ನು ಮಗುವಾಗಿದ್ದಾಗ ಕುಂತಿಯು ನೀರಿನಲ್ಲಿ ತೇಲಿಬಿಟ್ಟದ್ದರಿಂದ ಅಂಬಿಗನ ಮನೆಯಲ್ಲಿ ಮಾತೃವಾತ್ಸಲ್ಯದಿಂದ ವಂಚಿತನಾಗಿ ಸೂತಪುತ್ರನಾಗಿ ಬೆಳೆಯ ಬೇಕಾಯಿತು. ಸೂತಪುತ್ರನೆಂದು ಸಮಾಜದಲ್ಲಿ ಆತನ ಶಕ್ತಿ ಸಾಮರ್ಥ್ಯಕ್ಕೆ ಸೂಕ್ತವಾದ ಸ್ಥಾನಮಾನ ದೊರೆಯಲಿಲ್ಲ.ಅಂತಹ ಸಂದರ್ಭದಲ್ಲಿ ದುರ್ಯೋಧನ ಕರ್ಣನನ್ನು ಗೆಳೆಯನಾಗಿ ಸ್ವೀಕರಿಸಿ ಅಂಗರಾಜ್ಯದ ಅಧಿಪತಿಯನ್ನಾಗಿಸುತ್ತಾನೆ. ಆತನಿಗೆ ಒಂದು ಸ್ಥಾನ, ಗೌರವಗಳನ್ನು ದೊರಕಿಸಿಕೊಡುತ್ತಾನೆ. ಈ ಕಾರಣಗಳಿಂದ ಕರ್ಣನು ದುರ್ಯೋಧನನೇ ತನಗೆ ಒಡೆಯ, ಆತನ ಹಗೆಗಳು ನನಗೂ ಹಗೆಗಳೇ, ಆತನ ಅಭಿಮಾನ ನನ್ನ ಅಭಿಮಾನ, ದುರ್ಯೋಧನನ ಹಾದಿಯನ್ನೇ ಅನುಸರಿಸುತ್ತೇನೆ. ಯುದ್ಧದಲ್ಲಿ ನಿಜ ಪರಾಕ್ರಮದ ಶ್ರೇಷ್ಠತನ ತೋರಿಸುತ್ತೇನೆ ಎನ್ನುವುದು ಕರ್ಣನ ಜಾಯಮಾನಕ್ಕೆ ಸರಿಯಾಗಿಯೇ ಇದೆ. ಕೌರವನು ತನಗೆ ಮಾಡಿದ ಉಪಕಾರವನ್ನು ಯುದ್ಧರಂಗದಲ್ಲಿ ತೀರಿಸುತ್ತೇನೆ. ತಮ್ಮಂದಿರನ್ನು ನೋಯಿಸದೆ, ಸೈನ್ಯಬಲವನ್ನು ಮಾರಿಗೆ ಔತಣವನ್ನಾಗಿ ನೀಡಿ, ಅನ್ನದಾತನ ಋಣವನ್ನು ಮುಗಿಸಿ, ಶರೀರವನ್ನು ತ್ಯಜಿಸುತ್ತೇನೆ ಎಂಬ ಕರ್ಣನ ಮಾತು ಆತನ ಸ್ವಾಮಿ ಭಕ್ತಿಗೆ ಸಾಕ್ಷಿಯಾಗಿದೆ.ಸ್ಥಾನ, ಗೌರವ ಹಾಗೂ ಕೀರ್ತಿ ದೊರಕಿಸಿಕೊಟ್ಟ ಒಡೆಯನಿಗೆ ತನ್ನ ಪ್ರಾಣವನ್ನು ಸಮರ್ಪಿಸುವುದು ಧರ್ಮವೇ ಆಗಿದೆ ಎಂಬ ಕರ್ಣನ ನಿರ್ಧಾರ ಸರಿಯಾಗಿದೆ.

## ಪದ್ಯಪಾಠ – 7.

**ವೀರಲವ** **– ಲಕ್ಷ್ಮೀಶ**

**1. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?**

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು.ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.ಆಗ ಇದನ್ನು ಕಂಡ ಲವನು "ಇದು ಯಾವ ಕಡೆಯ ಕುದುರೆಯು, ಹೊಕ್ಕು, ಹೂತೋಟವನ್ನು ನುಗ್ಗುನುರಿಯಾಗುವಂತೆ ತುಳಿದುದು."ಎಂದು ಕುದುರೆಯ ಕಡೆಗೆ ನಡೆದು ಬಂದು ನೋಡಿದನು.ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯಮಗನಾದರಾಮನು ಒಬ್ಬನೇ ವೀರನು ಇದು ಅವನ ಯಜ್ಞ ಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರು ತಡೆಯಲಿ" ಎಂದುಬರೆಯಲಾಗಿತ್ತು.ಇದನ್ನು ಓದಿದ ಲವನು ಕೋಪಗೊಂಡು "ಅಹಂಕಾರವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲ ಜನರೂ ಬಂಜೆ ಎನ್ನದಿರುವರೇ, ತನಗೆ ಇರುವ ತೋಳುಗಳು ಇವು ಏತಕೆ?"ಎಂದು ಪ್ರತಿಜ್ಞೆಯನ್ನು ಕೈಗೊಂಡು, ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಕಟ್ಟಿಹಾಕಿದನು.

**2. ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ?**

ಲವನು ಬಾಲಕನಾಗಿದ್ದರು ಸ್ವಾಭಿಮಾನಿ.ಅವನ ಮಾತುಗಳು ವೀರೋಚಿತ.ಆತನ ಮಾತೃಪ್ರೇಮ ಅನನ್ಯ.ವಾಲ್ಮೀಕಿ ಮಹರ್ಷಿಗಳು ಆಶ್ರಮದಿಂದ ಹೊರಗೆ ಹೋಗುವಾಗ ಲವನಿಗೆ ಆಶ್ರಮದ ಜವಾಬ್ದಾರಿಯನ್ನು ವಹಿಸಿರುತ್ತಾರೆ.ಇಂತಹ ಸಮಯದಲ್ಲಿ ರಾಮನ ಯಜ್ಞಾಶ್ವವು ಆಶ್ರಮವನ್ನು ಪ್ರವೇಶಿಸಿ ಹೂದೋಟವನ್ನು ಹಾಳುಮಾಡುತ್ತದೆ. ಇದನ್ನು ಕಂಡು ಲವನು ಕುದುರೆಯ ಬಳಿಬಂದು, ಕುದುರೆಯ ನೆತ್ತಿಯ ಮೇಲೆ ಮೆರೆಯುತ್ತಿದ್ದ ಪಟ್ಟದ ಲಿಖಿತವನ್ನು ಓದಿ, ರಾಮನೊಬ್ಬನೇ ಜಗತ್ತಿಗೆ ವೀರನೆಂಬ ವಾಕ್ಯವನ್ನು ಕಂಡು ಕೆರಳಿ, ಇವನ ಗರ್ವವನ್ನು ಬಿಡಿಸುತ್ತೇನೆ, ಇಲ್ಲದಿದ್ದಲ್ಲಿ ನನ್ನ ತಾಯಿಯನ್ನು ಎಲ್ಲರೂ ಹೇಡಿಯನ್ನು ಹೆತ್ತವಳೆಂದು ದೂರಿಬಿಡುತ್ತಾರೆ ಎಂದು ಚಿಂತಿಸಿ, ತನ್ನ ತೋಳ್ಬಲವನ್ನು ತೋರಿಸಿಬಿಡುತ್ತೇನೆ ಎಂದು ಕುದುರೆಯನ್ನು ಕಟ್ಟಿಹಾಕುತ್ತಾನೆ. ಋಷಿ ಮುನಿಗಳ ಮಕ್ಕಳು ಹೆದರಿಕೆಯಿಂದ ಬೇಡವೆಂದಾಗ, "ಬ್ರಾಹ್ಮಣರ ಮಕ್ಕಳು ಯುದ್ಧಕ್ಕೆ ಹೆದರಿದರೆ; ಜಾನಕಿಯ ಸುತನು ಹೆದರುವನೇ?" ಎಂದು ವೀರನಂತೆ ಬಿಲ್ಲಿನ ಹೆದೆಯೇರಿಸಿ ಠೇಂಕಾರವನ್ನು ಮಾಡಿ ನಿಂತನು.ಇಂತಹ ವೀರ ಬಾಲಕನ ಶೌರ್ಯ, ತಾಯಿಯ ಮೇಲಿನ ಮಮತೆ, ದುರಹಂಕಾರವನ್ನು ಮೆಟ್ಟುವ ಸಾಹಸ ಎಂತಹವರಿಗೂ ಮೆಚ್ಚುಗೆಯಾಗುತ್ತದೆ.

# ಪ್ರಬಂಧಗಳು

## ಬಾಲಕಾರ್ಮಿಕ ಪದ್ಧತಿ

**ಪ್ರಸ್ತಾವನೆ :–** 5 ರಿಂದ 16 ವರ್ಷವಯಸ್ಸಿನ ಒಳಗೆ ದುಡಿಯುವ ಮಕ್ಕಳನ್ನು 'ಬಾಲಕಾರ್ಮಿಕರು' ಎನ್ನುವರು.ಬಾಲಕರು ಅನೇಕ ಕಾರಣಗಳಿಂದಾಗಿ ನಾಲ್ಕು ಐದು ವರ್ಷವಾಗುತ್ತಿದ್ದ ಹಾಗೆ ಕೆಲಸಕ್ಕೆ ಹೋಗಬೇಕಾದ ಪರಿಸ್ಥಿತಿಗೆ ಒಳಗಾಗುತ್ತಾರೆ.ಬಡ ಕುಟುಂಬದಲ್ಲಿ ಜನಿಸಿದ ಬಾಲಕರು ಹಸಿವಿನ ತೊಂದರೆಗೆ ಸಿಲುಕುವ ಕಾರಣ ಬಾಲಕಾರ್ಮಿಕರಾಗುತ್ತಾರೆ.

**ವಿಷಯ ನಿರೂಪಣೆ :–**ಬಾಲಕಾರ್ಮಿಕರು ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲೂ ಇದ್ದಾರೆ. ಮಾಲೀಕರಿಗೆ ಅತ್ಯಂತ ಕಡಿಮೆ ಕೂಲಿಯಲ್ಲಿ ಪ್ರಾಮಾಣಿಕವಾಗಿ ದುಡಿಯುವ ಕೈಗಳು ಬೇಕಾಗಿರುವುದು, ಚಿಕ್ಕವಯಸ್ಸಿನ ಕೆಲವು ಮಕ್ಕಳು ಮನೆ ಬಿಟ್ಟು ಬಂದು ನಗರ ಸೇರಿಕೊಳ್ಳುವುದು ಬಾಲಕಾರ್ಮಿಕರ ಹೆಚ್ಚಳಕ್ಕೆ ಕಾರಣ.ಭಾರತ ಹಳ್ಳಿಗಳ ದೇಶ. ಹಳ್ಳಿಗಳಲ್ಲಿ ವ್ಯವಸಾಯದ ಬದುಕನ್ನು ಬಿಟ್ಟರೆ ಬೇರೆ ಉದ್ಯೋಗಗಳ ಬೆಳವಣಿಗೆಗೆ ಅವಕಾಶವಿಲ್ಲ. ವ್ಯವಸಾಯವೊಂದನ್ನೇ ನಂಬಿದ ಜನರಿಗೆ ಸಾಕಷ್ಟು ಉದ್ಯೋಗ ವರ್ಷಪೂರ್ತಿ ದೊರೆಯುವುದಿಲ್ಲ. ನಗರಕ್ಕೆ ವಲಸೆ ಬರತೊಡಗಿದ ಹಳ್ಳಿಯವರು ಕೆಲಕಾಲ ನಗರದಲ್ಲಿದ್ದು, ಪುನಃ ಹಳ್ಳಿಗೆ ಹಿಂತಿರುಗಲು ಬಯಸುವುದಿಲ್ಲ. ಹತ್ತು–ಹದಿನೈದು ವಯಸ್ಸಿನವರೆಗೆ ಅಲ್ಪ ಸ್ವಲ್ಪ ವಿದ್ಯೆ ಕಲಿತ ಮಕ್ಕಳು ತಂದೆ ತಾಯಿಯರಿಗೆ ನೆರವಾಗುವ ಆಸೆಯಿಂದ ಚಿಕ್ಕಪುಟ್ಟ ಕೆಲಸಗಳಿಗೆ ಸೇರಿಕೊಂಡು ಬಾಲಕಾರ್ಮಿಕರಾಗಿ ದುಡಿಯುವ ಸನ್ನಿವೇಶ ನಿರ್ಮಾಣವಾಗುತ್ತದೆ. ಇಂದು ಬಾಲಕಾರ್ಮಿಕ ಪದ್ಧತಿಯನ್ನು ಸರ್ಕಾರ ನಿಷೇಧಿಸಿದೆ.ಬಾಲಕಾರ್ಮಿಕರನ್ನು ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ.

**ಉಪಸಂಹಾರ :–**ಇಂದಿಗೂ ಕೆಲವು ಕಡೆ ಮಕ್ಕಳು ಬಾಲಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇವರನ್ನು ಸಂರಕ್ಷಿಸಿ, ಇಂತಹ ಮಕ್ಕಳಿಗೆ ವಿದ್ಯೆ ಕಲಿಯುವಂತೆ ಮಾಡಿ, ಸಮಾಜದ ಮುಖ್ಯವಾಹಿನಿಗೆ ಸೇರುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು.ಬಾಲಕಾರ್ಮಿಕರ ಬಗೆಗೆ ಸರಕಾರ, ತಂದೆ ತಾಯಿಯರು ಸಮಾಜ ಎಚ್ಚರ ವಹಿಸುವುದು ಅತ್ಯಗತ್ಯ ಎಂಬುದು ನನ್ನ ಅಭಿಪ್ರಾಯವಾಗಿದೆ.

## ಮಳೆ ನೀರು ಕೊಯ್ಲು

**ಪ್ರಸ್ತಾವನೆ :–** ನೀರು ಜೀವನಾವಶ್ಯಕ ವಸ್ತು. ಸಕಾಲಕ್ಕೆ ಮಳೆಯಾಗದೆ ನೀರಿನ ಕ್ಷಾಮ ಉಂಟಾಗುತ್ತಿದೆ.ಇಂದು ಅಂತರ್ಜಲದ ಮಟ್ಟ ಕುಸಿಯುತ್ತಿದೆ.ಆದ್ದರಿಂದ ನೀರಿನ ಮೂಲಗಳನ್ನು ಸಂರಕ್ಷಿಸುವುದು ಇಂದಿನ ಅತ್ಯಗತ್ಯವಾದ ಕಾರ್ಯವಾಗಿದೆ.ಇಂತಹ ಕಾರ್ಯಗಳಲ್ಲಿ ಮಳೆನೀರು ಕೊಯ್ಲು ವಿಧಾನ ಸಹ ಒಂದಾಗಿದೆ.

**ವಿಷಯ ನಿರೂಪಣೆ :–** ಮಳೆನೀರು ಕೊಯ್ಲು ಎಂಬುದು ಮಳೆನೀರನ್ನು ಒಟ್ಟುಗೂಡಿಸುವ, ಅಥವಾ ಸಂಚಯನ ಮಾಡುವ ಮತ್ತು ಶೇಖರಿಸಿಟ್ಟುಕೊಳ್ಳುವ ವಿಧಾನಕ್ಕಿರುವ ಹೆಸರು. ಕುಡಿಯುವ ನೀರನ್ನು ಒದಗಿಸಲು, ಜಾನುವಾರುಗಳಿಗೆ ನೀರುಣಿಸಲು, ನೀರಾವರಿಗಾಗಿ ನೀರಿನ ವ್ಯವಸ್ಥೆ ಮಾಡಲು ಅಥವಾ ಅಂತರ್ಜಲ ಪುನರ್ಭರ್ತಿಕಾರ್ಯ ಎಂದು ಕರೆಯಲಾಗುವ ಪ್ರಕ್ರಿಯೆಯೊಂದರಲ್ಲಿ ನೀರುಪೊಟರೆಯನ್ನು ಪುನಃ ತುಂಬಿಸಲು ಮಳೆನೀರು ಕೊಯ್ಲುಪದ್ಧತಿಯನ್ನು ಬಳಸಿಕೊಂಡು ಬರಲಾಗಿದೆ.ಮನೆಗಳು, ಗುಡಾರಗಳು ಮತ್ತು ಸ್ಥಳೀಯ ಸಾರ್ವಜನಿಕ ಕಟ್ಟಡಗಳ ಛಾವಣಿಗಳಿಂದ ಅಥವಾ ವಿಶೇಷವಾಗಿ ಸಿದ್ಧಗೊಳಿಸಲಾದ ನೆಲದ ಪ್ರದೇಶಗಳಿಂದ ಸಂಗ್ರಹಿಸಲಾದ ಮಳೆನೀರು, ಕುಡಿಯುವ ನೀರಿಗೆ ತನ್ನದೇ ಆದ ಪ್ರಮುಖ ಕೊಡುಗೆಯನ್ನು ನೀಡಬಲ್ಲದು. ಛಾವಣಿಯ ಮಳೆನೀರು ಸಾಮಾನ್ಯವಾಗಿ ಉತ್ತಮ ಗುಣಮಟ್ಟದ್ದಾಗಿ ಇರುತ್ತದೆ ಆದ್ದರಿಂದ, ಬಳಕೆಗೆ ಮೊದಲು ಅದನ್ನು ಸಂಸ್ಕರಿಸುವ ಅಗತ್ಯ ಕಂಡು ಬರುವುದಿಲ್ಲ. ಸರಳವಾದ ವಿಧಾನದಿಂದ ಮೊದಲ್ಗೊಂಡು ಸಂಕೀರ್ಣವಾದ ಕೈಗಾರಿಕಾ ವ್ಯವಸ್ಥೆಗಳವರೆಗೆ ಮಳೆ ನೀರನ್ನು ಕೊಯ್ಲು ಮಾಡಲು ಹಲವಾರು ವಿವಿಧ ವ್ಯವಸ್ಥೆಗಳಿವೆ. ಸಾಮಾನ್ಯವಾಗಿ ಮಳೆನೀರನ್ನು ನೆಲದಿಂದ ಇಲ್ಲವೇ ಛಾವಣಿಯೊಂದರಿಂದ ಕೊಯ್ಲು ಮಾಡಲಾಗುತ್ತದೆ. ಈ ಎರಡೂ ವ್ಯವಸ್ಥೆಗಳಿಂದ ನೀರನ್ನು ಸಂಗ್ರಹಿಸಬಹುದಾದ ವೇಗವು ಸದರಿ ವ್ಯವಸ್ಥೆಯ ಯೋಜನಾ ಪ್ರದೇಶ, ಅದರ ಸಾಮರ್ಥ್ಯ ಮತ್ತು ಮಳೆಸುರಿತದ ತೀವ್ರತೆಯನ್ನು ಅವಲಂಬಿಸಿರುತ್ತದೆ.ಮಳೆನೀರನ್ನು ಅಂತರ್ಜಲ ಪುನರ್ಭರ್ತಿ ಕಾರ್ಯಕ್ಕೂ ಬಳಸಬಹುದಾಗಿದ್ದು ಇದರಲ್ಲಿ ನೆಲದ ಮೇಲೆ ಹರಿಯುವ ಹೆಚ್ಚುವರಿ ಪ್ರಮಾಣದ ನೀರು ಸಂಗ್ರಹಿಸಲ್ಪಡುತ್ತದೆ ಹಾಗೂ ಹೀರಿಕೆಗೆ ಒಳಗಾಗುವುದರ ಮೂಲಕ ಅಂತರ್ಜಲದ ಪ್ರಮಾಣದಲ್ಲಿ ಹೆಚ್ಚಳವಾಗಲು ಕಾರಣ ವಾಗುತ್ತದೆ.

**ಉಪಸಂಹಾರ :–** ಸ್ಥಳೀಯವಾಗಿ ದೊರೆಯುವ ಹೆಚ್ಚು ದುಬಾರಿಯಲ್ಲದ ಸಾಮಗ್ರಿಗಳಿಂದ ಮಳೆನೀರು ಕೊಯ್ಲಿನ ವ್ಯವಸ್ಥೆಗಳನ್ನು ಸರಳವಾಗಿ ನಿರ್ಮಿಸಬಹುದು. ಬಹುತೇಕ ವಾಸಯೋಗ್ಯ ತಾಣಗಳಲ್ಲಿ ಇದು ಯಶಸ್ವಿಯಾಗಿದೆ.ಆದ್ದರಿಂದ ಜನರು ಈ ಬಗ್ಗೆ ಹೆಚ್ಚು ಗಮನಹರಿಸಿ, ತಮ್ಮತಮ್ಮ ಮನೆಗಳಲ್ಲಿ, ಹೊಲಗಳಲ್ಲಿ ಮಳೆನೀರು ಕೊಯ್ಲಿನ ವ್ಯವಸ್ಥೆ ಮಾಡಿಕೊಂಡರೆ ನೀರಿನ ಸಮಸ್ಯೆಯನ್ನು ಬಹುಮಟ್ಟಿಗೆ ನಿವಾರಿಸಿಕೊಳ್ಳಬಹುದಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ.

## ಸಾವಯವ ಬೇಸಾಯ

**ಪ್ರಸ್ತಾವನೆ :–** ಇಂದು ಕೃಷಿ ಕ್ಷೇತ್ರದಲ್ಲಿ ಅನೇಕ ರೀತಿಯ ಸಂಶೋಧನೆಗಳು ನಡೆಯುತ್ತಿವೆ. ಪಾರಂಪರಿಕ ಕೃಷಿ ಪದ್ಧತಿ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿಗಳ ಸಾಧಕ ಬಾಧಕಗಳ ಬಗ್ಗೆ ಕೃಷಿ ವಿಜ್ಞಾನಿಗಳು ಚರ್ಚೆ ನಡೆಸುತ್ತಿದ್ದರೆ. ಹೊಸಹೊಸ ಪ್ರಯೋಗಗಳು ನಡೆಯುತ್ತಿವೆ. ಇದರ ಫಲಸ್ವರೂಪವಾಗಿ ಬಂದಿರುವುದೇ ಸಾವಯವ ಬೇಸಾಯ ಪದ್ಧತಿ.

**ವಿಷಯ ವಿಸ್ತರಣೆ :–** ಬೆಳೆಯ ಆವರ್ತನೆ, ಹಸಿರು ಗೊಬ್ಬರ, ಮಿಶ್ರಗೊಬ್ಬರ, ಜೈವಿಕವಾಗಿ ಕೀಟಗಳ ನಿಯಂತ್ರಣಗಳನ್ನು ಅವಲಂಬಿತಗೊಂಡಿರುವುದೇ ಸಾವಯವ ಬೇಸಾಯ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ಧತಿಗಳನ್ನು ಅಂತಾರಾಷ್ಟ್ರೀಯವಾಗಿ ನಿಯಮಗಳಿಗೊಳಪಡಿಸಲಾಗಿದೆ ಅಂತಾರಾಷ್ಟ್ರೀಯ ಆಶ್ರಯ ಸಂಘಟನೆಯು ಸಾವಯವ ಸಮಷ್ಟಿಯನ್ನು ರಚಿಸುವುದಕ್ಕಾಗಿ 1972ರಲ್ಲಿ ಸ್ಥಾಪಿಸಲಾಗಿದೆ. ಸಾವಯವ ಚಳುವಳಿ 1930 – 1940 ರ ದಶಕದಲ್ಲಿ ಬೇಸಾಯ ಕ್ಷೇತ್ರವನ್ನು ಕೃತಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಬಿಸುವುದನ್ನು ಹಿಮ್ಮೆಟ್ಟಿಸುವ ಸಲುವಾಗಿ ಪ್ರಾರಂಭವಾಯಿತು.ಸರ್ ಆಲ್ಬರ್ಟ್ ಹೊವಾರ್ಡ್ ಅವರನ್ನು ಸಾವಯವ ಬೇಸಾಯದ ಪಿತಾಮಹನೆಂದು ವಿಶೇಷವಾಗಿ ಪರಿಗಣಿಸಲಾಗಿದೆ. ವಿಶ್ವದ ಒಟ್ಟು ಕೃಷಿ ಉತ್ಪನ್ನದ ಪ್ರಮಾಣವನ್ನು ಪರಿಗಣಿಸಿದಾಗ ಸಾವಯವ ಉತ್ಪನ್ನ ಸಣ್ಣ ಪ್ರಮಾಣವೆನಿಸುತ್ತದೆಯಾದರೂ ಅದು ಅನೇಕ ರಾಷ್ಟ್ರಗಳಲ್ಲಿ ವೇಗವಾಗಿ ಬೆಳೆಯುತ್ತಿದೆ.ಸಾವಯವ ವ್ಯವಸಾಯವು ಅರ್ಥಪೂರ್ಣವಾದ ಸಾಮಾಜಿಕ ಆರ್ಥಿಕ ಮತ್ತು ಪರಿಸರ ವಿಜ್ಞಾನದ ಸಮರ್ಥನೀಯ ಬೆಳವಣಿಗೆಗಾಗಿ, ವಿಶೇಷವಾಗಿ ಬಡ ರಾಷ್ಟ್ರಗಳ ಬೆಳವಣಿಗೆಗೆ ಮಹತ್ವಪೂರ್ಣ ಕೊಡುಗೆ ನೀಡುತ್ತದೆ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ಧತಿಗಳನ್ನು ಅಂತಾರಾಷ್ಟ್ರೀಯವಾಗಿ ನಿಯಮಗಳಿಗೆ ಒಳಪಡಿಸಲಾಗಿದೆ ಮತ್ತು ಕಾನೂನುಬದ್ಧವಾಗಿ ವಿಧಿಸಲಾಗಿದೆ. ಕರ್ನಾಟಕದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲೆಂದು 'ಸಾವಯವ ಕೃಷಿ ಮಿಷನ್' ರಚಿಸಲಾಗಿದೆ.

**ಉಪಸಂಹಾರ :–** ಸಾವಯವ ವ್ಯವಸಾಯವು ಒಂದು ಉತ್ತಮ ಜ್ಞಾನಯುಕ್ತ ಕೇಂದ್ರೀಕೃತ ಉತ್ಪಾದನೆಯ ವ್ಯವಸ್ಥೆಯಾಗಿದೆ. ಮತ್ತು ಹೆಚ್ಚು ಇಳುವರಿ ನೀಡುವ ಬೇಸಾಯ ವ್ಯವಸ್ಥೆಗಳಿಗಿಂತ ಹೆಚ್ಚು ಪರಿಸರ ಸ್ನೇಹಿಯಾಗಿದೆ.ಆದ್ದರಿಂದ ಇದನ್ನು ರೈತರು ಅಳವಡಿಸಿಕೊಳ್ಳುವ ಮೂಲಕ ತಮ್ಮ ಬದುಕನ್ನು ಉತ್ತಮ ಪಡಿಸಿಕೊಳ್ಳಬಹುದೆಂಬುದು ನನ್ನ ಅಭಿಪ್ರಾಯವಾಗಿದೆ.

## ಶೈಕ್ಷಣಿಕ ಅಭಿವೃದ್ಧಿಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ

**ಪ್ರಸ್ತಾವನೆ :** ಶಿಕ್ಷಣ ಮಾನವನ ಮೂಲಭೂತ ಅಗತ್ಯತೆಗಳಲ್ಲೊಂದಾಗಿದೆ. ಶಿಕ್ಷಣವಿಲ್ಲದೆ ಮಾನವ ಪರಿಪೂರ್ಣನಾಗಲಾರ.ಆದ್ದರಿಂದಲೇ ಸರ್ವರಿಗೂ ಶಿಕ್ಷಣ ಇಂದಿನ ಅಗತ್ಯವಾಗಿದೆ.ಈ ದಿಸೆಯಲ್ಲಿ ಸಮೂಹ ಮಾಧ್ಯಮಗಳ ಪಾತ್ರ ಹೆಚ್ಚಿನದಾಗಿದೆ.

**ವಿಷಯ ನಿರೂಪಣೆ:** ಏಕಕಾಲದಲ್ಲಿ ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಜನರಿಗೆ ವಿಷಯಗಳನ್ನು ತಿಳಿಸುವ ಸಾಧನಗಳೇ ಸಮೂಹ ಮಾಧ್ಯಮಗಳು. ಪತ್ರಿಕೆಗಳು, ಸಿನಿಮಾ, ರೇಡಿಯೊ, ದೂರದರ್ಶನ, ಟೆಲಿಫೋನ್, ಕಂಪ್ಯೂಟರ್, ಮೊಬೈಲ್, ಅಂತರ್ಜಾಲ ಮೊದಲಾದವುಗಳು ಪ್ರಮುಖ ಸಮೂಹ ಮಾಧ್ಯಮಗಳಾಗಿವೆ. ದೈನಂದಿನ, ಸಾಪ್ತಾಹಿಕ, ಪಾಕ್ಷಿಕ ಹಾಗೂ ಮಾಸಿಕ ಮೊದಲಾದ ಪತ್ರಿಕೆಗಳು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಉಪಯುಕ್ತ ಮಾಹಿತಿ ನೀಡುವ ಮೂಲಕ ಪ್ರಮುಖ ಮಾಧ್ಯಮವಾಗಿದೆ. ಹಾಗೆಯೇ ರೇಡಿಯೋ ಸುಲಭವಾಗಿ ಎಲ್ಲರಲೂ ಖರೀದಿಸಬಹುದಾದ ಸಾಧನವಾಗಿದ್ದು ಎಲ್ಲ ಕಡೆಯಲ್ಲೂ ಸುಲಭವಾಗಿ ಬಳಸಬಹುದಾದ ಸಾಧನವಾಗಿದೆ. ಇದರಿಂದ ಶಿಕ್ಷಣ ಕ್ಷೇತ್ರಕ್ಕೆ ಅಲ್ಲದೆ ಜ್ಞಾನದ ದೃಷ್ಟಿಯಿಂದ ಮತ್ತಿತರ ಕ್ಷೇತ್ರಗಳ ಎಲ್ಲಾ ಮಾಹಿತಿಗಳೂ ಲಭ್ಯವಾಗುತ್ತವೆ. ದೂರದರ್ಶನವು ದೃಕ್ ಶ್ರವಣ ಮಾಧ್ಯಮವಾಗಿದ್ದು ಪರಿಣಾಮಕಾರಿಯಾದ ಮಾಧ್ಯಮವಾಗಿದೆ ಇದರಿಂದ ಶಿಕ್ಷಣ ಪ್ರಸಾರ ಸುಲಭ ಸಾಧ್ಯವಾಗಿದೆ.ಉಪಗ್ರಹ ಆಧಾರಿತ ತರಬೇತಿಗಳು, ಸಂದರ್ಶನಗಳು, ಮಾಹಿತಿಗಳು, ಪರೀಕ್ಷೆಗಳನ್ನು ಸುಲಭವಾಗಿ ನಾವು ಇದ್ದ ಕಡೆಯಿಂದಲೇ ನಡೆಸಬಹುದಾಗಿದೆ ಮತ್ತು ವಿವರಗಳನ್ನು ಪಡೆಯಬಹುದಾಗಿದೆ.ನಾವು ತಿಳಿಯದ ವಿಚಾರಗಳನ್ನು ಕುಳಿತಲ್ಲಿಯೇ ಕಂಪ್ಯೂಟರ್‌ನ ಅಂತರ್ಜಾಲದಿಂದ ಪಡೆಯಬಹುದಾಗಿದೆ.ಮೊಬೈಲ್ ಮತ್ತು ಟೆಲಿಫೋನ್‌ಗಳೂ ಸಹಾ ಶಿಕ್ಷಣ ಪ್ರಸಾರದಲ್ಲಿ ಪ್ರಮುಖ ಮಾಧ್ಯಮಗಳಾಗಿವೆ.

**ಉಪಸಂಹಾರ :** ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉತ್ತಮವಾದ ಅಭಿವೃದ್ಧಿ ಸಾಧಿಸಿದ್ದು ಶಿಕ್ಷಣ ಕ್ಷೇತ್ರದಲ್ಲಿ ಈ ಸಮೂಹ ಮಾಧ್ಯಮಗಳ ಬಳಕೆ ಪೂರಕವಾಗಿದ್ದು ಮಹತ್ವದ ಪಾತ್ರ ವಹಿಸಿದೆ.

## ಸ್ವಚ್ಛ ಭಾರತ ಅಭಿಯಾನ

**ಪ್ರಸ್ತಾವನೆ :**ನಮ್ಮ ಆರೋಗ್ಯದ ದೃಷ್ಟಿಯಿಂದ ನಾವು ವಾಸಿಸುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬರೂ ಸ್ವಯಂ ಪ್ರೇರಿತರಾಗಿ ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು.ಇದು ನಮ್ಮ ಮನೆ ಪರಿಸರದಿಂದಲೇ ಪ್ರಾರಂಭಿಸಬೇಕು.

**ವಿಷಯ ನಿರೂಪಣೆ :** 'ಆರೋಗ್ಯವೇ ಭಾಗ್ಯ' ಎಂಬ ನಾಣ್ನುಡಿ ನಮ್ಮಲ್ಲಿದೆ ಉತ್ತಮ ಆರೋಗ್ಯಕ್ಕೆ ಉತ್ತಮ ಹಾಗೂ ಸ್ವಚ್ಛವಾದ ಪರಿಸರ ಅಗತ್ಯ. ಇದಕ್ಕಾಗಿಯೇ ನಮ್ಮ ಇಂದಿನ ಪ್ರಧಾನ ಮಂತ್ರಿಗಳು ಗಾಂಧೀಜಿಯವರ ಜನ್ಮದಿನವಾದ 2.10.2014ರಂದು ಸ್ವಚ್ಛ ಭಾರತ ಅಭಿಯಾನವನ್ನು ಪ್ರಾರಂಭಿಸಿದರು.ಗಾಂಧೀಜಿಯವರು ಹುಟ್ಟಿ 150 ವರ್ಷ ಪೂರ್ಣಗೊಳ್ಳುವ 2.10.2019ಕ್ಕೆ ಈ ಯೋಜನೆಯ ಗುರಿಯನ್ನು ಇಟ್ಟುಕೊಳ್ಳಲಾಗಿದೆ.ಈ ಅವಧಿಯಲ್ಲಿ ಸಂಪೂರ್ಣವಾಗಿ ಸ್ವಚ್ಛಭಾರತ ನಿರ್ಮಾಣವಾಗಬೇಕು ಈ ದಿಸೆಯಲ್ಲಿ ಈಗಾಗಲೇ ಹಳ್ಳಿಗಳಲ್ಲಿ ನಗರಗಳಲ್ಲಿ ತಾವು ವಾಸಿಸುವ ಪ್ರದೇಶಗಳಲ್ಲಿ ಕೆಲಸ ಮಾಡುವ ಸ್ಥಳಗಳಲ್ಲಿ ಸ್ವಚ್ಛತಾ ಆಂದೋಲನವನ್ನು ಕೈಗೆತ್ತಿಕೊಳ್ಳಲಾಗಿದೆ.ಇದರಿಂದ ಉತ್ತಮ ಪರಿಸರ ನಿರ್ಮಾಣವಾಗುತ್ತಿದೆ.ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿಯಾಗುತ್ತಿದ್ದು ಇನ್ನೂ ಉತ್ತಮಗೊಳ್ಳಬೇಕಿದೆ ಜನರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿದೆ. ಸಮೂಹ ಮಾಧ್ಯಮಗಳು ಇದನ್ನು ಯಶಸ್ವಿಗೊಳಿಸುವಲ್ಲಿ ಪೂರ್ಣ ಸಹಕಾರ ನೀಡುತ್ತಿವೆ. ದೇಶದಾದ್ಯಂತ ಈ ಅಭಿಯಾನವು ಉತ್ತಮವಾಗಿ ಅನುಷ್ಠಾನಗೊಳ್ಳುತ್ತಿರುವುದು ಸಂತೋಷದ ವಿಷಯ.

**ಉಪಸಂಹಾರ :** ಸ್ವಚ್ಛ ಭಾರತ ನಿರ್ಮಾಣದ ಕನಸನ್ನು ನನಸು ಮಾಡೋಣ ಈ ಯೋಜನೆಯನ್ನು ಸಾಕಾರಗೊಳಿಸುವಲ್ಲಿ ಪ್ರತಿವಾರ ಕೇವಲ ಎರಡು ಗಂಟೆಗಳ ಅವಧಿಯನ್ನು ಮೀಸಲಿಡೋಣ ಈ ಮೂಲಕ ಪ್ರಧಾನ ಮಂತ್ರಿಗಳ ಕನಸನ್ನು ನನಸಾಗಿಸುವುದರ ಮೂಲಕ ಅಭಿಯಾನವನ್ನು ಯಶಸ್ವಿಗೊಳಿಸೋಣ.

## ತ್ಯಾಜ್ಯವಸ್ತುಗಳ ನಿರ್ವಹಣೆ

**ಪ್ರಸ್ತಾವನೆ :** ಕಸದ ಸಂಗ್ರಹಣೆ, ಸಂಸ್ಕರಣೆ, ಪುನರ್ಬಳಕೆ ಇಂದು ಮಾನವನ ಭೌತಿಕ ಪರಿಸರ ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಕೈಗಾರಿಕೀಕರಣ, ನಗರೀಕರಣ, ಸಂಸ್ಕೃತೀಕರಣ, ಜಾಗತೀಕರಣದ ಅಬ್ಬರದಲ್ಲಿ ದಿನದಿಂದ ದಿನಕ್ಕೆ, ಕ್ಷಣದಿಂದ ಕ್ಷಣಕ್ಕೆ ತ್ಯಾಜ್ಯವಸ್ತುಗಳ ನಿರ್ವಹಣೆ ಒಂದು ಸಮಸ್ಯೆಯಾಗುತ್ತಿದೆ.

**ವಿಷಯ ನಿರೂಪಣೆ :**ಮಾನವನು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸಿ ಬಿಸಾಡುವ ನಿರುಪಯುಕ್ತ ವಸ್ತುಗಳೇ ತ್ಯಾಜ್ಯವಸ್ತುಗಳು. ಇವುಗಳಲ್ಲಿ ಮೂರು ವಿಧ.ಘನತ್ಯಾಜ್ಯವಸ್ತುಗಳು, ದ್ರವತ್ಯಾಜ್ಯವಸ್ತುಗಳು ಮತ್ತು ಅನಿಲತ್ಯಾಜ್ಯ ವಸ್ತುಗಳು.ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ ಪರಿಸರ ನಾಶವಾಗುತ್ತದೆ.ಮೊದಲ ಹಂತದಲ್ಲಿ ಮನೆ, ಕಚೇರಿ ಹಾಗೂ ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ತ್ಯಾಜ್ಯವಸ್ತುಗಳನ್ನು ಸಂಗ್ರಹಿಸಲು, ವೈಜ್ಞಾನಿಕರೀತಿಯಲ್ಲಿ ವಿಂಗಡಿಸಲು ಸೂಕ್ತವಾದ ವ್ಯವಸ್ಥೆ ಮಾಡಿಕೊಳ್ಳಬೇಕು.ಮರುಬಳಕೆಗೆ ಯೋಗ್ಯವಾದ ತ್ಯಾಜ್ಯವಸ್ತುಗಳನ್ನು ಮರುಬಳಕೆಗೂ ಮರುಬಳಕೆ ಮಾಡಲಾಗದ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ದಹಿಸಿಬೇಕು ಅಥವಾ ಭೂಮಿಯಲ್ಲಿ ಹೂಳಬೇಕು.ಅಮೆರಿಕದಲ್ಲಿ ಪ್ರತಿವರ್ಷ ರಿಸೈಕಲಿಂಗ್ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ.ತ್ಯಾಜ್ಯವಸ್ತುಗಳಿಂದ ಸುಂದರ ಕಲಾಕೃತಿಗಳನ್ನು ತಯಾರಿಸುತ್ತಾರೆ.ನದಿಗಳನ್ನು ದತ್ತು ತೆಗೆದುಕೊಂಡು ತ್ಯಾಜ್ಯವಸ್ತುಗಳು ನದಿಗೆ ಸೇರದಂತೆ ನಿಗವಹಿಸುತ್ತಾರೆ.ವಿಯೆನ್ನಾದಲ್ಲಿ ದಹನಕ್ರಿಯಾ ಸ್ಥಾವರ ನಿರ್ಮಿಸಿರುತ್ತಾರೆ.

**ಉಪಸಂಹಾರ :**ತ್ಯಾಜ್ಯವಸ್ತುಗಳ ನಿರ್ವಹಣೆ ಮಾಡುವ ಕಾರ್ಯದಲ್ಲಿ ವಿದ್ಯಾರ್ಥಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಕಾಂಪೋಸ್ಟ ತಯಾರಿಕೆ, ರಿಸೈಕಲಿಂಗ್ ಮಾಡುವುದನ್ನು ಹವ್ಯಾಸ ಮಾಡಿಕೊಂಡರೆ ಸ್ವಚ್ಛ ಭಾರತ ಅಭಿಯಾನಕ್ಕೆ ಚೊಚ್ಚಲು ಕಾಣಿಕೆ ನೀಡಿದಂತಾಗುತ್ತದೆ.ಈ ಬಗ್ಗೆ ಜನರಿಗೆ ಅರಿವನ್ನು ಉಂಟುಮಾಡುವ ಕಾರ್ಯಕ್ರಮವನ್ನು ಏರ್ಪಡಿಸಬೇಕು.ಇದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

## ಲೇಖಕರ / ಕವಿಗಳ ಪರಿಚಯ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | ಶಬರಿ | ಪು. ತಿ. ನರಸಿಂಹಾಚಾರ್ | ಕ್ರಿ. ಶ. 1905 | ಮಂಡ್ಯ ಜಿಲ್ಲೆಯ ಮೇಲುಕೋಟೆ | ಶಬರಿ ಗೀತ ನಾಟಕ<br>ಶ್ರೀಹರಿ ಚರಿತೆ<br>ಹಂಸ ದಮಯಂತಿ | ಪಂಪ ಪ್ರಶಸ್ತಿ<br>ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 2 | ಅಮೆರಿಕಾದಲ್ಲಿ ಗೊರೂರು | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಕ್ರಿ. ಶ. 1904 | ಹಾಸನ ಜಿಲ್ಲೆಯ ಗೊರೂರು | ಅಮೆರಿಕಾದಲ್ಲಿ ಗೊರೂರು,<br>ಮೆರವಣಿಗೆ | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,<br>ಗೌರವ ಡಿ. ಲಿಟ್. |
| 3 | ಜೀವನದೃಷ್ಟಿ | ಡಾ. ವಿ. ಕೃ. ಗೋಕಾಕ್ 'ವಿನಾಯಕ' | ಕ್ರಿ. ಶ. 1909 | ಹಾವೇರಿ ಜಿಲ್ಲೆಯ ಸವಣೂರು | ಜೀವನಪಾಠಗಳು,<br>ಸಮುದ್ರಗೀತೆಗಳು,<br>ಭಾರತ ಸಿಂಧೂರಶ್ಮಿ | ಭಾರತೀಯ ಜ್ಞಾನಪೀಠ ಪ್ರಶಸ್ತಿ,<br>ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, |
| 4 | ಧರ್ಮಸಮದೃಷ್ಟಿ | | | | | |
| 5 | ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ | ಡಿ. ಎಸ್. ಜಯಪ್ಪಗೌಡ | ಕ್ರಿ. ಶ. 1947 | ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿ | ಸರ್. ಎಂ. ವಿಶ್ವೇಶ್ವರಯ್ಯ ಅವರ ಕಾರ್ಯಸಾಧನೆಗಳು,<br>ಕರ್ನಾಟಕದ ಕಡಲಾಚೆಯ ಸಂಪರ್ಕಗಳು<br>ಮೈಸೂರು ಒಡೆಯರು | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,<br>ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನ |
| 6 | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ಕ್ರಿ. ಶ. 1949 | ಮೈಸೂರು ಜಿಲ್ಲೆಯ ದೇವನೂರು | ಎದೆಗೆ ಬಿದ್ದ ಅಕ್ಷರ,<br>ಕುಸುಮ ಬಾಲೆ,<br>ದ್ಯಾವನೂರು | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 7 | ವೃಕ್ಷಸಾಕ್ಷಿ | ದುರ್ಗಸಿಂಹ | ಕ್ರಿ. ಶ. ಸು. 1031 | ಕಿಸುಕಾಡು ನಾಡಿನ ಸಯ್ಯಡಿ | ಕರ್ನಾಟಕ ಪಂಚತಂತ್ರಂ | |
| 8 | ವ್ಯಾಘ್ರಗೀತೆ | ಎ. ಎನ್. ಮೂರ್ತಿರಾವ್ | ಕ್ರಿ. ಶ. 1900 | ಸಮಗ್ರ ಲಲಿತ ಪ್ರಬಂಧಗಳು | ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು | ಪಂಪ ಪ್ರಶಸ್ತಿ<br>ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |

## ಲೇಖಕರ / ಕವಿಗಳ ಪರಿಚಯ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | ಎಮ್ಮ ನುಡಿಗೇಳ್ | ಆದಿಕವಿ ಪಂಪ | ಕ್ರಿ. ಶ. ಸು. 941 | ವೆಂಗಿಪಳು | ಆದಿಪುರಾಣ, ವಿಕ್ರಮಾರ್ಜುನ ವಿಜಯಂ | ಕವಿತಾ ಗುಣಾರ್ಣವ, ಸರಸ್ವತೀ ಮಣೀಹಾರ, ಸಂಸಾರಸಾರೋದಯ |
| 2 | ಹಕ್ಕಿ ಹಾರುತಿದೆ ನೋಡಿದಿರಾ | ದ. ರಾ. ಬೇಂದ್ರೆ 'ಅಂಬಿಕಾತನಯದತ್ತಾ' | ಕ್ರಿ. ಶ. 1896 | ಧಾರವಾಡ | ಗರಿ, ನಾಕುತಂತಿ, ನಾದಲೀಲೆ | ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ/ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. |
| 3 | ಹಲಗಲಿಯ ಬೇಡರು | | | | | |
| 4 | ವಚನ ಸೌರಭ | ಜೇಡರ ದಾಸಿಮಯ್ಯ 'ರಾಮನಾಥ' | ಕ್ರಿ. ಶ. ಸು. 1150 | ಯಾದಗಿರಿ ಜಿಲ್ಲೆಯ ಮುದೇನೂರು | ವಚನಗಳು | |
| | | ಬಸವಣ್ಣ 'ಕೂಡಲ ಸಂಗಮದೇವ' | ಕ್ರಿ. ಶ. ಸು. 1260 | ಬಿಜಾಪುರ ಜಿಲ್ಲೆಯ ಬಾಗೇವಾಡಿ | ವಚನಗಳು | |
| 5 | ಸಂಕಲ್ಪಗೀತೆ | ಡಾ. ಜಿ. ಎಸ್. ಶಿವರುದ್ರಪ್ಪ | ಕ್ರಿ. ಶ. 1926 | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ | ಎದೆ ತುಂಬಿ ಹಾಡಿದೆನು, ಸಾಮಗಾನ, ಚೆಲುವು | ರಾಷ್ಟ್ರಕವಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ. |
| 6 | ಕೌರವೇಂದ್ರನ ಕೊಂದೆ ನೀನು | ಗದುಗಿನ ನಾರಣಪ್ಪ 'ಕುಮಾರ ವ್ಯಾಸ' | ಕ್ರಿ. ಶ. ಸು. 1430 | ಗದಗ ಪ್ರಾಂತ್ಯದ ಕೋಳಿವಾಡ | ಕರ್ಣಾಟ ಭಾರತ ಕಥಾಮಂಜರಿ | ರೂಪಕ ಸಾಮ್ರಾಜ್ಯ ಚಕ್ರವರ್ತಿ |
| 7 | ವೀರಲವ | ಲಕ್ಷ್ಮೀಶ | ಕ್ರಿ. ಶ. ಸು. 1550 | ಚಿಕ್ಕಮಗಳೂರು ಜಿಲ್ಲೆಯ ದೇವನೂರು | ಜೈಮಿನಿ ಭಾರತ | ಉಪಮಾಲೋಲ, ಕರ್ನಾಟ ಕವಿ ಚೂತವನ ಚೈತ್ರ |
| 8 | ಸಂಕಟಕೆ ಗಡಿ ಇಲ್ಲ | ದು. ಸರಸ್ವತಿ | ಕ್ರಿ. ಶ. 1963 | ಬೆಂಗಳೂರು | ಹೆಣಿದರೆ ಜೇಡನಂತೆ, ಜೀವ ಸಂಪಿಗೆ | |

**ಕರ್ನಾಟಕ ಸರ್ಕಾರ**
**ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,**
**ನೃಪತುಂಗ ರಸ್ತೆ, ಬೆಂಗಳೂರು – 560 001**
***ಮತ್ತು***
**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**
**ನೃಪತುಂಗ ರಸ್ತೆ, ಬೆಂಗಳೂರು.**
***ಸಹಯೋಗ***
**ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ,**
**ಮಲ್ಲೇಶ್ವರಂ, ಬೆಂಗಳೂರು.**

# ಸಮೃದ್ಧಿ

**ಹತ್ತನೆಯ ತರಗತಿ ಫಲಿತಾಂಶ ಉತ್ತಮೀಕರಣಕ್ಕಾಗಿ**
**ಪ್ರಶ್ನೋತ್ತರ ಮಾಲಿಕೆ**

## ಪ್ರಥಮ ಭಾಷೆ ಕನ್ನಡ

**ಆಯೋಜಕರು**

**ಶ್ರೀ ಮೊಹಮ್ಮದ್ ಮೊಹಸಿನ್,**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560 001.**

**ಪರಿಕಲ್ಪನೆ**

**ಶ್ರೀಮತಿ ಜ್ಹೋಹರಾ ಜಬೀನ್ ಎಂ.**
**ನಿರ್ದೇಶಕರು,**
**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

## ಸಂಯೋಜಕರು

**ಶ್ರೀಮತಿ ಮಂಜುಳ ಆರ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,

**ಶ್ರೀ ಮರಿಗೌಡ ಬಿ.ಎನ್.**
ಹಿರಿಯ ಸಹಾಯಕ ನಿರ್ದೇಶಕರು,
ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ

## ಸಲಹೆ ಮತ್ತು ಮಾರ್ಗದರ್ಶನ

**ಶ್ರೀಮತಿ ನಾಗರತ್ನ ಎಚ್.**
ಉಪನ್ಯಾಸಕರು
ಸರ್ಕಾರಿ ಶಿಕ್ಷಕ ಶಿಕ್ಷಣ ವಿದ್ಯಾಲಯ,
ಮಂಗಳೂರು.

## ಸಂಪನ್ಮೂಲ ಶಿಕ್ಷಕರು

**ಶ್ರೀ ವೆಂಕಟಾಚಲ ಜಿ.**
ಉಪಪ್ರಾಂಶುಪಾಲರು
ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಮ್ಮರಗಾಲ,
ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ.

**ಶ್ರೀ ರಾಮನಾಥ ಹೆಗಡೆ**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಬೀರಿಹುಂಡಿ,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ ಜಿ. ವಿ.ರಾಜುಶೆಟ್ಟಿ**
ಕನ್ನಡ ಭಾಷಾ ಶಿಕ್ಷಕರು
ಸ. ಪ. ಪೂ.ಕಾಲೇಜು, ಹೊಮ್ಮರಗಳ್ಳಿ,
ಹೆ. ದೇ. ಕೋಟೆ ತಾಲೂಕು, ಮೈಸೂರು ಜಿಲ್ಲೆ.

**ಶ್ರೀ ಬಾಲಕೃಷ್ಣಯ್ಯ ಬಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಬೋಗಾದಿ,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ ಸಂತೋಷ್ ಕುಮಾರ್ ಕೆ.**
ಕನ್ನಡ ಭಾಷಾ ಶಿಕ್ಷಕರು
ಜಿ. ಎಂ. ಸಿ. ಜಿ. ಪ್ರೌಢಶಾಲೆ, ಧೂಳೇಹೊಳೆ,
ಹರಿಹರ ತಾಲೂಕು, ದಾವಣಗೆರೆ ಜಿಲ್ಲೆ.

**ಶ್ರೀ. ಅಶ್ವತ್ಥನಾರಾಯಣ ಪಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ವರಕೋಡು,
ಮೈಸೂರು ತಾಲೂಕು ಮತ್ತು ಜಿಲ್ಲೆ.

**ಶ್ರೀ.ಶಿವಣ್ಣ ಎಚ್.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಚೆನ್ನಾಲಿಂಗನ ಹಳ್ಳಿ,
ಕೊಳ್ಳೇಗಾಲ ತಾಲೂಕು, ಚಾ.ನಗರ ಜಿಲ್ಲೆ.

**ಶ್ರೀ.ರವೀಂದ್ರನಾಥಾಚಾರ್ ಕೆ. ಪಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಹೆಚ್. ಬಸವಾಪುರ,
ದಾವಣಗೆರೆ ತಾಲೂಕು ಮತ್ತು ಜಿಲ್ಲೆ.

**ಶ್ರೀ. ರವೀಶ್ ಕುಮಾರ್ ಬಿ.**
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ,
ಮೈಸೂರು ತಾಲೂಕು ಮತ್ತು ಜಿಲ್ಲೆ

# ಆಶಯ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು, ಇವರು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ 2014–15 ನೇ ಸಾಲಿನಲ್ಲಿ ಜಾರಿಗೊಂಡ ಹತ್ತನೆಯ ತರಗತಿಯ ನೂತನ ಪಠ್ಯಪುಸ್ತಕವನ್ನು ಆಧರಿಸಿ 2015ರ ಏಪ್ರಿಲ್ ಮಾಹೆಯಲ್ಲಿ ನಡೆಯುವ ನೂತನ ಪರೀಕ್ಷಾ ಪದ್ಧತಿಗೆ ಅನುಗುಣವಾಗಿ ಕಲಿಕಾ ಗುಣಮಟ್ಟ ಮತ್ತು ಸಾರ್ವತ್ರಿಕ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳ ಕಲಿಕಾವೇಗವನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದ್ದಾರೆ. ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರು ಸಿದ್ಧಪಡಿಸಿದ್ದಾರೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಶ್ರಮಿಸುವುದು. ಈ ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕರು ಮತ್ತು ಅವರ ಕಾರ್ಯಾಲಯದ ಸಿಬ್ಬಂದಿ ವರ್ಗದವರಿಗೆ ಈ ಕಾರ್ಯದ ಸಫಲತೆಗಾಗಿ ಶ್ಲಾಘನೆಗಳು ಸಲ್ಲುತ್ತವೆ.

**ಶ್ರೀ ಮೊಹಮ್ಮದ್ ಮೊಹಸಿನ್**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**
**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಮುನ್ನುಡಿ

**ಆತ್ಮೀಯ ಶಿಕ್ಷಕ ಮಿತ್ರರೇ,**

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು ಇವರ ಸಹಯೋಗದೊಂದಿಗೆ ಹತ್ತನೆಯ ತರಗತಿಯ ಕಲಿಕೆಯನ್ನು ಗುಣಾತ್ಮಕವಾಗಿ ಉತ್ತಮಪಡಿಸುವ ಸಲುವಾಗಿ ಹಾಗೂ ಎಸ್.ಎಸ್.ಎಲ್.ಸಿ.ಪರೀಕ್ಷೆಯ ಫಲಿತಾಂಶವನ್ನು ಉನ್ನತೀಕರಿಸುವ ದೃಷ್ಟಿಯಿಂದ ಎಲ್ಲಾ ಭಾಷೆಗಳು ಮತ್ತು ಕೋರ್ ವಿಷಯಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ವೇಗವನ್ನು ಅನುಸರಿಸಿ, ಕಲಿಕೆಗೆ ಸಹಾಯಕವಾಗುವಂತೆ ಪ್ರಶ್ನೋತ್ತರ ಮಾಲಿಕೆಗಳನ್ನು ರಚಿಸಿದೆ.ಇದನ್ನು ರಾಜ್ಯದ ವಿವಿಧ ಜಿಲ್ಲೆಗಳ ಪ್ರೌಢಶಾಲೆಗಳ ಕರ್ತವ್ಯನಿರತ ವಿಷಯವಾರು ಆಯ್ದ ಸಂಪನ್ಮೂಲ ಶಿಕ್ಷಕರಿಂದ ಸಿದ್ಧಪಡಿಸಲಾಗಿದೆ.ಈ ಕಲಿಕಾ ಸಹಾಯಕಗಳನ್ನು ಶಿಕ್ಷಕರು ಪಠ್ಯಪುಸ್ತಕಗಳಿಗೆ ಪೂರಕವಾಗಿ ಬಳಸಿಕೊಂಡು ವಿದ್ಯಾರ್ಥಿಗಳ ಯಶಸ್ಸಿಗೆ ಕಾರ್ಯಪ್ರವೃತ್ತರಾಗಬೇಕೆಂಬುದು ನಮ್ಮ ಆಶಯವಾಗಿದೆ.ರಾಜ್ಯದ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರು ಮತ್ತು ವಿಷಯವಾರು ಶಿಕ್ಷಕರು ಇದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳ ಉತ್ತಮ ಫಲಿತಾಂಶಕ್ಕಾಗಿ ಶ್ರಮಿಸುವುದು. ಈ ಕಾರ್ಯದಲ್ಲಿ ಪಾಲ್ಗೊಂಡು ಕಿರು ಹೊತ್ತಗೆಗಳನ್ನು ಹೊರತರಲು ಶ್ರಮಿಸಿದ ಎಲ್ಲಾ ಅಧಿಕಾರಿವರ್ಗದವರಿಗೂ, ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯಗಳ ಪ್ರವಾಚಕರಿಗೂ, ಉಪನ್ಯಾಸಕ ವರ್ಗದವರಿಗೂ, ಸಂಪನ್ಮೂಲ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕ ಧನ್ಯವಾದಗಳು.

**ಶ್ರೀಮತಿ ಜ಼ೋಹರಾ ಜಬೀನ್ ಎಂ.**

**ನಿರ್ದೇಶಕರು,**

**ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ,**

**ಆಯುಕ್ತರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001.**

.

# ಸೂಚನೆಗಳು

- ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಅದಕ್ಕಾಗಿ ನೀಡಿರುವ **'ಚೇತನ', 'ಸಮೃದ್ಧಿ', ಹಾಗೂ 'ಸಮರ್ಥ'** ಎಂಬ ಹೊತ್ತಗೆಗಳನ್ನು ಶಿಕ್ಷಕರು ಓದಿ ಮನನ ಮಾಡಿಕೊಳ್ಳುವುದು.

- ವಿದ್ಯಾರ್ಥಿಗಳನ್ನು ಅವರ ಕಲಿಕಾ ವೇಗದ ಸಾಮರ್ಥ್ಯಕ್ಕೆ ಅನುಗುಣವಾಗಿ
  (1) ನಿಧಾನ ಗತಿಯಲ್ಲಿ ಕಲಿಯುವವರು,
  (2) ಸಾಧಾರಣ ವೇಗದಲ್ಲಿ ಕಲಿಯುವವರು ಮತ್ತು
  (3) ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರು
  ಎಂದು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳುವುದು.

- ನಿಧಾನ ಗತಿಯಲ್ಲಿ ಕಲಿಯುವವರಿಗೆ ನಿಗದಿತ ಸಮಯದಲ್ಲಿ ಪರೀಕ್ಷೆಯನ್ನು ಎದುರಿಸಲು ಪಠ್ಯಾಂಶದಲ್ಲಿ ಅತಿಮುಖ್ಯವೆನಿಸಿದ ಕೆಲವೇ ಅಂಶಗಳನ್ನು **'ಚೇತನ'** ಕಲಿಕಾ ಸಹಾಯಕದಲ್ಲಿ ಸಂಗ್ರಹಿಸಿದ್ದು, ಅವುಗಳನ್ನು ಮೊದಲು ಕಲಿಯುಂತೆ ಮಾಡುವುದು.

- ಸಾಧಾರಣ ವೇಗದಲ್ಲಿ ಕಲಿಯುವವರಿಗೆ ಮೊದಲು **'ಚೇತನ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಸಮೃದ್ಧಿ'** ಹಾಗೂ ಕೊನೆಯಲ್ಲಿ **'ಸಮರ್ಥ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಶೀಘ್ರಗತಿಯಲ್ಲಿ ಸವಾಲಿನೊಂದಿಗೆ ಕಲಿಯುವವರಿಗೆ ಮೊದಲು **'ಚೇತನ'** ಹಾಗೂ **'ಸಮೃದ್ಧಿ'** ಕಲಿಕಾ ಸಹಾಯಕದ ಪಠ್ಯಾಂಶಗಳನ್ನು ಕಲಿಸಿ, ನಂತರದಲ್ಲಿ **'ಸಮರ್ಥ'** ಕಲಿಕಾ ಸಹಾಯಕದ ಪಠ್ಯಾಂಶಗಳ ಹೆಚ್ಚು ಹೆಚ್ಚಿನ ಕಲಿಕೆಗೆ ಅವಕಾಶ ಮಾಡಿಕೊಡುವುದು.

- ಈ ಕಲಿಕಾ ಸಹಾಯಕಗಳ ಪಠ್ಯಾಂಶಗಳನ್ನು ಶಾಲಾವಧಿಯ ಪೂರ್ವದ ವಿಶೇಷ ತರಗತಿ ಮತ್ತು ಶಾಲಾವಧಿಯ ನಂತರದ ವಿಶೇಷ ತರಗತಿಗಳಲ್ಲಿ ಸತತ ಅಭ್ಯಾಸ ಮಾಡಿಸುವುದು.

- ನಿಗದಿತ ವೇಳಾಪಟ್ಟಿಯಂತೆ ತರಗತಿಯ ಅವಧಿಗಳಲ್ಲಿ ವಾರ್ಷಿಕ ಪಾಠಯೋಜನೆಯಂತೆ ಕಲಿಕಾ ಮತ್ತು ಬೋಧನಾ ಚಟುವಟಿಕೆಗಳನ್ನು ನಡೆಸುವುದು.

- ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಓದುವ ಅಭ್ಯಾಸವನ್ನು ಕಡ್ಡಾಯವಾಗಿ ರೂಢಿಸುವುದು.

- ನಿರಂತರ ಅಭ್ಯಾಸ ಮತ್ತು ಪುನರವಲೋಕನಕ್ಕೆ ಹೆಚ್ಚು ಒತ್ತು ನೀಡುವುದು.

- **'ಚೇತನ', 'ಸಮೃದ್ಧಿ', ಹಾಗೂ 'ಸಮರ್ಥ'** ಇವುಗಳು ಕೇವಲ ಕಲಿಕಾ ಸಹಾಯಕಗಳೇ ಹೊರತು ಪರೀಕ್ಷಾ ತಯಾರಿಕೆಗೆ ಅಂತಿಮವಲ್ಲ ಎಂಬುದು ಗಮನಿಸಬೇಕಾದ ಅಂಶ.

# ಗದ್ಯವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸುವುದು.

# ಗದ್ಯಭಾಗ

## ಗದ್ಯಪಾಠ – 1.

**ಶಬರಿ** **– ಪು. ತಿ. ನರಸಿಂಹಾಚಾರ್ಯ**

ನಿನ್ನೆಳಮೆ ಮೃದುತೆಯನು ಅವನ ಸ್ಪರ್ಶಕೆ ತೆರದೆ । ಬರಿಗಾಳಿಗಾರಿರುವ ನಿನ್ನೆ ಚಂದಳಿರೇ, ।

ತುಂಬಿಬಂಬಲ ಹೊಗಳ್ವಿಗಿಂಬಾದ ಕಂಪಿನಿಂ । ದವನಸುವನುದ್ದೀಪಿಸದೆ ಸೊರಗಿದಲರೇ ।

ಅವನ ಪ್ರಾಣಾಹುತಿಗೆ ಬರದೆ ರುಚಿಹದಕೆಟ್ಟು । ಹುಳುವಿಗಾಸರೆಯಾದ ಎಲೆ ವನ್ಯ ಫಲವೇ ।

ಮೀಸಲಾಗದೆ ಇಂತು ಮಾಸಲಾಗುವ ಇವನು । ಮರಮರಳಿ ಹೊಸತರಿಂದಣಿಗೈವ ಛಲವೇ।

**ಪ್ರಶ್ನೆಗಳು :**

1. ಶಬರಿಯು ತಳಿರು ಹೂ, ಹಣ್ಣುಗಳು ರಾಮನ ಸೇವೆಗೆ ಮೀಸಲಾಗಲಿಲ್ಲವೆಂದು ಹೇಗೆ ಹೇಳಿದ್ದಾಳೆ?

2. ಶಬರಿಗಿರುವ ಛಲ ಯಾವುದು?

**ಉತ್ತರಗಳು :**

1. ರಾಮನ ಸ್ಪರ್ಶಕೆ ಬಾರದೆ ಬರಿಯ ಗಾಳಿಗೆ ಸಿಲುಕಿ ಮೃದುತೆಯನು ಕಳೆದುಕೊಂಡ ಚಂದಳಿರೇ, ದುಂಬಿಗಳಿಂದ ಹೊಗಳಿಸಿಕೊಂಡರೂ ರಾಮನ ಉಸಿರನ್ನು ಉದ್ದೀಪಿಸದೆ ಸೊರಗಿದ ಕಂಪು ತುಂಬಿದ ಹೂಗಳೇ, ರಾಮನ ಪ್ರಾಣಾಹುತಿಗೆ ಬಾರದೆ ಹುಳುವಿಗಾಸರೆಯಾಗಿ ರುಚಿಹದಗೆಟ್ಟ ಹಣ್ಣುಗಳೇ ಎಂದು ತಳಿರು ಹೂ ಹಣ್ಣುಗಳನ್ನು ಕುರಿತು ಹೇಳಿದ್ದಾಳೆ.

2. ರಾಮನ ಸೇವೆಗೆ ಮೀಸಲಾಗದೆ ಕೆಟ್ಟುಹೋಗುವ ತಳಿರು, ಹೂ, ಹಣ್ಣುಗಳು ಸದಾ ರಾಮನ ಸೇವೆಗೆ ಮೀಸಲಾಗಿರುವಂತೆ, ಮತ್ತೆ ಮತ್ತೆ ಹೊಸ ಹೊಸ ತಳಿರು ಹೂ ಹಣ್ಣುಗಳಿಂದ ಪ್ರತಿನಿತ್ಯವೂ ಸಿದ್ಧಪಡಿಸುವುದೇ ಶಬರಿಯ ಛಲವಾಗಿದೆ.

## ಗದ್ಯಪಾಠ – 2.

**ಅಮೆರಿಕದಲ್ಲಿ ಗೊರೂರು.** **ಗೊರೂರು ರಾಮಸ್ವಾಮಿ ಅಯ್ಯಂಗಾರ್**

ನಾನು ಬಲಗಡೆಯ ಮೊದಲನೆಯ ಮನೆಗೆ ಹೋಗಿ ನೋಡಿದೆ.ಬೀಗ ಹಾಕಿತ್ತು.ಎಡಗಡೆಯ ಎರಡು ಮನೆಗಳಿಗೆ ಹೋದೆ, ಯಾರೂ ಇರಲಿಲ್ಲ. ಬೀದಿಯಲ್ಲಿ ಯಾರಾದರೂ ಇದ್ದಾರೆಯೇ ಎಂದು ನೋಡಿದೆ.ಅಮೆರಿಕದ ಬೀದಿಯಲ್ಲಿ ನಡೆದುಕೊಂಡು ಹೋಗುವವರೇ ವಿರಳ.ಕಾರಿನಲ್ಲಿ 65 ರಿಂದ 70 ಮೈಲು ವೇಗದಲ್ಲಿ ಗರಹೊಡೆದವರಂತೆ ನುಗ್ಗುತ್ತಿರುತ್ತಾರೆ.ಇಷ್ಟೆಲ್ಲ ಗದ್ದಲ ಮಾಡುತ್ತಿದ್ದರೂ ಮನೆಯೊಳಗಿನ ವಿದ್ಯುತ್ ಕೊಂಬು ಲಕ್ಷ್ಯವಿಲ್ಲದೆ ಒಂದೇ ಸಮನಾಗಿ ಕೂಗುತ್ತಲೇ ಇತ್ತು.

ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ಪ್ರೈಮರಿ ಶಾಲೆ ಇದ್ದಿತು. ಅದಾಗ ಪಾಠಶಾಲೆಯ ಹುಡುಗರನ್ನು ವಿರಾಮಕ್ಕಾಗಿ ಬಿಟ್ಟುದನ್ನು ನೋಡಿ, ನನ್ನ ಹೆಂಡತಿ " ಆ ಸ್ಕೂಲಿಗೆ ಹೋಗಿ ಯಾರಾದರೂ ಹುಡಗರನ್ನೋ, ಮೇಷ್ಟ್ರನ್ನೋ ಕರೆದುಕೊಂಡು ಬನ್ನಿ. ಮನೆ ಸುಟ್ಟು ಹೋಗುವುದರೊಳಗಾಗಿ ಬನ್ನಿ!" ಎಂದು ಹೇಳಿದಳು. ಅವಳಿಗೂ ನನ್ನ ಮೇಲೆ ಕೋಪ. ಹೆಂಗಸರೂ ಮಕ್ಕಳೂ ವಿದ್ಯುಚ್ಛಕ್ತಿ, ಯಂತ್ರದ ಏಣಿ ಇವನ್ನೆಲ್ಲ ನಡೆಸುವುದನ್ನು ಕಲಿತಿರುವಾಗ, ನಾನು ಯಾಕೆ ಅದನ್ನು ಸ್ವಲ್ಪವೂ ಕಲಿಯಲಿಲ್ಲ ಎಂದು ಅವಳು ನನ್ನನ್ನೇ ಕೋಪದಿಂದ ನೋಡುತ್ತ "ನನಗೆ ಇಂಗ್ಲಿಷ್ ಬಂದಿದ್ದರೆ, ನಾನು

ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೇ ಕರೆಸಿಬಿಡುತ್ತಿದ್ದೆ." ಎನ್ನುತ್ತಿರುವಂತೆ ನಾನು ಸ್ಕೂಲಿನತ್ತ ಹೆಜ್ಜೆ ಹಾಕಿದೆ. ಹಾಗೆ ಹೋಗುವಾಗ ಯಾವನಾದರೂ ದೊಡ್ಡ ಹುಡುಗ ಸಿಕ್ಕರೆ ಅವನನ್ನೇ ಮನೆಗೆ ಕರೆದುಕೊಂಡು ಹೋಗೋಣ ಎಂದು ಶಾಲಾ ಆವರಣವನ್ನು ಪ್ರವೇಶಿಸಿ, ಎಲ್ಲರನ್ನೂ ನೋಡುತ್ತಿದ್ದೆ. ನನ್ನನ್ನು ನೋಡಿದ ಕೂಡಲೇ ಅವರೆಲ್ಲ ಅಲ್ಲಿಂದ ಎದ್ದು ನಿಧಾನವಾಗಿ ನನ್ನನ್ನೇ ದುರುದುರನೆ ನೋಡುತ್ತ ಸ್ಕೂಲಿನ ಕಡೆಗೆ ಹೊರಟೇ ಹೋದರು.

**ಪ್ರಶ್ನೆಗಳು :**

1. ಗೊರೂರರ ಹೆಂಡತಿ ಕೋಪಿಸಿಕೊಂಡು " ನಾನು ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೇ ಕರೆಸಿ ಬಿಡುತ್ತಿದ್ದೆ" ಎನ್ನಲು ಕಾರಣವೇನು?

2. ಗೊರೂರರು ವಿದ್ಯುತ್ ಒಲೆಯ ಕೊಂಬಿನ ಶಬ್ದ ನಿಲ್ಲಿಸಲು ಮಾಡಿದ ಪ್ರಯತ್ನಗಳು ಯಾವುವು?

**ಉತ್ತರಗಳು :**

1. ವಿದ್ಯುತ್ ಒಲೆಯು ಒಂದೇ ಸಮನೆ ಕೂಗುತ್ತಿದ್ದು, ಏನಾಗಿದೆ ಎಂದು ತಿಳಿಯದೆ ನಿಲ್ಲಿಸಲಾಗದ್ದರಿಂದ ಸಹಾಯಕ್ಕಾಗಿ ಗೊರೂರರು ಹುಡುಕುತ್ತಿರುವುದನ್ನು ನೋಡಿದ ಅವರ ಹೆಂಡತಿ ಅಮೆರಿಕದಲ್ಲಿ ಹೆಂಡತಿ, ಮಕ್ಕಳಾದಿಯಾಗಿ ಎಲ್ಲರೂ ವಿದ್ಯುಚ್ಛಕ್ತಿ, ಯಂತ್ರದ ಏಣಿ ಎಲ್ಲವನ್ನೂ ನಡೆಸುತ್ತಿರುವಾಗ ಗೊರೂರರು ಏನನ್ನೂ ಕಲಿತಿಲ್ಲವೆಂದು ಕೋಪದಲ್ಲಿ ಈ ರೀತಿ ಹೇಳಿದರು.

2. ಗೊರೂರರು ವಿದ್ಯುತ್ ಒಲೆಯ ಶಬ್ದ ನಿಲ್ಲಿಸಲು ಸಹಾಯಕ್ಕಾಗಿ ಮನೆಯ ಎಡ ಬಲ ಭಾಗಗಳ ಮನೆಗಳು, ಬೀದಿಯಲ್ಲಿ ಓಡಾಡುವವರು, ಕಾರಿನಲ್ಲಿ ಹೋಗುವವರು ಯಾರಾದರೂ ಸಿಗಬಹುದೇ ಎಂದು ನೋಡಿದರು. ಯಾರೂ ಸಿಗದಿದ್ದಾಗ ಹತ್ತಿರದಲ್ಲೇ ಇದ್ದ ಶಾಲೆಗೆ ಹೋಗಿ ಸಹಾಯ ಕೇಳಿದರು.

## ಗದ್ಯಪಾಠ – 3.

**ಜೀವನದೃಷ್ಟಿ** **– ವಿ.ಕೃ. ಗೋಕಾಕ್**

ಈ ಮಾತು ಸಾಧಿಸದೆ ಯಾವ ವ್ಯಕ್ತಿತ್ವಕ್ಕೂ ಪೂರ್ಣತೆಯಿಲ್ಲ. ಹೆರವರ ಹಿತ ಚಿಂತನೆ ಮಾಡುವುದು ಸಗುಣಬ್ರಹ್ಮದ ಉಪಾಸನೆಯ ಒಂದು ಭಾಗ.ತನ್ನಂತೆ ಪರರನ್ನು ಬಗೆಯ ಬೇಕಾದ ಕಾರಣ – ತನ್ನಲ್ಲಿಯೂ, ಪರರಲ್ಲಿಯೂ ಒಂದೇ ದೈವಿಕತೆಯು ಗುಪ್ತವಾಗಿ ನೆಲೆಸಿದೆಯೆಂದು, ಇಂಥ ಒಂದು ಸ್ಥೂಲಭಾವನೆಯು ಮನಸ್ಸಿನಲ್ಲಿದ್ದರೂ ಅದನ್ನು ವ್ಯವಹಾರದಲ್ಲಿ ಇಳಿಸುವ ಜಾಣ್ಮೆಯೇ ಒಂದು ಕಲೆ, ಕರ್ಮಕುಶಲತೆ. ಇಂದಿನ ಕಲೋಪಾಸಕನೂ ಅಂತರ್ಜೀವಿಯೂ ಈ ಮಾತನ್ನು ತಿಳಿದು ಅದನ್ನು ಅರಗಿಸಿಕೊಳ್ಳಬೇಕು.ಸಾಮಾಜಿಕ ಪುನರ್ ಘಟನೆಯಲ್ಲಿ ರಷ್ಯದ ಸಮತಾವಾದವೂ ಭಾರತದ ಅಧ್ಯಾತ್ಮವಾದವೂ ರೂಪಗೊಂಡು ಬೆರೆಯಬೇಕಾಗಿದ್ದಂತೆ ಇಂದಿನ ಓರ್ವ ವ್ಯಕ್ತಿಯ ಜೀವನದಲ್ಲಿ ಆಂತರಿಕ ದೃಷ್ಟಿಯ ಹಾಗೂ ಅನ್ಯರ ಹಿತದೃಷ್ಟಿಗಳ ಪ್ರಜ್ಞೆಯ ಸಮ್ಮಿಲನವಾಗಬೇಕಾಗಿದೆ.ರಸವೇ ಜೀವನ. ರಸದ ಸೂಕ್ಷ್ಮತೆ ವಿಶಾಲತೆಗಳ ವ್ಯತ್ಯಯರಹಿತ ವಿಕಾಸವೇ ವ್ಯಕ್ತಿ ಜೀವನ. ಸಮರಸವೇ ಸಹಜೀವನ. ಬರಿ ಸ್ವಾನುಭೂತಿಯಿಂದ ಸಾಗುವ ಜೀವನರಥಕ್ಕೆ ಒಗ್ಗಾಲಿಯ ಭೀತಿಯಿದೆ.ಸಹಾನುಭೂತಿಯು ಅದರ ಜೋಡಣೆಗೆ ಅವಶ್ಯವಾದುದು.

**ಪ್ರಶ್ನೆಗಳು :**

1. ಪೂರ್ಣ ವ್ಯಕ್ತಿತ್ತ್ವಕ್ಕಾಗಿ ಅಂತರ್ಜೀವಿಯು ಅರಗಿಸಿಕೊಳ್ಳಬೇಕಾದ ಅಂಶಗಳಾವುವು?

2. ರಸವೇ ಜೀವನ; ಸಮರಸವೇ ಸಹಜೀವನವಾಗಲು ಅವಶ್ಯವಾದ ಅಂಶಗಳುಯಾವುವು?

**ಉತ್ತರಗಳು :**

1. ಹೆರವರ ಹಿತಚಿಂತನೆ ಮಾಡುವುದು.ತನ್ನಂತೆ ಪರರನ್ನು ಬಗೆಯುವುದು. ತನ್ನಲ್ಲಿಯೂ ಪರರಲ್ಲಿಯೂ ಒಂದೇ ದೈವಿಕತೆಯು ಗುಪ್ತವಾಗಿ ನೆಲೆಸಿದೆಯೆಂದು, ಇಂಥ ಒಂದು ಸ್ಥೂಲಭಾವನೆಯು ಮನಸ್ಸಿನಲ್ಲಿದ್ದರೂ ಅದನ್ನು ವ್ಯವಹಾರದಲ್ಲಿ ಇಳಿಸುವ, ಬಳಸುವ ಕರ್ಮಕುಶಲತೆಯನ್ನು ಅರಿತಿರಬೇಕು.

2. ವ್ಯಕ್ತಿಯ ಜೀವನದಲ್ಲಿ ಸಮತಾವಾದ ಮತ್ತು ಅಧ್ಯಾತ್ಮವಾದಗಳೆರಡೂ ಬೆರೆತು, ಆಂತರಿಕದೃಷ್ಟಿ ಹಾಗೂ ಅನ್ಯರ ಹಿತದೃಷ್ಟಿಗಳ ಪ್ರಜ್ಞೆಯ ಸಮ್ಮಿಲನವಾಗಬೇಕಾಗಿದೆ.ರಸದ ಸೂಕ್ಷ್ಮತೆ ವಿಶಾಲತೆಗಳ ವ್ಯತ್ಯಾಸರಹಿತ ವಿಕಾಸ, ಸ್ವಾನುಭೂತಿ ಮತ್ತು ಸಹಾನುಭೂತಿಗಳ ಜೋಡಣೆ ಸಮರಸ ಜೀವನಕ್ಕೆ ಅವಶ್ಯವಾದ ಅಂಶಗಳಾಗಿವೆ.

## ಗದ್ಯಪಾಠ – 5

## ಭಾಗ್ಯಶಿಲ್ಪಿ.ಸರ್.ಎಂ.ವಿಶ್ವೇಶ್ವರಯ್ಯ – ಡಾ.ಡಿ. ಎಸ್. ಜಯಪ್ಪಗೌಡ

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸುವ ಮೂಲಕ ಹೊಸ ಮನ್ವಂತರಕ್ಕೆ ಅಡಿಪಾಯ ಹಾಕಿದರು.ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು.ಅಷ್ಟೇ ಅಲ್ಲದೆ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು.ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು.ರಾಜ್ಯ ಪ್ರವಾಸ ಮಾಡಿ ಅಜಮಾಯಿಸಿ ಕಾರ್ಯ ನಡೆಸಿದರು. ಸಮರ್ಥ ಕಾರ್ಯ ನಿರ್ವಹಣೆಗಾಗಿ ಸಮಿತಿ ರಚನೆಗೆ ಪ್ರಾಶಸ್ತ್ಯ ನೀಡಿದರು.ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು.'ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ' ಎಂದು ಜನರು ಹಾಡಿ ಹೊಗಳಿದರು.ಗಾಂಧೀಜಿ ಅವರು ಮೈಸೂರಿನ ಆಡಳಿತ ರೀತಿಯನ್ನು ಮುಕ್ತ ಕಂಠದಿಂದ ಹೊಗಳಿದರು.ಇದರಿಂದ 'ಮೈಸೂರು ಮಾದರಿ' ಎಂಬ ಹೊಸ ಆಡಳಿತ ಮಾದರಿ ಜನ್ಮತಾಳಿತು.

**ಪ್ರಶ್ನೆಗಳು :**

1. 'ಮೈಸೂರು ಮಾದರಿ' ಎಂದು ಪ್ರಸಿದ್ಧವಾಗಲು ಆಡಳಿತದಲ್ಲಿ ತಂದ ಸುಧಾರಣೆಗಳಾವುವು?

2. 'ಮೈಸೂರು ಮಾದರಿ' ಆಡಳಿತ ಯಾರು ದಿವಾನರಾಗಿದ್ದಾಗ ಜನ್ಮ ತಾಳಿತು? ಮತ್ತು ಜನರು ಅವರನ್ನು ಏನೆಂದು ಹೊಗಳಿದರು?

**ಉತ್ತರಗಳು :**

1. ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ, ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು, ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದುದು, ಸಮರ್ಥ ಕಾರ್ಯ ನಿರ್ವಹಣೆಗಾಗಿ ಸಮಿತಿ ರಚನೆ, ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ – ಇವು ಮೈಸೂರು ಮಾದರಿ ಎಂದು ಪ್ರಸಿದ್ಧವಾಗಲು ಆಡಳಿತದಲ್ಲಿ ಮಾಡಿದ ಸುಧಾರಣೆಗಳು.

2. 'ಮೈಸೂರು ಮಾದರಿ ಆಡಳಿತ' ವಿಶ್ವೇಶ್ವರಯ್ಯ ಅವರು ದಿವಾನರಾಗಿದ್ದಾಗ ಜನ್ಮತಾಳಿತು. ಜನರು ಅವರನ್ನು 'ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ' ಎಂದು ಹಾಡಿ ಹೊಗಳಿದರು.

## ಗದ್ಯಪಾಠ – 7

**ವೃಕ್ಷಸಾಕ್ಷಿ** **– ದುರ್ಗಸಿಂಹ**

ವ॥ ಮನುಷ್ಯರ ಸುಕೃತ ದುಷ್ಕೃತಂಗಳು ದೈವಗಳರಿಗುಮದರಿಂದೀ ಸಾಕ್ಷಿಯುಮುಚಿತಂ. ಮರನಂ ನುಡಿಸುವುದು ಪರಮಗಹನಮೀ ಸಾಕ್ಷಿಯಂ ಕೈಕೊಳ್ವುದೆನೆ ಧರ್ಮಬುದ್ಧಿ ಕರಮೊಳ್ಳಿತ್ತು ಕೈಕೊಂಡೆನೆನೆ ಧರ್ಮಾಧಿಕರಣದವರಂದು ಪೊಳ್ತು ಪೋದುದು, ನಾಳೆ ಪೋಗಿ ಕೇಳ್ವಮೆನೆ ತಮ್ಮ ತಮ್ಮ ಮನೆಗೆಲ್ಲರುಂ ಪೋದರ್, ಅನ್ನೆಗಂ ದುಷ್ಟಬುದ್ಧಿಯುಂ ತನ್ನ ಮನೆಗೆ ಬಂದು ತಮ್ಮಯ್ಯನ ಕೈಯಂಪಿಡಿದು ಕಟ್ಟೇಕಾಂತಕುಯ್ದು ತದ್ವೃತ್ತಾಂತಮೆಲ್ಲಮಂ ತಿಳಿಯೆ ಪೇಳ್ದು ನಿಮ್ಮೊಂದು ವಚನಮಾತ್ರದಿಂ ನಮ್ಮ ಪರಿಗ್ರಹಮೆಲ್ಲಂ ಪಲವು ಕಾಲಂ ಪಸಿಯದುಂಡು ಬಾಳ್ವಂತರ್ಥಂ ಸಾರ್ದಪುದು ನೀವಾ ಮರದ ಪೊಳಲೊಳಡಂಗಿರ್ದು ಧರ್ಮಬುದ್ಧಿಯೇ ಪೊನ್ನಂ ಕೊಂಡುಯ್ದನೆಂದು ನುಡಿಯಿಮೆಂಬುದು ಮಾತನಿಂತೆಂದಂ

ಪರಧನಹರಣಮುಂ ವಿಶ್ವಾಸಘಾತುಕಮುಂ ಸ್ವಾಮಿದ್ರೋಹಮುಂ ಇವೆಲ್ಲಮೇಗೆಯ್ದುಂ ಕಿಡಿಸುಗುಮಿಂತಪ್ಪುಗೆಲ್ಲಮಂ ನಿನರಿದಿರ್ದೆನ್ನುಮಂ ಸಾಕ್ಷಿ ಮಾಡಿ ನುಡಿಸಿ ಕಿಡಿಸಲ್ಬಗೆದೆ, ನಿನ್ನ ಪಳುವಗೆ ನಮ್ಮ ಕುಲಮನೆಲ್ಲಮನಳಿವ ಬಗೆ ಎನಲ್ ದುಷ್ಟಬುದ್ಧಿ ಕೇಳ್ದು ನಮ್ಮ ನಿರ್ವಾಹಮಂ ಕಿಡಿಸದೆನ್ನಂದುದಂ ಗೆಯ್ಯೆಂದು ತನ್ನ ತಂದೆಯನೊಡಂಬಡಿಸುತ್ತಿರ್ಪಿನಮಾದಿತ್ಯನಪರ ಗಿರಿಯನೆಯ್ದುವುದುಂ

ಪ್ರಶ್ನೆಗಳು :

1. ದುಷ್ಟಬುದ್ಧಿಯು ಏಕಾಂತದಲ್ಲಿ ತನ್ನ ತಂದೆಗೆ ಏನೆಂದು ಹೇಳಿದನು?

2. ದುಷ್ಟಬುದ್ಧಿಯು ತನ್ನ ತಂತ್ರವನ್ನು ಹಾಳುಮಾಡಬೇಡವೆಂದು ತಂದೆಯನ್ನು ಒತ್ತಾಯ ಮಾಡಲು ಕಾರಣವೇನು?

**ಉತ್ತರಗಳು :**

**1.** ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತಂದೆಯ ಕೈ ಹಿಡಿದು ಏಕಾಂತದಲ್ಲಿ ತನ್ನ ವೃತ್ತಾಂತವನ್ನೆಲ್ಲ ತಿಳಿಸುತ್ತ, ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವು ಪರಿಹಾರವಾಗುವುವು. ಹಲವುಕಾಲ ನಮ್ಮ ಮನೆಯವರು ಹಸಿಯದೆ ತಿಂದುಂಡು ಜೀವನ ಸಾಗಿಸುವಷ್ಟು ಧನ ಸಿಗುತ್ತದೆ ಆದ್ದರಿಂದ ನೀವು ಆ ಮರದೊಳಗಿದ್ದು ಧರ್ಮಬುದ್ಧಿಯೇ ಹೊನ್ನನ್ನು ಕೊಂಡುಹೋದನೆಂದು ನುಡಿಯಬೇಕು ಎಂದು ಹೇಳಿದನು.

2. ಧರ್ಮಬುದ್ಧಿಯೇ ಚಿನ್ನವನ್ನು ಕದ್ದಿದ್ದಾನೆಂದು ಹೇಳು ಎಂದು ತನ್ನ ತಂದೆಗೆ ಹೇಳಿದಾಗ ಅವನು ಪರರ ಹಣವನ್ನು ಕಳ್ಳತನ ಮಾಡುವುದು, ವಿಶ್ವಾಸಘಾತಕ ಕಾರ್ಯವನ್ನೆಸಗುವುದು, ಸ್ವಾಮಿದ್ರೋಹವನ್ನುಂಟು ಮಾಡುವುದು ಇವೆಲ್ಲವು ನಮ್ಮ ಬದುಕನ್ನು ಹಾಳುಮಾಡುತ್ತವೆ. ಇದನ್ನು ತಿಳಿದು ನನ್ನನ್ನು ಸಾಕ್ಷಿ ಹೇಳುವಂತೆ ಒತ್ತಾಯ ಮಾಡುವುದು ನಮ್ಮ ಕುಲವನ್ನೇ ನಾಶ ಮಾಡುವ ಬಗೆಯಾಗಿದೆ ಎಂದಾಗ ನಾನು ಹೇಳಿದುದುದನ್ನೇ ಮಾಡು ಎಂದು ದುಷ್ಟಬುದ್ಧಿಯು ತಂದೆಯನ್ನು ಒತ್ತಾಯಿಸಿದನು.

## ಗದ್ಯಪಾಠ – 8

**ವ್ಯಾಘ್ರಗೀತೆ** **– ಎ. ಎನ್. ಮೂರ್ತಿರಾವ್**

ರಸ್ತೆಗೆ ಸ್ವಲ್ಪ ದೂರದಲ್ಲೇ ಇದ್ದ ಗುಹೆಯಲ್ಲಿ ಹುಲಿಯೊಂದು ಮಲಗಿತ್ತು.ದಿನವೆಲ್ಲಾ ನಿದ್ದೆಮಾಡಿ ಆಗತಾನೆ ಆಕಳಿಸುತ್ತ ಎದ್ದ ಹುಲಿಗೆ ತನ್ನ ಹೊಟ್ಟೆ ಬರಿದಾಗಿದೆಯೆಂದು ಭಾಸವಾಯಿತು.ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸುತ್ತಾ ಒಂದೆರಡು ಸಾರಿ ಮೈಮುರಿದು ಹೊರಟಿತು. ಬಂಡೆಗಳ ಮರೆಯಲ್ಲೇ ನಡೆಯುತ್ತಿದ್ದಾಗ ಇದ್ದಕ್ಕಿದ್ದಹಾಗೆಯೇ ಮಧುರವಾದ ಗಂಧವೊಂದು ಅದರ ಘ್ರಾಣೇಂದ್ರಿಯವನ್ನು ಆಕ್ರಮಿಸಿತು. ಆ ಸುವಾಸನೆಯ ಜಾಡನ್ನೇ ಹಿಡಿದು ನಿಶ್ಶಬ್ದವಾಗಿ ನಡೆಯುತ್ತಾ ರಸ್ತೆಯ ಬಳಿಗೆ ಬಂದು ಶಾನುಭೋಗರನ್ನು ಕಂಡಿತು.ಅವರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. ಹುಲಿಯ ಆನಂದಕ್ಕೆ ಕೊರತೆಯೊಂದಿತ್ತು; ಆ ಶಾನುಭೋಗರು ಹುಲಿಗೆ ಅಭಿಮುಖರಾಗಿರದೆ

ಅದರ ಕಡೆಗೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಯಾರನ್ನೇ ಆಗಲಿ, ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ ಸರಿಯೆ, ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವಷ್ಟೇ.

ಆದ್ದರಿಂದ ಹುಲಿ ಹೇಗಾದರೂ ಮಾಡಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕು.ಆದರೆ ಅವರನ್ನು ಹಾದು ಮುಂದೆ ಹೋಗುವುದು ಕಷ್ಟ.ನಿಶ್ಶಬ್ದವಾಗಿ ಅವನ ಹಿಂದೆಯೇ ನಡೆದು, ಆನಂತರ ಅವನ ಮುಂಭಾಗಕ್ಕೆ ನೆಗೆದು, ಕೂಡಲೆ ತಿರುಗಿ ಅವನ ಮೇಲೆ ಬೀಳಬೇಕು.ತನ್ನ ಬಡ ಬಂಧುವಾದ ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿ ಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು.

**ಪ್ರಶ್ನೆಗಳು :**

1. ಶಾನುಭೋಗರನ್ನು ಕಂಡು ಪರಮಾನಂದಗೊಂಡ ಹುಲಿಯ ಆನಂದಕ್ಕೆ ಕೊರತೆಯುಂಟಾಗಲು ಕಾರಣವೇನು? ಏಕೆ?

2. ಹುಲಿಯು ಬೆಕ್ಕಿನಂತೆ ಮೆಲ್ಲನೆ ಶಾನುಭೋಗರ ಹತ್ತಿರ ಸರಿಯುವಾಗ ಮನದಲ್ಲಿ ಏನೆಂದು ಆಲೋಚಿಸಿತು?

**ಉತ್ತರಗಳು :**

1. **ಶಾನುಭೋಗರು** ಹುಲಿಗೆ ಅಭಿಮುಖವಾಗಿ ನಡೆಯದೆ ಬೆನ್ನುತಿರುಗಿಸಿ ನಡೆಯುತ್ತಿದ್ದುದರಿಂದ ಹುಲಿಯ ಆನಂದಕ್ಕೆ ಕೊರತೆಯುಂಟಾಯಿತು. ಏಕೆಂದರೆ ಭರತಖಂಡದ ಹುಲಿಗಳು ಯಾರನ್ನೇ ಆಗಲಿ ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನೇ ಆದರೂ ಸರಿ ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ.

2. **ಹುಲಿಯು** ಹೇಗಾದರೂ ಮಾಡಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕು. ಆದರೆ ಅವರನ್ನು ಹಾದು ಮುಂದೆ ಬರುವುದು ಕಷ್ಟ.ಆದ್ದರಿಂದ ನಿಶ್ಶಬ್ದವಾಗಿ ಅವನ ಹಿಂದೆಯೇ ನಡೆದು, ಆನಂತರ ಅವನ ಮುಂಭಾಗಕ್ಕೆ ನೆಗೆದು, ಕೂಡಲೆ ತಿರುಗಿ ಮೇಲೆ ಬೀಳಬೇಕು ಎಂದು ಯೋಚಿಸುತ್ತ ಮೆಲ್ಲನೆ ಶಾನುಭೋಗರ ಹಿಂದೆ ಸರಿಯಿತು.

## ಪದ್ಯವನ್ನು ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸುವುದು.

## ಪದ್ಯಭಾಗ

### ಪದ್ಯಪಾಠ – 1

**ಎಮ್ಮ ನುಡಿಗೇಳ್ – ಪಂಪ**

ನೀನುಳ್ಳೊಡೆಲ್ಲರೊಳರೆಮ
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೆ ।
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ॥

ಅದಲ್ಲದೆಯುಂ ಪಾಂಡವರಪ್ಪೊಡೆನಗೆ ಪಾಂಡುರಾಜಂಗೆ ಬೆಸಕಯ್ದುದೆನೆ ಬೆಸಕಯ್ವರೆಂದುದಂ ಮೀರುವರಲ್ಲರವರನಾನೆಂತುಮೊಡಂಬಡಿಸಿ ನೀನೆಚಿದುದನೆನಿಸುವೆನಿದರ್ಕೆ ಮಾರ್ಕೊಳ್ಳದೊಡಂಬಡು ನಿನ್ನಂ ಕಯ್ಯನೊಡ್ಡಿ ಬೇಡಿದಪ್ಪೆನೆಂದ ಧೃತರಾಷ್ಟ್ರನ ನ್ಮಡಿಗನುಬಲಮಾಗಿ ಗಾಂಧಾರಿಯಿಚಿತೆಂದಳ್ –

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ ।
ರ್ಮರನುಳಿವಂತೆ ನೀನುಳಿದೆಯಿನ್ನಿರಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ॥

**ಪ್ರಶ್ನೆಗಳು :**

1. ಧೃತರಾಷ್ಟ್ರನು ನಮ್ಮ ಮನಸ್ಸಿನಲ್ಲಿ ದುಃಖವಿಲ್ಲ ಎನ್ನಲು ಕಾರಣವೇನು?

2. ಮದಾಂಧಗಂಧಸಿಂಧುರ ಎಂದು ಯಾರಿಗೆ ಹೋಲಿಸಲಾಗಿದೆ?

3. ಪದ್ಯದಲ್ಲಿ ನಿಮಗಿಷ್ಟವಾದ ಸಾಲು ಯಾವುದು?

4. ಆ ಸಾಲುಗಳನ್ನು ಏಕೆ ಮೆಚ್ಚುವಿರಿ ?ನಿಮ್ಮ ಮಾತುಗಳಲ್ಲಿ ಬರೆಯಿರಿ.

(ವಿದ್ಯಾರ್ಥಿಯು ಸ್ವಾಭಿಪ್ರಾಯದ ಸಾಲನ್ನು ಬರೆಯಬಹುದು)

**ಉತ್ತರಗಳು :**

1. ನೀನೊಬ್ಬನಿದ್ದರೆ ನಮಗೆ ಎಲ್ಲರೂ ಇದ್ದಂತೆಯೇ ಆದ್ದರಿಂದ ನಮ್ಮ ಮನಸ್ಸಿನಲ್ಲಿ ಯಾವುದೇ ದುಃಖವಿಲ್ಲ ಎನ್ನುತ್ತಾನೆ.

2. .ಮದಾಂಧಗಂಧಸಿಂಧುರ ಎಂದು ಪವನನಂದನನಿಗೆ (ಭೀಮನಿಗೆ) ಹೋಲಿಸಲಾಗಿದೆ.

3. ಭಾನುವೆ ಸಾಲದೆ ಪಗಲೆನಿತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ

4. 'ಪುತ್ರಶೋಕಂ ನಿರಂತರಂ' ಎಂಬಂತೆ ಇದುವರೆವಿಗಿನ ಯುದ್ಧದಲ್ಲಿ ಧೃತರಾಷ್ಟ್ರನ ತೊಂಬತ್ತೊಂಬತ್ತು ಮಕ್ಕಳು ಹತರಾಗಿದ್ದಾರೆ. ಉಳಿದ ಒರ್ವ ಮಗನಾದರೂ ಉಳಿಯಲಿ ಎಂದು ಹಂಬಲಿಸುವುದು ಸಹಜವಾಗಿದೆ.ದುರ್ಯೋಧನನನ್ನು ಭೀಮನಿಗೆ ಹೋಲಿಸಿ ಸಮರ್ಥಿಸಿಕೊಂಡಿರುವುದು ಸಮಂಜಸವಾಗಿದೆ.

## ಪದ್ಯಪಾಠ – 2

**ಹಕ್ಕಿ ಹಾರುತಿದೆ ನೋಡಿದಿರಾ** **– ದ. ರಾ. ಬೇಂದ್ರೆ**

ಯುಗ–ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**ಪ್ರಶ್ನೆಗಳು :**

1. ಹಕ್ಕಿಯು ಹಣೆ ಬರೆಹವ ಒರೆಸಿ ಏನನ್ನು ತೆರೆಸಿದೆ?
2. ಹಕ್ಕಿಯು ಹೇಗೆ ಚೇತನಗೊಳಿಸಿದೆ?
3. ಹಕ್ಕಿಯು ಯಾರನ್ನು ಹರಸಿದೆ?
4. ಕಾಲಪಕ್ಷಿಯ ಯಾವ ಕಾರ್ಯವನ್ನು ನೀವು ಮೆಚ್ಚುತ್ತೀರಿ ತಿಳಿಸಿ.

**ಉತ್ತರಗಳು :**

1. ಹಕ್ಕಿಯು ಹಣೆ ಬರೆಹವ ಒರೆಸಿ ಮನ್ವಂತರಗಳ ಭಾಗ್ಯವನ್ನು ತೆರೆಸಿದೆ.
2. ಹಕ್ಕಿಯು ರೆಕ್ಕೆಯ ಬೀಸುತ ಚೇತನಗೊಳಿಸಿದೆ.
3. ಹಕ್ಕಿಯು ಹೊಸಕಾಲದ ಹಸುಮಕ್ಕಳನ್ನು ಹರಸಿದೆ.
4. ಹಕ್ಕಿಯು ಚೇತನಗೊಳಿಸಿ ಹಸುಮಕ್ಕಳನ್ನು ಹರಸಿರುವ ಕಾರ್ಯ ನನಗೆ ಮೆಚ್ಚುಗೆಯಾಗಿದೆ.

(ವಿದ್ಯಾರ್ಥಿಯು ಸ್ವಾಭಿಪ್ರಾಯದ ಸಾಲನ್ನು ಬರೆಯಬಹುದು)

## ಪದ್ಯಪಾಠ – 4

**ವಚನ ಸೌರಭ** **– ಜೇಡರ ದಾಸಿಮಯ್ಯ, – ಬಸವಣ್ಣ**

ಮರನೇರಿದ ಮರ್ಕಟನಂತೆ

ಹಲವು ಕೊಂಬೆಗೆ ಹಾರುತಲಿದೆ

ಬೆಂದಮನವ ನಾನೆಂತು ನಂಬುವೆನಯ್ಯಾ?

ಎಂತು ನಚ್ಚುವೆನಯ್ಯಾ?

ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ ॥

**ಪ್ರಶ್ನೆಗಳು :**

1. ಮನವನ್ನು ಯಾವುದಕ್ಕೆ ಹೋಲಿಸಲಾಗಿದೆ ?

2. ಮರ್ಕಟನ ಸಹಜ ಗುಣವೇನು?

3. ಬಸವಣ್ಣನವರು ಬೆಂದ ಮನಸ್ಸನ್ನು ನಂಬುವುದಿಲ್ಲ ಎನ್ನುವುದನ್ನು ಒಪ್ಪುವಿರಾ ?ಏಕೆ?

4. ಈ ವಚನದಲ್ಲಿ ನೀವು ಮೆಚ್ಚುವ ಅಂಶವೇನು?

**ಉತ್ತರಗಳು :**

1. ಮನವನ್ನು ಮರ್ಕಟನಿಗೆ ಹೋಲಿಸಲಾಗಿದೆ.

2. ಹಲವು ಕೊಂಬೆಗೆ ಹಾಯುತ್ತಲಿರುವುದು ಮರ್ಕಟನ ಸಹಜ ಗುಣವಾಗಿದೆ.

3. ಮನವೆಂಬುದು ಮರ್ಕಟನಂತೆ ಏಕಾಗ್ರತೆ ಸಾಧಿಸಲು ಸಾಧ್ಯವಾಗುತ್ತಿಲ್ಲ ವಿಷಯಾದಿಗಳಲ್ಲೇ ಮುಳುಗಿ ನೋವು ದುಃಖಗಳಲ್ಲಿ ಬೆಂದಮನವಾಗಿದೆ.

4. ಮನವನ್ನು ಮರ್ಕಟನಿಗೆ ಹೋಲಿಸಿ ವರ್ಣಿಸಿರುವುದು.

## ಪದ್ಯಪಾಠ – 5

**ಸಂಕಲ್ಪಗೀತೆ** **– ಡಾ.ಜಿ. ಎಸ್. ಶಿವರುದ್ರಪ್ಪ**

ಸುತ್ತಲು ಕವಿಯುವ ಕತ್ತಲೆಯೊಳಗೆ

ಪ್ರೀತಿಯ ಹಣತೆಯ ಹಚ್ಚೋಣ

ಬಿರುಗಾಳಿಗೆ ಹೊಯ್ದಾಡುವ ಹಡಗನು

ಎಚ್ಚರದಲಿ ಮುನ್ನಡೆಸೋಣ.

ಕಲುಷಿತವಾದೀ ನದೀಜಲಗಳಿಗೆ

ಮುಂಗಾರಿನ ಮಳೆಯಾಗೋಣ

ಬರಡಾಗಿರುವೀ ಕಾಡುಮೇಡುಗಳ

ವಸಂತವಾಗುತ ಮುಟ್ಟೋಣ.

**ಪ್ರಶ್ನೆಗಳು :**

1. ಯಾವ ಹಡಗನ್ನು ಮುನ್ನಡೆಸಬೇಕಾಗಿದೆ?

2. ನದೀಜಲಗಳ ಕೊಳೆಯನ್ನು ತೆಗೆಯಲು ಯಾವುದು ಬೇಕಾಗಿದೆ?

3. ಕಾಡುಮೇಡುಗಳನ್ನು ಏನಾಗಿಸಿ ಮುಟ್ಟಬೇಕು?

4. ಈ ಪದ್ಯದಲ್ಲಿ ಕವಿಯ ಯಾವ ಆಶಯವನ್ನು ಹೆಚ್ಚು ಮೆಚ್ಚಿಕೊಳ್ಳುತ್ತೀರಿ?

**ಉತ್ತರಗಳು :**

1. ಬಿರುಗಾಳಿಗೆ ಹೊಯ್ದಾಡುವ ಹಡಗನು ಮುನ್ನಡೆಸಬೇಕಾಗಿದೆ.

2. ನದೀಜಲಗಳ ಕೊಳೆಯನ್ನು ತೆಗೆಯಲು ಮುಂಗಾರಿನ ಮಳೆ ಬೇಕಾಗಿದೆ.

3. ಕಾಡುಮೇಡುಗಳನ್ನು ವಸಂತವಾಗಿಸಿ ಮುಟ್ಟಬೇಕು.

4. ಸುತ್ತಲು ಕವಿಯುವ ಕತ್ತಲೆಯೊಳಗೆ ಪ್ರೀತಿಯ ಹಣತೆಯನ್ನು ಹಚ್ಚಬೇಕು ಎಂಬುದು ನನಗೆ ಹೆಚ್ಚು ಮೆಚ್ಚಿಗೆಯಾದ ಸಾಲಾಗಿದೆ.

## ಪದ್ಯಪಾಠ – 6

**ಕೌರವೇಂದ್ರನ ಕೊಂದೆ ನೀನು** **– ಕುಮಾರವ್ಯಾಸ**

ಮರುಳು ಮಾಧವ ಮಹಿಯ ರಾಜ್ಯದ

ಸಿರಿಗೆ ಸೋಲುವವನಲ್ಲ ಕೌಂತೇ

ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ ।

ಹೊರೆದ ದಾತಾರಂಗೆ ಹಗೆವರ

ಶಿರವನರಿದೊಪ್ಪಿಸುವೆನೆಂಬೀ

ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ॥

ಪ್ರಶ್ನೆಗಳು :

1. ಕರ್ಣನು ಕೃಷ್ಣನಿಗೆ ಯಾವುದಕ್ಕೆ ಸೋಲುವುದಿಲ್ಲ ಎನ್ನುತ್ತನೆ ?
2. ಕರ್ಣನು ತನಗೆ ಯಾವುದರಲ್ಲಿ ಮನಸ್ಸಿಲ್ಲವೆಂದು ಹೇಳೆತ್ತಾನೆ?

3. ಕರ್ಣನು ಕೃಷ್ಣನನ್ನು ಕುರಿತು ಕೌರವೇಂದ್ರನನ್ನು ಕೊಂದೆ ಎನ್ನಲು ಕಾರಣವೇನು?
4. ಈ ಪದ್ಯದಲ್ಲಿ ಕರ್ಣನ ಯಾವ ಗುಣವನ್ನು ಮೆಚ್ಚುತ್ತೀರಿ ?

ಉತ್ತರಗಳು :

1. ಮಹಿಯ ರಾಜ್ಯದ ಸಿರಿಗೆ ಸೋಲುವವನಲ್ಲ.
2. ಕೌಂತೇಯರು ಹಾಗೂ ಸುಯೋಧನರಿಂದ ಸೇವೆ ಮಾಡಿಸಿಕೊಳ್ಳುವಲ್ಲಿ ತನಗೆ ಮನಸ್ಸಿಲ್ಲವೆಂದು ಹೇಳುತ್ತಾನೆ.
3. ಕರ್ಣನು ತನ್ನನ್ನು ಪೋಷಿಸಿದ ಒಡೆಯನಿಗೆ ಶತ್ರುಗಳ ಶಿರಸ್ಸನ್ನು ಕತ್ತರಿಸಿ ಒಪ್ಪಿಸುತ್ತೇನೆಂಬ ಉತ್ಸಾಹದಲ್ಲಿದ್ದನು. ಆದರೆ ಕೃಷ್ಣನು ಕರ್ಣನ ಜನ್ಮವೃತ್ತಾಂತವನ್ನು ತಿಳಿಸಿ ಕರ್ಣನ ಉತ್ಸಾಹಕ್ಕೆ ತಣ್ಣೀರೆರಚಿದ್ದಾನೆ. ಆದ್ದರಿಂದ ಕರ್ಣನು ಕೃಷ್ಣನನ್ನು ಕೌರವನ ಕೊಂದೆ ಎನ್ನುತ್ತಾನೆ.
4. ಕರ್ಣನ ಸ್ವಾಮಿನಿಷ್ಠೆ ದಾತಾರನ ಮೇಲಿಟ್ಟಿರುವ ಪ್ರೀತಿಗೌರವವನ್ನು ಮೆಚ್ಚುತ್ತೇವೆ.
(ವಿದ್ಯಾರ್ಥಿಯು ಪದ್ಯದಲ್ಲಿನ ಕರ್ಣನ ಯಾವುದೇ ಒಂದು ಗುಣವನ್ನು ಮೆಚ್ಚಿ ಬರೆಯಬಹುದು)

## ಪದ್ಯಪಾಠ – 7

**ವೀರಲವ** **– ಲಕ್ಷ್ಮೀಶ**

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

ನೊರ್ವನೇ ವೀರನಾತನ ಯಜ್ಞತುರಗಮಿದು

ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ।

ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ

ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ

ಗುರ್ವ ತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು ॥

ಪ್ರಶ್ನೆಗಳು :

1. ವಾಲ್ಮೀಕಿ ಆಶ್ರಮಕ್ಕೆ ಬಂದ ಯಜ್ಞತುರಗ ಯಾರದು?
2. ಯಜ್ಞತುರಗದ ಹಣೆಯಲ್ಲಿ ಏನೆಂದು ಬರೆಯಲಾಗಿತ್ತು ?
3. ಲವನು ಕುದುರೆಯ ಹಣೆಯ ಮೇಲಿನ ಲಿಖಿತವನ್ನೋದಿ ಏನೆಂದು ಪ್ರತಿಜ್ಞೆ ಮಾಡಿದನು?
4. ಈ ಪದ್ಯದಲ್ಲಿ ಲವನ ಯಾವ ಗುಣವನ್ನು ಮೆಚ್ಚುವಿರಿ ಏಕೆ?

**ಉತ್ತರಗಳು :**

1. ವಾಲ್ಮೀಕಿ ಆಶ್ರಮಕ್ಕೆ ಬಂದ ಯಜ್ಞತುರಗ ಕೌಸಲ್ಯೆಯ ಕುವರ ಶ್ರೀರಾಮನದು.
2. "ಈ ಭೂಮಿಯಲ್ಲಿ ಕೌಸಲ್ಯೆಯ ಪುತ್ರ ಶ್ರೀರಾಮನೊಬ್ಬನೇ ವೀರನು. ಆತನ ಯಜ್ಞತುರಗವಿದು. ಯುದ್ಧ ಮಾಡುವ ಇಚ್ಛೆಯುಳ್ಳವರು ಕುದುರೆಯನ್ನು ತಡೆದು ಕಟ್ಟ ಬಹುದು." ಎಂದು ಬರೆಯಲಾಗಿತ್ತು.
3. "ಶ್ರೀರಾಮನ ಗರ್ವವನ್ನು ಬಿಡಿಸದಿದ್ದರೆ ನನ್ನ ತಾಯಿಯನ್ನು ಸರ್ವಜನರೂ ಬಂಜೆಯೆನ್ನುವುದಿಲ್ಲವೇ, ನನ್ನ ತೋಳಿನಲ್ಲಿರುವ ಶಕ್ತಿಯಾದರೂ ಏಕೆ" ಎಂದು ಪ್ರತಿಜ್ಞೆ ಮಾಡಿದನು.
4. ಬಾಲಕನಾದರೂ ಶ್ರೀರಾಮನ ಅಶ್ವಮೇಧದ ಕುದುರೆಯನ್ನು ಕಟ್ಟುವ ಸಾಹಸ ಮಾಡಿದ ಲವನ ಕ್ಷತ್ರಿಯ ಗುಣ ಮೆಚ್ಚುವಂತಹುದು. ಏಕೆಂದರೆ ಆಶ್ರಮವಾಸಿಯಾಗಿದ್ದರೂ ಲವನ ವೀರತನ ತನಗರಿವಿಲ್ಲದೆಯೇ ಪ್ರಕಾಶಿಸುತ್ತದೆ.

## ಕವಿಪರಿಚಯ

### ಗದ್ಯಪಾಠ – 1

**ಶಬರಿ** **– ಪು. ತಿ. ನರಸಿಂಹಾಚಾರ್**

**ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ** ಅವರು **ಕ್ರಿ. ಶ. 1905** ರಲ್ಲಿ ಮಂಡ್ಯ ಜಿಲ್ಲೆಯ **ಮೇಲುಕೋಟೆ**ಯಲ್ಲಿ ಜನಿಸಿದರು.ಇವರು **ಶಬರಿ,** ಅಹಲ್ಯೆ, ಮೊದಲಾದ ಲಲಿತ ಪ್ರಬಂಧ ಕೃತಿಗಳನ್ನೂ ರಚಿಸಿದ್ದಾರೆ.ಶ್ರೀಯುತರ **'ಶ್ರೀ ಹರಿಚರಿತೆ'** ಕೃತಿಗೆ ಕರ್ನಾಟಕ ಸರ್ಕಾರದಿಂದ **'ಪಂಪ ಪ್ರಶಸ್ತಿ'** ನೀಡಿ ಗೌರವಿಸಲಾಗಿದೆ.ಶ್ರೀಯುತರಿಗೆ **'ಪಂಪ ಪ್ರಶಸ್ತಿ'** ಮತ್ತು ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

### ಗದ್ಯಪಾಠ – 2.

**ಅಮೆರಿಕದಲ್ಲಿ ಗೊರೂರು.– ಗೊರೂರು ರಾಮಸ್ವಾಮಿ ಅಯ್ಯಂಗಾರ್**

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು **ಕ್ರಿ. ಶ. 1904ರಲ್ಲಿ** ಹಾಸನ ಜಿಲ್ಲೆಯ **ಗೊರೂರು** ಗ್ರಾಮದಲ್ಲಿ ಜನಿಸಿದರು.ಇವರು **ಅಮೆರಿಕದಲ್ಲಿ ಗೊರೂರು (ಪ್ರವಾಸ ಕಥನ),** ನಮ್ಮ ಊರಿನ ರಸಿಕರು ಮೊದಲಾದ ಕೃತಿಗಳನ್ನುರಚಿಸಿದ್ದಾರೆ.ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿ ಗೌರವಿಸಲಾಗಿದೆ.

### ಗದ್ಯಪಾಠ – 3.

**ಜೀವನದೃಷ್ಟಿ.** **– ವಿನಾಯಕ ಕೃಷ್ಣ ಗೋಕಾಕ್.**

ಡಾ. ವಿನಾಯಕ ಕೃಷ್ಣ ಗೋಕಾಕ್ ಅವರು **ಕ್ರಿ. ಶ. 1909** ರಲ್ಲಿ ಹಾವೇರಿ ಜಿಲ್ಲೆಯ **ಸವಣೂರಿನಲ್ಲಿ** ಜನಿಸಿದರು.ಇವರು **ಜೀವನಪಾಠಗಳು,** ಭಾರತ ಸಿಂಧು ರಶ್ಮಿ, ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್ ಪದವಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

### ಗದ್ಯಪಾಠ – 5

**ಭಾಗ್ಯಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ– ಡಿ. ಎಸ್. ಜಯಪ್ಪ ಗೌಡ**

**ಶ್ರೀ ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ** ಅವರು ಕ್ರಿ. ಶ. **1947**ರಲ್ಲಿ ಚಿಕ್ಕಮಗಳೂರು ಜಿಲ್ಲೆಯ **ದಾರದಹಳ್ಳಿಯಲ್ಲಿ** ಜನಿಸಿದರು. ಇವರು **ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು,** ಕರ್ನಾಟಕ ಗ್ರಾಮೀಣ ಸಂಸ್ಥೆಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

### ಗದ್ಯಪಾಠ – 6.

**ಎದೆಗೆ ಬಿದ್ದ ಅಕ್ಷರ** **– ದೇವನೂರು ಮಹಾದೇವ**

**ಶ್ರೀ ದೇವನೂರು ಮಹಾದೇವ** ಅವರುಕ್ರಿ.ಶ. **1949** ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ **ದೇವನೂರಿನಲ್ಲಿ** ಜನಿಸಿದರು.ಇವರು **ಎದೆಗೆ ಬಿದ್ದ ಅಕ್ಷರ.**ಕುಸುಮಬಾಲೆ, ದ್ಯಾವನೂರು, ಒಡಲಾಳ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

## ಗದ್ಯಪಾಠ – 7

**ವೃಕ್ಷಸಾಕ್ಷಿ** **– ದುರ್ಗಸಿಂಹ**

**ದುರ್ಗಸಿಂಹನು ಕ್ರಿ. ಶ. ಸುಮಾರು 1031 ರಲ್ಲಿ** ಕಿಸುಕಾಡು ನಾಡಿನ **ಸಯ್ಯಡಿಯಲ್ಲಿ** ಜನಿಸಿದನು. ಇವನು ಒಂದನೆಯ ಜಗದೇಕಮಲ್ಲನ ಆಸ್ಥಾನದಲ್ಲಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದನು.ಮತಧರ್ಮ ಸಮನ್ವಯನಾದ ಈತ ಸಯ್ಯಡಿಯಲ್ಲಿ ಹಲವಾರು ಹರಿಹರ ಭವನಗಳನ್ನು ನಿರ್ಮಿಸಿದ್ದಾನೆ. ಈತನು **'ಕರ್ಣಾಟಕ ಪಂಚತಂತ್ರ'** ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾನೆ.

## ಗದ್ಯಪಾಠ – 8.

**ವ್ಯಾಘ್ರಗೀತೆ** **– ಎ. ಎನ್. ಮೂರ್ತಿರಾವ್**

**ಶ್ರೀ ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್** ಅವರು **ಕ್ರಿ. ಶ. 1900 ರಲ್ಲಿ** ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ **ಅಕ್ಕಿಹೆಬ್ಬಾಳು** ಗ್ರಾಮದಲ್ಲಿಜನಿಸಿದರು.ಇವರು **ಸಮಗ್ರ ಲಲಿತಪ್ರಬಂಧಗಳು,** ದೇವರು, ಹಗಲುಗನಸು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

## ಪದ್ಯಪಾಠ – 1.

**ಎಮ್ಮನುಡಿಗೇಳ್** **– ಆದಿಕವಿ ಪಂಪ**

ಕನ್ನಡದಆದಿಮಹಾಕವಿ **ಪಂಪನುಕ್ರಿ. ಶ. ಸುಮಾರು 941** ರಲ್ಲಿ ವೆಂಗಿಮಂಡಲದ **ವೆಂಗಿಪಳು** ಎಂಬ ಅಗ್ರಹಾರದಲ್ಲಿ ಜನಿಸಿದನು.ಪಂಪನು **'ವಿಕ್ರಮಾರ್ಜುನ ವಿಜಯ ಮತ್ತು ಆದಿ ಪುರಾಣ'** ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ಈತನಿಗೆ**ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ** ಎಂಬ ಬಿರುದುಗಳು ಇದ್ದವು.

## ಪದ್ಯಪಾಠ – 2

**ಹಕ್ಕಿ ಹಾರುತಿದೆ ನೋಡಿದಿರಾ** **– ದ. ರಾ. ಬೇಂದ್ರೆ**

**ಅಂಬಿಕಾತನಯದತ್ತ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ** ಅವರು **ಕ್ರಿ. ಶ. 1896** ರಲ್ಲಿ **ಧಾರವಾಡ**ದಲ್ಲಿ ಜನಿಸಿದರು.ಇವರು **ಗರಿ,** ನಾಕುತಂತಿ, ನಾದಲೀಲೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

## ಪದ್ಯಪಾಠ – 4.

**ವಚನ ಸೌರಭ** **– ಜೇಡರ ದಾಸಿಮಯ್ಯ, ಬಸವಣ್ಣ**

**ಶಿವಶರಣ ಜೇಡರ ದಾಸಿಮಯ್ಯ** ಅವರು **ಕ್ರಿ. ಶ. ಸುಮಾರು 1150 ರಲ್ಲಿ** ಯಾದಗಿರಿ ಸನಿಹದ **ಮುದೇನೂರಿನಲ್ಲಿ** ಜೀವಿಸಿದ್ದರು.**ಆದ್ಯವಚನಕಾರ ಎಂದು ಪ್ರಸಿದ್ಧರಾದ ಇವರ ಸುಮಾರು 150 ವಚನಗಳು ದೊರೆತಿವೆ. 'ರಾಮನಾಥ'** ಎಂಬದು ಇವರ ಅಂಕಿತನಾಮ.ಸರಳ ಮತ್ತು ನೇರ ನಿರೂಪಣೆಯಿಂದ ಕೂಡಿರುವ ಇವರ ವಚನಗಳು ಸಾಮಾಜಿಕ ಮೌಲ್ಯಗಳಿಂದ ಜನಮಾನ್ಯವಾಗಿವೆ.

**ಶಿವಶರಣ ಬಸವಣ್ಣ** ಅವರು **ಕ್ರಿ. ಶ. ಸುಮಾರು 1260** ರಲ್ಲಿ ಬಿಜಾಪುರ ಜಿಲ್ಲೆಯ **ಬಾಗೇವಾಡಿಯಲ್ಲಿ** ಜನಿಸಿದರು.ಇವರು ಕಳಚುರಿ ವಂಶದ ಬಿಜ್ಜಳನ ಆಸ್ಥಾನದಲ್ಲಿ ಮಹಾಭಂಡಾರಿಯಾಗಿ ಸೇವೆಸಲ್ಲಿಸಿದ್ದಾರೆ.**'ಕೂಡಲ ಸಂಗಮದೇವ'** ಎಂಬ ಅಂಕಿತನಾಮದಿಂದ ರಚಿಸಿರುವ ಸಾವಿರಾರು ವಚನಗಳು ದೊರೆತಿವೆ. ಇವರ ಸರಳವಾದ ಭಾವಗೀತಾತ್ಮಕವಾದ ವಚನಗಳಲ್ಲಿ ಸಾಮಾಜಿಕ, ನೈತಿಕ ವಿಚಾರಧಾರೆಗಳನ್ನು ಸಾದರಪಡಿಸಲಾಗಿದೆ.

## ಪದ್ಯಪಾಠ – 5.

**ಸಂಕಲ್ಪ ಗೀತೆ** **– ಜಿ. ಎಸ್. ಶಿವರುದ್ರಪ್ಪ**

**ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು **ಕ್ರಿ. ಶ. 1926** ರಲ್ಲಿ ಶಿವಮೊಗ್ಗ ಜಿಲ್ಲೆಯ **ಶಿಕಾರಿಪುರದಲ್ಲಿ** ಜನಿಸಿದರು.ಇವರು **ಎದೆತುಂಬಿ ಹಾಡಿದೆನು,** ಸಾಮಗಾನ, ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ **ರಾಷ್ಟ್ರಕವಿ ಪ್ರಶಸ್ತಿ,**ನಾಡೋಜ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿಗೌರವಿಸಲಾಗಿದೆ.

## ಪದ್ಯಪಾಠ – 6.

**ಕೌರವೇಂದ್ರನ ಕೊಂದೆ ನೀನು** **– ಕುಮಾರ ವ್ಯಾಸ**

**ಕುಮಾರವ್ಯಾಸ** ಎಂದು ಪ್ರಸಿದ್ಧನಾಗಿರುವ **ಗದುಗಿನ ನಾರಣಪ್ಪ** ಅವರು **ಕ್ರಿ. ಶ. ಸುಮಾರು 1430** ರಲ್ಲಿ ಗದಗ ಪ್ರಾಂತ್ಯದ **ಕೋಳಿವಾಡ**ದಲ್ಲಿ ಜನಿಸಿದರು.ಇವರು **ಕರ್ನಾಟ ಭಾರತ ಕಥಾ ಮಂಜರಿ** ಮತ್ತು **ಐರಾವತ** ಎಂಬ ಕೃತಿಗಳನ್ನು ರಚಿಸಿದ್ದಾರೆ.ಶ್ರೀಯುತರಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ.

## ಪದ್ಯಪಾಠ – 7.

**ವೀರಲವ** **– ಲಕ್ಷ್ಮೀಶ**

**ಕವಿ ಲಕ್ಷ್ಮೀಶನು ಕ್ರಿ. ಶ. ಸುಮಾರು 1550** ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿನಲ್ಲಿ** ಜನಿಸಿದನು.ಇವನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದವು.ಇವರು **'ಜೈಮಿನಿ ಭಾರತ'** ಎಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಈತನಿಗೆ **ಉಪಮಾಲೋಲ, ಕರ್ಣಾಟ ಕವಿಚೂತವನ ಚೈತ್ರ** ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.

## ಪದ್ಯಪಾಠ – 8.

**ಸಂಕಟಕೆ ಗಡಿ ಇಲ್ಲ** **– ದು. ಸರಸ್ವತಿ**

ಶ್ರೀಮತಿ **ದುರ್ಗಪ್ಪ ಸರಸ್ವತಿ** ಅವರು **ಕ್ರಿ. ಶ. 1963** ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು.ಇವರು **ಹೆಣೆದರೆ ಜೇಡನಂತೆ,** ಜೀವಸಂಪಿಗೆ, ಈಗೇನ್ಮಾಡೀರಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಇವರು ರಂಗಕಲಾವಿದರಾಗಿ, ಸಮಾಜಸೇವಾಕರ್ತರಾಗಿ ದುಡಿಯುತ್ತಿದ್ದಾರೆ.

## ಗಾದೆಗಳ ವಿಸ್ತರಣೆ

### 1. ಶಕ್ತಿಗಿಂತ ಯುಕ್ತಿ ಮೇಲು

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಪ್ರಸ್ತುತ ಗಾದೆ 'ಶಕ್ತಿಗಿಂತ ಯುಕ್ತಿ ಮೇಲು' ಎಂಬುದು ಒಂದು ಜನಪ್ರಿಯ ಗಾದೆ.ಶಕ್ತಿ ದೈಹಿಕವಾದದ್ದು.ಯುಕ್ತಿ ಬುದ್ಧಿಚಾತುರ್ಯವನ್ನು ಅವಲಂಬಿಸಿದೆ.ಶಕ್ತಿಯಿಂದ ಗೆಲ್ಲಲಾಗದ ಸಂದರ್ಭದಲ್ಲಿ ಯುಕ್ತಿಯನ್ನು ಪ್ರಯೋಗಿಸಬೇಕು.ತನ್ನ ಜೀವ ಉಳಿಸಿಕೊಳ್ಳಲು ಮೊಲವೊಂದು ಸಿಂಹದಿಂದ ತನ್ನನ್ನು ತಾನು ಯುಕ್ತಿಯಿಂದ ಕಾಪಾಡಿಕೊಂಡ ಪಂಚತಂತ್ರದ ಕಥೆ ಎಲ್ಲರಿಗೂ ತಿಳಿದಿದೆ. ಈ ಹಿನ್ನೆಲೆಯಲ್ಲಿ ದೈಹಿಕ ಶಕ್ತಿಗಿಂತ ಮನಸ್ಸಿನ ಯುಕ್ತಿಯೇ ಶ್ರೇಷ್ಠ ಎಂಬುದೇ ಈ ಗಾದೆಯ ಅರ್ಥವಾಗಿದೆ.

### 2. ಕೈ ಕೆಸರಾದರೆ ಬಾಯಿ ಮೊಸರು

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಈ ಗಾದೆಯು ಕಷ್ಟಪಡದೇ ಸುಖ ಸಿಗುವುದಿಲ್ಲ ಎಂಬುದನ್ನು ಧ್ವನಿಪೂರ್ಣವಾಗಿ ಹೇಳುತ್ತದೆ.ಕೈ ಕೆಸರಾಗುವುದು ದುಡಿಮೆಯನ್ನು ಸಂಕೇತಿಸಿದರೆ ಮೊಸರು ಎಂಬುದು ಅದರ ಪ್ರತಿಫಲವನ್ನು ಬಿಂಬಿಸುತ್ತದೆ.ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತು ಮೇಲಿನ ಗಾದೆಯನ್ನು ಪುಷ್ಟೀಕರೀಸುತ್ತದೆ.

### 3. ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಪ್ರಸ್ತುತ ಗಾದೆ 'ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು' ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ.ತಾಯಿ ನಮ್ಮನ್ನು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ಹೆತ್ತತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದಿಲ್ಲ. ಅದೇ ರೀತಿ ಜನ್ಮಭೂಮಿಯ ಸಂಬಂಧವು ಸಹ ಬಿಡಿಸಲಾಗದಂತಹುದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತೆ ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಾದುದು.ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

### 4. ಬೆಳೆಯುವ ಸಿರಿ ಮೊಳಕೆಯಲ್ಲಿ

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಬೆಳೆಯುವ ಸಸಿಯನ್ನು ನೋಡಿದಾಗಲೇ ಅದು ಮುಂದೆ ಎಂತಹ ಬೆಳೆಯನ್ನು ಕೊಡುತ್ತದೆ ಎಂಬುದು ತಿಳಿಯುತ್ತದೆ. ಹಾಗೆಯೇ ಬಾಲ್ಯದಲ್ಲಿ ಮಕ್ಕಳ ನಡೆನುಡಿಗಳನ್ನು ಗಮನಿಸಿದರೆ ಮುಂದೆ ಅವರು ಏನಾಗುತ್ತಾರೆ ಎಂಬುದನ್ನು ಅರಿಯಬಹುದು. ಕ್ರಿಕೆಟ್ ಆಟಗಾರ ಸಚಿನ್ ಜೀವನವೇ ಇದಕ್ಕೊಂದು ಉತ್ತಮ ಉದಾಹರಣೆ.ಮೊಳಕೆ ಚೆನ್ನಾಗಿದ್ದರೆ ಬೆಳೆ ಚೆನ್ನಾಗಿರುತ್ತದೆ.ಅದೇ ರೀತಿ ಮಕ್ಕಳು ಬಾಲ್ಯದಲ್ಲಿ ಉತ್ತಮ ಗುಣಗಳನ್ನು ಬೆಳೆಸಿಕೊಂಡರೆ ಮುಂದೆ ಅವರು ಉತ್ತಮ ವ್ಯಕ್ತಿಗಳಾಗುತ್ತಾರೆ ಎಂಬುದೇ ಈ ಗಾದೆಯ ಅರ್ಥವಾಗಿದೆ.

### 5. ಮಾತೇ ಮುತ್ತು; ಮಾತೇ ಮೃತ್ಯು.

ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು.ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.

ಮನುಷ್ಯನಿಗೆ ಮಾತೇ ಮುಖ್ಯವಾದುದು.ಮಾತಿನಿಂದ ನಮಗೆ ಎಲ್ಲವೂ ದೊರೆಯುತ್ತದೆ.ಬಸವಣ್ಣನವರು 'ನುಡಿದರೆ ಮುತ್ತಿನ ಹಾರದಂತಿರಬೇಕು' ಎಂದಿದ್ದಾರೆ.ನಯವಿನಯದಿಂದ ಮಾತನಾಡಿದರೆ ಜಗತ್ತನ್ನೇ ಗೆಲ್ಲಬಹುದು. ಹಾಗೆಯೇ ಮಾತಿನಿಂದ ದ್ವೇಷ ವಿರಸಗಳು ಉಂಟಾಗುತ್ತವೆ. ಕೊನೆಗೆ ಮೃತ್ಯುವು ಬರಬಹುದು. 'ಮಾತು ಬಲ್ಲವನಿಗೆ ಜಗಳವಿಲ್ಲ' ಎಂಬ ಗಾದೆಯೂ ಮೇಲಿನ ಗಾದೆಗೆ ಪೂರಕವಾಗಿದೆ.ಆದ್ದರಿಂದ ನಾವು ಸಮಯೋಚಿತವಾಗಿ ಎಚ್ಚರಿಕೆಯಿಂದ ಮಾತನಾಡಬೇಕು ಎಂಬುದೇ ಇದರ ಅರ್ಥವಾಗಿದೆ.

# ವ್ಯಾಕರಣಾಂಶಗಳು

## ಸಮಾಸಗಳು

### ತತ್ಪುರುಷ ಸಮಾಸ

| | | | |
|---|---|---|---|
| ಬೆಟ್ಟದಾವರೆ | ತಲೆನೋವು | ದೈವಭಕ್ತಿ | ಸ್ವಾಮಿದ್ರೋಹ |
| ಪರಧನ | ಪೂದೋಟ | ಕಾಲುಬಳೆ | ಧನದಹರಣ |

### ಕರ್ಮಧಾರಯ ಸಮಾಸ

| | | | | |
|---|---|---|---|---|
| ಇಮ್ಮಾವು | ಮೆಲ್ವಾತು | ಹೊಸಗನ್ನಡ | ಅತಿಕುಟಿಲ | |
| ಕಟ್ಟೇಕಾಂತ | ಪೆರ್ಮಗ | ಪೆರ್ಮರ | ನಲ್ಗುದುರೆ | ಹೆದ್ದೊರೆ |

### ದ್ವಿಗು ಸಮಾಸ

| | | |
|---|---|---|
| ಮೂಗಾವುದ | ಮುಕ್ಕಣ್ಣು | ಸಪ್ತಸ್ವರಗಳು |

### ಬಹುವ್ರೀಹಿ ಸಮಾಸ

| | | | |
|---|---|---|---|
| ಹಣೆಗಣ್ಣ | ಮುಕ್ಕಣ್ಣ | ಚಕ್ರಪಾಣಿ | ಅಬ್ಜೋದರ |
| ಘಟಸಂಭೂತ | ಗಾಂಡೀವಿ | ಪವನನಂದನ | ಮದಾಂಧ |
| ಇನತನೂಜ | ದನುಜರಿಪು | ಮುರಾರಿ | ಮೇದಿನೀಪತಿ |
| ರಾಜೀವಸಖ | | | |

### ಅಂಶಿ ಸಮಾಸ

| | | | |
|---|---|---|---|
| ಅಂಗೈ | ಹಿಂದಲೆ | ಕಡೆಗಣ್ಣು | ಮುಂಗೈ |
| ನಡುರಾತ್ರಿ | ನಟ್ಟಡವಿ | | |

### ದ್ವಂದ್ವ ಸಮಾಸ

| | | |
|---|---|---|
| ಗಿರಿವನದುರ್ಗಗಳು | ಕರಿತುರಗರಥಗಳು | ಹನುಮಭೀಮರಾಮರು |
| ಸೂರ್ಯಚಂದ್ರರು | ಮಾದ್ರಮಾಗಧಯಾದವರು | ಕೆರೆಕಟ್ಟೆಬಾವಿಗಳು |

### ಕ್ರಿಯಾ ಸಮಾಸ

| | | | |
|---|---|---|---|
| ಮೈಮುಚ್ಚು | ಕಣ್ದೆರೆ | ಕಂಗೆಡು | ಕೈಕೊಳ್ವುದು |
| ಸಾಕ್ಷಿಮಾಡಿ | ಬಲವಂದು | ಮೋಸಮಾಡು | ಕೈಯಾನು |
| ಹೊಗೆದೋರು | ಸೊಲ್ಗೇಳಿ | ಬಿಲ್ಗೊಂಡು | ಬಿಲ್ದಿರುವನೇರಿಸಿ |

### ಗಮಕ ಸಮಾಸ

| | | |
|---|---|---|
| ಆ ಕಲ್ಲು | ಈ ಬೆಕ್ಕು | ನೆಯ್ದುವಸ್ತ್ರ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. **'ಬೆಟ್ಟದಾವರೆ'** ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ :

(ಎ) ಕರ್ಮಧಾರೆಯ (ಬಿ) ದ್ವಿಗು

(ಸಿ) ತತ್ಪುರುಷ (ಡಿ) ಬಹುವ್ರೀಹಿ

2. **'ಪೆರ್ಮರ'** ಪದವನ್ನು ವಿಗ್ರಹ ವಾಕ್ಯ ಮಾಡಿದಾಗ :
(ಎ) ಪಿರಿದು + ಮರ (ಬಿ) ಪಿರಿ + ಮರ
(ಸಿ) ಪೆರೆ + ಮರ (ಡಿ) ಪೆರ್ + ಮರ

3. ಪೂರ್ವಪದ ಸಂಖ್ಯಾವಾಚಕವಾಗಿದ್ದು ಉತ್ತರಪದ ನಾಮಪದವಾಗಿರುವ ಸಮಾಸ :
(ಎ) ತತ್ಪುರುಷ (ಬಿ) ಅಂಶಿ
(ಸಿ) ಕ್ರಿಯಾ (ಡಿ) ದ್ವಿಗು

4. **'ಅಂಶಿ'** ಸಮಾಸಕ್ಕೆ ಉದಾಹರಣೆ :
(ಎ) ಕೈಯನ್ನು (ಬಿ) ಅಂಗೈ
(ಸಿ) ಅರಮನೆ (ಡಿ) ಕಾರ್ಮೋಡ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ಕಣ್ದೆರೆ : ಕ್ರಿಯಾಸಮಾಸ :: ಕರಿತುರಗರಥಗಳು : ______
2. ಆಕಲ್ಲು : ಗಮಕ :: ಮೆಲ್ವಾತು : ________
3. ಹಣೆಗಣ್ಣ : ಬಹುವ್ರೀಹಿ :: ನೆಯ್ದುವಸ್ತ್ರ : __________

*****

## ಕ್ರಿಯಾಪದ

ಕ್ರಿಯಾಪದದ ಮೂಲರೂಪ**ಧಾತು.**

**ಸಕರ್ಮಕ ಧಾತು :** ಕೊಡು, ಬಿಡು, ಉಣ್ಣು, ಉಜ್ಜು, ಇದ್ದು, ಮುಚ್ಚು ಇತ್ಯಾದಿ.
**ಅಕರ್ಮಕ ಧಾತು :** ಮಲಗು, ಓಡು, ಬದುಕು, ಹೋಗು, ನಾಚು ಇತ್ಯಾದಿ.

ಭೂತಕಾಲ ಸೂಚಕ ಪ್ರತ್ಯಯ **'ದ'.**
ವರ್ತಮಾನಕಾಲ ಸೂಚಕ ಪ್ರತ್ಯಯ **'ಉತ್ತ'.**
ಭವಿಷ್ಯತ್ಕಾಲ ಸೂಚಕ ಪ್ರತ್ಯಯ **'ಉವ/ವ'.**

### ಕಾಲರೂಪ ಕ್ರಿಯಾಪದಗಳು

| ಭೂತ ಕಾಲ | ವರ್ತಮಾನ ಕಾಲ | ಭವಿಷ್ಯತ್ ಕಾಲ |
|---|---|---|
| ತಿಂದೆನು<br>ತಿಂದೆವು | ತಿನ್ನುತ್ತೇನೆ<br>ತಿನ್ನುತ್ತೇವೆ | ತಿನ್ನುವೆನು<br>ತಿನ್ನುವೆವು |
| ತಿಂದೆ<br>ತಿಂದಿರಿ | ತಿನ್ನುತ್ತೀಯೆ<br>ತಿನ್ನುತ್ತೀರಿ | ತಿನ್ನುವೆ<br>ತಿನ್ನುವಿರಿ |
| ತಿಂದನು<br>ತಿಂದಳು<br>ತಿಂದಿತು | ತಿನ್ನುತ್ತಾನೆ<br>ತಿನ್ನುತ್ತಾಳೆ<br>ತಿನ್ನುತ್ತದೆ | ತಿನ್ನುವನು<br>ತಿನ್ನುವಳು<br>ತಿನ್ನುವುದು |
| ತಿಂದರು<br>ತಿಂದವು | ತಿನ್ನುತ್ತಾರೆ<br>ತಿನ್ನುತ್ತವೆ | ತಿಂದರು<br>ತಿನ್ನುವುವು |

*****

## ಅರ್ಥರೂಪಕ್ರಿಯಾಪದಗಳು

| ವಿಧ್ಯರ್ಥಕ | ಸಂಭಾವನಾರ್ಥಕ | ನಿಷೇಧಾರ್ಥಕ |
|---|---|---|
| ತಿನ್ನುವೆ<br>ತಿನ್ನೋಣ | ತಿಂದೇನು<br>ತಿಂದೇವು | ತಿನ್ನೆನು<br>ತಿನ್ನೆವು |
| ತಿನ್ನು<br>ತಿನ್ನಿರಿ | ತಿಂದೀತು<br>ತಿಂದೀರಿ | ತಿನ್ನೆ<br>ತಿನ್ನರಿ |
| ತಿನ್ನಲಿ<br>ತಿನ್ನಲಿ<br>ತಿನ್ನಲಿ | ತಿಂದಾನು<br>ತಿಂದಾಳು<br>ತಿಂದೀತು | ತಿನ್ನನು<br>ತಿನ್ನಳು<br>ತಿನ್ನದು |
| ತಿನ್ನಲಿ<br>ತಿನ್ನಲಿ<br>ತಿನ್ನಲಿ | ತಿಂದಾರು<br>ತಿಂದಾರು<br>ತಿಂದಾವು | ತಿನ್ನರು<br>ತಿನ್ನರು<br>ತಿನ್ನವು |

**ವಿಧ್ಯರ್ಥಕ :** ಮಾಡಲಿ, ತಿನ್ನಲಿ, ಓದಲಿ.
**ನಿಷೇಧಾರ್ಥಕ :** ಮಾಡನು, ತಿನ್ನಳು, ಓದರು.
**ಸಂಭಾವನಾರ್ಥಕ :** ಮಾಡಿಯಾನು, ತಿಂದಾಳು, ಓದಿಯಾರು.

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಕ್ರಿಯಾಪದದ ಮೂಲರೂಪವನ್ನು ಹೀಗೆಂದು ಕರೆಯುತ್ತಾರೆ :
   (ಎ) ಪ್ರತ್ಯಯ (ಬಿ) ಉಪಸರ್ಗ
   (ಸಿ) ಧಾತು (ಡಿ) ಪ್ರಾತಿಪದಿಕ
2. ಇದು ಅಕರ್ಮಕ ಧಾತುವಿಗೆ ಉದಾಹರಣೆ :
   (ಎ) ತಿನ್ನು (ಬಿ) ಮಲಗು
   (ಸಿ) ಉಜ್ಜು (ಡಿ) ಬಿಡು
3. ಇದು ಸಕರ್ಮಕ ಧಾತುವಿಗೆ ಉದಾಹರಣೆ :
   (ಎ) ಓದು (ಬಿ) ನಾಚು
   (ಸಿ) ಕೊಡು (ಡಿ) ಬದುಕು
4. ಧಾತು, ಕಾಲಸೂಚಕ ಪ್ರತ್ಯಯ ಮತ್ತು ಆಖ್ಯಾತ ಪ್ರತ್ಯಯ ಸೇರಿದಾಗ ಆಗುವ ರೂಪ :
   (ಎ) ನಾಮಪದ (ಬಿ) ಕ್ರಿಯಾಪದ
   (ಸಿ) ಅವ್ಯಯ (ಡಿ) ತದ್ಧಿತಾಂತ
5. 'ಶಿಕ್ಷಣವು ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ದ ಹಕ್ಕಾಗಲಿ' ಈ ವಾಕ್ಯದಲ್ಲಿರುವ ವಿಧ್ಯರ್ಥಕ ಕ್ರಿಯಾಪದ :
   (ಎ) ಶಿಕ್ಷಣ (ಬಿ) ಹಕ್ಕಾಗಲಿ
   (ಸಿ) ಪ್ರಗತಿ (ಡಿ) ಎಲ್ಲರ
6. ಕಾರ್ಯವು ಮುಂದೆ ನಡೆಯಲಿದೆ ಎನ್ನುವುದನ್ನು ತಿಳಿಸುವ ಕಾಲ :
   (ಎ) ಭೂತಕಾಲ (ಬಿ) ವರ್ತಮಾನಕಾಲ
   (ಸಿ) ಭವಿಷ್ಯತ್ ಕಾಲ (ಡಿ) ಸಂದಿಗ್ಧಕಾಲ
7. 'ನೋಡುತ್ತಾನೆ' ಕ್ರಿಯಾಪದದ ಭೂತಕಾಲ ರೂಪ :
   (ಎ) ನೋಡಲಿ (ಬಿ) ನೋಡಿದನು
   (ಸಿ) ನೋಡುವನು (ಡಿ) ನೋಡನು
8. 'ಭೀಮನಿಂದ ಅನ್ನವು ಉಣ್ಣಲ್ಪಟ್ಟಿತ್ತು' ಈ ವಾಕ್ಯವು ಕ್ರಿಯಾಪದದ ಈ ಪ್ರಯೋಗಕ್ಕೆ ಉದಾಹರಣೆ
   (ಎ) ಕರ್ಮಣಿ (ಬಿ) ಕರ್ತರಿ
   (ಸಿ) ಸಕರ್ಮ (ಡಿ) ಅಕರ್ಮ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ**

1. ಉಜ್ಜು : ಸಕರ್ಮಕ :: ಬದುಕು : ____________
2. ಮಾಡುತ್ತಾನೆ : ಮಾಡು :: ಓದಿದನು : ____________
3. ಸೇರಿದನು : ಭೂತಕಾಲ :: ಸೇರುತ್ತಾನೆ : ____________

## ಸಮಾನಾರ್ಥಕ ಪದಗಳು

| | | | |
|---|---|---|---|
| ಅನೃತ | **ಸುಳ್ಳು** | ಕೃತ್ರಿಮ | **ಮೋಸ** |
| ಬಾನು | **ಆಕಾಶ** | ಭಾನು | **ಸೂರ್ಯ** |
| ಕುರುಕುಳನಂದನ | **ದುರ್ಯೋಧನ** | ಪವನನಂದನ | **ಭೀಮ** |
| ಸೂರ್ಯ | **ರವಿ** | ಎದೆ | **ಉರ** |
| ಮೇಘ | **ಮೋಡ** | ಗಡ | **ಸಣ್ಣಕೋಟೆ** |
| ಹರಸು | **ಆಶೀರ್ವದಿಸು** | ಕೆನ್ನ | **ಕೆಂಬಣ್ಣ** |
| ವಿಲಾತಿ | **ವಿಲಾಯಿತಿ** | ಅಬ್ಧಿಪ | **ವರುಣ** |
| ತುರಗ | **ಅಶ್ವ** | ಮತ್ತು | **ಅಮಲು** |
| ಹಮ್ಮು | **ಗರ್ವ** | ಶವ | **ಹೆಣ** |
| ಮರಣ | **ಸಾವು** | ಸಂಕಟ | **ದುಃಖ** |
| ಇರಿವನ್ನರ್ | **ಯುದ್ಧ ಮಾಡುವವರು** | ಅಗಡು | **ಶೌರ್ಯ** |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. **'ಭಾನು'** ಪದದ ಅರ್ಥ :
   (ಎ) ಆಕಾಶ (ಬಿ) ಸೂರ್ಯ
   (ಸಿ) ಆಗಸ (ಡಿ) ಬೆಳಕು
2. **'ಸೂನು'** ಪದದ ಅರ್ಥ :
   (ಎ) ಬೇಗ (ಬಿ) ನಾಯಿ
   (ಸಿ) ಮಗ (ಡಿ) ಸೊಣಗ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ಬೆಸಗೈ : ಹೇಳು :: ಪರಿಷೇಕ : __________
2. ಇರಿವನ್ನರ್: ಯುದ್ಧ ಮಾಡುವವರು :: ಮುತ್ತರ್ : __________
3. ಎತ್ತಣ : ಎಲ್ಲಿಯ :: ಪಚ್ಚೆ : __________
4. ಅಗಡು : ಶೌರ್ಯ :: ಅಬ್ಧಿಪ : __________

*****

## ಕನ್ನಡ ದೇಶ್ಯಪದಗಳು

| ಅಂಗಾಂಗಗಳು | | | | |
|---|---|---|---|---|
| ಕೈ | ತಲೆ | ಹೊಟ್ಟೆ | ಕಾಲು | ಬೆನ್ನು |

*****

| ಸಂಬಂಧವಾಚಕಗಳು | | | | |
|---|---|---|---|---|
| ಅಪ್ಪ | ಅಮ್ಮ | ಅಜ್ಜ | ಅಜ್ಜಿ | ತಂಗಿ |
| ಚಿಕ್ಕಪ್ಪ | ಮಾವ | ಭಾವ | ಅಣ್ಣ | ತಮ್ಮ |

*****

| ಪ್ರಾಣಿಗಳು | | | | | |
|---|---|---|---|---|---|
| ಇಲಿ | ಹಾವು | ಎತ್ತು | ಎಮ್ಮೆ | ದನ | ಕೋಳಿ |

*****

| ಸರ್ವನಾಮಗಳು | | | | | | |
|---|---|---|---|---|---|---|
| ನಾನು | ಅವನು | ನೀನು | ಅದು | ಅವು | ಅವರು | ಅವಳು |

*****

| ಸಂಖ್ಯಾವಾಚಕಗಳು | | | | | |
|---|---|---|---|---|---|
| ಒಂದು | ಎರಡು | ಮೂರು | ಹತ್ತು | ನೂರು | ನಾಲ್ಕು |

*****

| ಧಾತುಗಳು | | | |
|---|---|---|---|
| ತಿನ್ನು | ಹೋಗು | ಕೇಳು | ಬಿಡು |

*****

## ಅನ್ಯದೇಶ್ಯ ಪದಗಳು

| ಫಾರ್ಸಿ / ಪರ್ಷಿಯನ್ ಭಾಷೆ ಪದಗಳು | | | | |
|---|---|---|---|---|
| ಅಬಕಾರಿ | ರಸ್ತೆ | ದವಾಖಾನೆ | ಚೌಕಾಷಿ | ದಿವಾನ |
| ಆಮೀನು | ಅಜಮಾಯಿಸಿ | ಆಮದು | ದಲ್ಲಾಳಿ | |

*****

| ಗ್ರೀಕ್ ಮತ್ತು ರೋಮನ್ ಭಾಷೆ ಪದಗಳು | | | | |
|---|---|---|---|---|
| ದಮ್ಮಡಿ | ದಮಡಿ | ದಮ್ಮು | ದೀನಾರ | ಗದ್ಯಾಣ |

*****

| ಅರಬ್ಬೀ ಭಾಷೆ ಪದಗಳು | | | |
|---|---|---|---|
| ಅಮಾನತು | ಅಸಲು | ಇನಾಮು | ಕಾಯ್ದೆ |
| ಗಲೀಜು | ತಕರಾರು | ತರಬೇತು | ನಕಲಿ |

*****

| ಪೋರ್ಚ್‌ಗೀಸ್ ಭಾಷೆ ಪದಗಳು | | | | |
|---|---|---|---|---|
| ಮೇಜು | ತಂಬಾಕು | ಅನಾನಸು | ಸಾಬೂನು | ರಸೀದಿ |
| ಆಸ್ಪತ್ರೆ | ಚೊಂಬು | ಚಾ | ಇಸ್ತ್ರಿ | |

*****

| ಉರ್ದು ಭಾಷೆ ಪದಗಳು | | | |
|---|---|---|---|
| ಕಿಮ್ಮತ್ತು | ತಾರೀಖು | ತಾಲೂಕು | ಅಹವಾಲು |
| ಇಲಾಖೆ | ದರ್ಜೆ | ಬಂದೂಕು | ರುಜು |
| ಶುರು | ಶಾಮೀಲು | | |

*****

| ಹಿಂದೂಸ್ಥಾನೀ ಭಾಷೆ ಪದಗಳು | | | |
|---|---|---|---|
| ಅರ್ಜಿ | ಕಚೇರಿ | ಕಾರ್ಖಾನೆ | ಸಲಾಮು |
| ದರ್ಬಾರು | ಕುರ್ಚಿ | ಕಾಗದ | ಹುಕುಂ |

*****

| ಇಂಗ್ಲಿಷ್ ಭಾಷೆ ಪದಗಳು | | | |
|---|---|---|---|
| ಬಸ್ಸು | ಕಾರು | ಕಾಲೇಜು | ಲೈಟು |
| ಪೆನ್ನು | ಸೋಪು | ಡಿಪ್ಲೊಮಾ | |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. **'ಮೇಜು'** ಪದವು ಈ ಭಾಷೆಯಿಂದ ಕನ್ನಡಕ್ಕೆ ಬಂದಿದೆ :
   (ಎ) ಇಂಗ್ಲೀಷ್ (ಬಿ) ಉರ್ದು
   (ಸಿ) ಪೋರ್ಚುಗೀಸ್ (ಡಿ) ಪಾರ್ಸಿ
2. ಈ ಪದಗಳಲ್ಲಿ ಉರ್ದು ಭಾಷೆಯಿಂದ ಬಂದ ಪದ ಗುರುತಿಸಿ :
   (ಎ) ಇಲಾಖೆ (ಬಿ) ಅರ್ಜಿ
   (ಸಿ) ಬಸ್ಸು (ಡಿ) ಕಾಯಿದೆ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ**

1. ಕುರ್ಚಿ : ಹಿಂದೂಸ್ಥಾನಿ :: ಅಮಾನತ್ತು : ____________

## ಲೇಖನ ಚಿಹ್ನೆಗಳು

**ಪೂರ್ಣವಿರಾಮ : – ( . )** ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ 'ಪೂರ್ಣವಿರಾಮ ಚಿಹ್ನೆ'ಯನ್ನು ಬಳಸಬೇಕು.

**ಅರ್ಧವಿರಾಮ ಚಿಹ್ನೆ :– ( ; )**ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ 'ಅರ್ಧವಿರಾಮ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.

**ಅಲ್ಪವಿರಾಮ ಚಿಹ್ನೆ :– ( , )**ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆಬೇರೆ ವಿಶೇಷಣಗಳು ಬಂದಾಗ ಕೊನೆಯ ವಿಶೇಷಣವನ್ನು ಬಿಟ್ಟು ಉಳಿದವುಗಳ ಮುಂದೆ 'ಅಲ್ಪವಿರಾಮ ಚಿಹ್ನೆ'ಯನ್ನು ಬಳಸಬೇಕು.

**ಉದಾಹರಣೆ :** ಬಟ್ಟೆ ಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ ಚಿಹ್ನೆ :– ( ? )** ಪ್ರಶ್ನಾರೂಪದ ಪದ ಮತ್ತು ವಾಕ್ಯಗಳ ಮುಂದೆ 'ಪ್ರಶ್ನಾರ್ಥಕ ಚಿಹ್ನೆ'ಯನ್ನು ಬಳಸಲಾಗುವುದು.

**ಭಾವಸೂಚಕ ಚಿಹ್ನೆ :– ( ! )** ಹರ್ಷ, ಅಶ್ಚರ್ಯ, ಸಂತೋಷ, ವಿಷಾದ, ದುಃಖ, ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ 'ಭಾವಸೂಚಕ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ಅಯ್ಯೋ ! ಹೀಗಾಗಬಾರದಿತ್ತು !

**ಉದ್ಧರಣ ಚಿಹ್ನೆ :– ( " " )** ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ.ಬರೆಯುವಾಗ 'ಉದ್ಧರಣ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ : "**ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮ ಸಿದ್ಧ ಹಕ್ಕಾಗಬೇಕು**"** ಎಂದು ಸರ್. ಎಂ.ವಿಶ್ವೇಶ್ವರಯ್ಯ ಅವರು ಹೇಳಿದರು.

**ವಾಕ್ಯವೇಷ್ಟನ ಚಿಹ್ನೆ :– ( ' ' )** ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ 'ವಾಕ್ಯವೇಷ್ಟನ ಚಿಹ್ನೆ'ಯನ್ನು ಬಳಸಲಾಗುವುದು.

**ಉದಾಹರಣೆ :** ಕನ್ನಡದಲ್ಲಿ **'**ಇಂಗ್ಲೀಷ್**'**, **'**ಪರ್ಷಿಯನ್**'**, **'**ಪೋರ್ಚುಗೀಸ್ ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ :– (  )** ಒಂದು ಪದವನ್ನೋ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ 'ಆವರಣ ಚಿಹ್ನೆ'ಯನ್ನು ಬಳಸಲಾಗುತ್ತದೆ.

**ಉದಾಹರಣೆ :**ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್), ಜಲಜನಕ (ಹೈಡ್ರೋಜನ್)ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ :– ( :– )** ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ 'ವಿವರಣಾತ್ಮಕ'ಚಿಹ್ನೆಯನ್ನು ಬಳಸಲಾಗುತ್ತದೆ.

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ :
   (ಎ) ವಿವರಣಾತ್ಮಕ ಚಿಹ್ನೆ (ಬಿ) ಉದ್ಧರಣ ಚಿಹ್ನೆ
   (ಸಿ)ವಾಕ್ಯವೇಷ್ಟನ ಚಿಹ್ನೆ (ಡಿ) ಭಾವಸೂಚಕ ಚಿಹ್ನೆ
2. ಬುಕ್ಕರಾಯನ ಹಿರಿಮೆ ಏನು – ಈ ವಾಕ್ಯದಲ್ಲಿ ಇರಬೇಕಾದ ಲೇಖನಚಿಹ್ನೆ :
   (ಎ) ಪೂರ್ವ ವಿರಾಮ (ಬಿ) ಅಲ್ಪವಿರಾಮ
   (ಸಿ) ಪ್ರಶ್ನಾರ್ಥಕ (ಡಿ) ಭಾವಸೂಚಕ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ವಾಕ್ಯದ ಕೊನೆಗೆ : ಪೂರ್ಣವಿರಾಮ :: ಆಶ್ಚರ್ಯ ಸೂಚಕ : ____________
2. ಆವರಣಚಿಹ್ನೆ : ( ) :: ವಾಕ್ಯವೇಷ್ಟನ ಚಿಹ್ನೆ : ____________

*****

## ವಾಕ್ಯ ಪ್ರಕಾರಗಳು

ವಾಕ್ಯದಲ್ಲಿ <u>**ಮೂರು**</u> ವಿಧಗಳಿವೆ.

1. ಸಾಮಾನ್ಯ ವಾಕ್ಯ2. ಸಂಯೋಜಿತ ವಾಕ್ಯ (ಸಂಯುಕ್ತ ವಾಕ್ಯ)3. ಮಿಶ್ರ ವಾಕ್ಯ.

**ಸಾಮಾನ್ಯ ವಾಕ್ಯ :–** ಒಂದು ಪೂರ್ಣ ಕ್ರಿಯಾಪದದೊಂದಿಗೆ ಸ್ವತಂತ್ರವಾಗಿರುವ ವಾಕ್ಯವನ್ನು <u>**'ಸಾಮಾನ್ಯ ವಾಕ್ಯ'**</u> ಎಂದು ಕರೆಯುತ್ತಾರೆ.

**ಉದಾ:–**

1. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತು.
2. ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು.
3. ವೀರೇಶ್ವರ ಪಾಠಕ್‌ರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಲಾಯಿತು.

**ಸಾಮಾನ್ಯ ವಾಕ್ಯದಲ್ಲಿ ಒಂದು ಕ್ರಿಯಾಪದ ಮಾತ್ರವಿದ್ದು, ಸಾಪೇಕ್ಷ ಕ್ರಿಯಾರೂಪಗಳು ಮಧ್ಯದಲ್ಲಿ ಬರಬಹುದು.**

**ಉದಾ :–** ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು.

**ಸಂಯೋಜಿತ ವಾಕ್ಯ :–** ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು **'ಸಂಯೋಜಿತ ವಾಕ್ಯ'** ಎನಿಸುವುದು.

**ಉದಾ:–**ಕಾರವಾರದಲ್ಲಿ ಮಲೇರಿಯಾ ಹಬ್ಬಿತ್ತು ಆದ್ದರಿಂದ ವೀರೇಶ್ವರ ಪಾಠಕ್‌ರವರು ಮಲೇರಿಯಾದಿಂದ ಬಳಲಬೇಕಾಯಿತು ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಯಿಸಲಾಯಿತು.

**ಮಿಶ್ರವಾಕ್ಯ :–** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು <u>**'ಮಿಶ್ರವಾಕ್ಯ'**</u> ಎನ್ನುತ್ತೇವೆ.

**ಉದಾ:–**ಏನಾದರೂ ಮಾಡಿ ಭಾರತದಲ್ಲಿ ಮೋಟಾರು ಕಾರ್ಖಾನೆಯನ್ನು ಸ್ಥಾಪಿಸಲು ವಿಶ್ವೇಶ್ವರಯ್ಯನವರು ನಿರ್ಧರಿಸಿದರಾದರೂ ಅವರ ನಿರ್ಧಾರಕ್ಕೆ ಬ್ರಿಟಿಷ್ ಸರ್ಕಾರದ ಅಪ್ಪಣೆ ದೊರೆಯಲಿಲ್ಲವೆಂಬ ವಿಷಯ ತಿಳಿದಾಗ ಅವರು ಬಹುವಾಗಿ ಮರುಗಿದರು.

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಎರಡು ಅಥವಾ ಅನೇಕ ಸ್ವತಂತ್ರ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣಾರ್ಥವನ್ನು ಕೊಡುವ ವಾಕ್ಯವು :
   (ಎ) ಸಾಮಾನ್ಯವಾಕ್ಯ (ಬಿ) ಸಂಯೋಜಿತವಾಕ್ಯ
   (ಸಿ) ಮಿಶ್ರವಾಕ್ಯ (ಡಿ) ವಿಶೇಷವಾಕ್ಯ
2. **'**ಪ್ರವಾಸವು ಅನುಭವವನ್ನು ಹೆಚ್ಚಿಸುತ್ತದೆ**'** ಈ ವಾಕ್ಯವು :
   (ಎ) ಸಾಮಾನ್ಯವಾಕ್ಯ (ಬಿ) ಮಿಶ್ರವಾಕ್ಯ
   (ಸಿ)ಸಂಯೋಜಿತವಾಕ್ಯ (ಡಿ) ವಿಶೇಷವಾಕ್ಯ

*****

## ತದ್ಧಿತಾಂತಗಳು

| ತದ್ಧಿತಾಂತ ನಾಮ | | ತದ್ಧಿತಾಂತ ಭಾವನಾಮ | ತದ್ಧಿತಾಂತ ಅವ್ಯಯ | |
|---|---|---|---|---|
| ಪುಲ್ಲಿಂಗ | ಸ್ತ್ರೀಲಿಂಗ | | | |
| | | ಬಡತನ | ಚಂದ್ರನಂತೆ | ಅವನಂತೆ |
| ಮೋಸಗಾರ | ಮೋಸಗಾರ್ತಿ | ಸಿರಿತನ | ಚಂದ್ರನವೊಲ್ | ಅವನವೊಲ್ |
| ಕನ್ನಡಿಗ | ಕನ್ನಡತಿ | ಹಿರಿಮೆ | ಮನೆಯವೋಲು | ಇದರವೋಲು |
| ಬಳೆಗಾರ | ಬಳೆಗಾರ್ತಿ | ಜಾಣತನ | ಕರಡಿಯವೋಲ್ | ನದಿಯವೋಲ್ |
| ಕೋಲುಕಾರ | ಕೋಲುಕಾರ್ತಿ | ಚೆಲುವಿಕೆ | ಮನೆಯತನಕ | ಹಿಮಾಲಯದತನಕ |
| ಸಿರಿವಂತ | ಸಿರಿವಂತೆ | ಕಪ್ಪು | ಶಾಲೆಯವರೆಗೆ | ಪಟ್ಟಣದವರೆಗೆ |
| | | ಪೆರ್ಮೆ | ಇವಳಮಟ್ಟಿಗೆ | ಸುಂದರನಮಟ್ಟಿಗೆ |
| | | | ನನಗೋಸ್ಕರ | ಬೆಕ್ಕಿಗೋಸ್ಕರ |
| | | | ಅರ್ಜುನನ ಸಲುವಾಗಿ | ಕಟ್ಟಡದ ಸಲುವಾಗಿ |
| | | | ರಾಧೆಗಿಂತ | ಅದಕ್ಕಿಂತ |
| | | | ನಿನಗಾಗಿ | ಇದಕ್ಕಾಗಿ |
| | | | ಮದುವೆಗೋಸುಗ | ಕಾಗೆಗೋಸುಗ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ತದ್ಧಿತಾಂತಗಳು ರಚನೆಯಾಗುವುದು ಹೀಗೆ :
   (ಎ) ನಾಮಪದ + ವಿಭಕ್ತಿ ಪ್ರತ್ಯಯ (ಬಿ) ನಾಮಪದ + ತದ್ಧಿತ ಪ್ರತ್ಯಯ
   (ಸಿ) ನಾಮಪದ + ಆಖ್ಯಾತ ಪ್ರತ್ಯಯ (ಡಿ) ಧಾತು + ಕೃತ್ ಪ್ರತ್ಯಯ
2. 'ಜಾಣತನ' ಪದವು ಈ ತದ್ಧಿತಾಂತ ರೂಪಕ್ಕೆ ಸೇರಿದೆ :
   (ಎ) ತದ್ಧಿತಾಂತ ಭಾವನಾಮ (ಬಿ) ತದ್ಧಿತಾಂತ ಅವ್ಯಯ
   (ಸಿ) ತದ್ಧಿತಾಂತ (ಡಿ) ಕೃದಂತ
3. ಈ ಕೆಳಗಿನವುಗಳಲ್ಲಿ ತದ್ಧಿತಾಂತ ನಾಮಕ್ಕೆ ಉದಾಹರಣೆ :
   (ಎ) ಕಪ್ಪು (ಬಿ) ಸಿರಿವಂತ
   (ಸಿ) ಚಂದ್ರನಂತೆ (ಡಿ) ಚೆಲುವಿಕೆ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ**

1. ಬಳೆಯನ್ನು ಮಾರುವವ : ಬಳೆಗಾರ :: ಕುಂಬವನ್ನು ಮಾಡುವವನು : ________
2. ಪಿರಿಯದರ ಭಾವ : ಪೆರ್ಮೆ :: ನೋಡುವುದರ ಭಾವ : ________
3. ಕನ್ನಡಿಗ : ತದ್ಧಿತಾಂತ :: ನನಗೋಸ್ಕರ : ________

*****

## ಕೃದಂತಗಳು

| ಕೃದಂತನಾಮಗಳು | ಕೃದಂತ ಭಾವನಾಮಗಳು | ಕೃದಂತಾವ್ಯಯಗಳು |
|---|---|---|
| ಮಾಡಿದ | ಮಾಟ | ಮಾಡಿ |
| ತಿನ್ನುವ | ತಿನ್ನುವಿಕೆ | ತಿಂದು |
| ನಡೆಯುವ | ನಡೆತ | ನಡೆಯುತ್ತ |
| ಓಡಿದ | ಓಟ | ಓಡಿ |

*****

| ಕೃದಂತನಾಮಗಳು | | |
|---|---|---|
| ವರ್ತಮಾನ ಕೃದಂತಗಳು | ಭೂತ ಕೃದಂತಗಳು | ನಿಷೇಧ ಕೃದಂತಗಳು |
| ಓಡುವ | ಓಡಿದ | ಓಡದ |
| ಬಾಳುವ | ಬಾಳಿದ | ಬಾಳದ |
| ಬರೆಯುವ | ಬರೆದ | ಬರೆಯದ |

*****

| ಕೃದಂತಗಳು | | |
|---|---|---|
| ಕೃದಂತನಾಮಗಳು | ಕೃದಂತ ಭಾವನಾಮಗಳು | ಕೃದಂತಾವ್ಯಯಗಳು |
| ಮಾಡಿದ | ಮಾಟ | ಮಾಡಿ |
| ತಿನ್ನುವ | ತಿನ್ನುವಿಕೆ | ತಿಂದು |
| ನಡೆಯುವ | ನಡೆತ | ನಡೆಯುತ್ತ |
| ಓಡಿದ | ಓಟ | ಓಡಿ |

*****

| ಕೃದಂತ ಭಾವನಾಮಗಳು | | |
|---|---|---|
| ಧಾತು | ಕೃತ್ ಪ್ರತ್ಯಯ | ಕೃದಂತ ಭಾವನಾಮಗಳು |
| ಓಡು | ಟ | ಓಟ |
| ನೋಡು | ಟ | ನೋಟ |
| ಬಾಳು | ವಿಕೆ | ಬಾಳುವಿಕೆ |
| ಬರೆ | ವಿಕೆ | ಬರೆಯುವಿಕೆ |
| ಅಂಜು | ಇಕೆ | ಅಂಜಿಕೆ |
| ನಂಬು | ಇಕೆ | ನಂಬಿಕೆ |
| ಉಡು | ಗೆ | ಉಡುಗೆ |
| ತೊಡು | ಗೆ | ತೊಡುಗೆ |
| ನಗು | ಉದು | ನಗುವುದು |
| ತಿನ್ನು | ಉದು | ತಿನ್ನುವುದು |

*****

| ಕೃದಂತಾವ್ಯಯಗಳು | | |
|---|---|---|
| **ಧಾತು** | **ಕೃತ್ ಪ್ರತ್ಯಯ** | **ಕೃದಂತಾವ್ಯಯಗಳು** |
| ಉಣ್ಣು | ಅದೆ | ಉಣ್ಣದೆ |
| ಮಾಡು | ಅದೆ | ಮಾಡದೆ |
| ಬರು | ಉತ್ತ | ಬರುತ್ತ |
| ಮಾಡು | ಉತ್ತ | ಮಾಡುತ್ತ |
| ಬರೆ | ದು | ಬರೆದು |
| ಹೋಗು | ಅಲಿಕ್ಕೆ | ಹೋಗಲಿಕ್ಕೆ |
| ಮಾಡು | ಅಲಿಕ್ಕೆ | ಮಾಡಲಿಕ್ಕೆ |
| ಮಾಡು | ಅಲು | ಮಾಡಲು |
| ಮಾಡು | ಅ | ಮಾಡ |
| ಮಾಡು | ಇ | ಮಾಡಿ |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಧಾತುವಿಗೆ ಕೃತ್ ಪ್ರತ್ಯಯ ಸೇರಿದಾಗ ಆಗುವ ರೂಪ :
   (ಎ) ಕ್ರಿಯಾಪದ (ಬಿ) ತದ್ಧಿತಾಂತ
   (ಸಿ) ಕೃದಂತ (ಡಿ) ಸಮಾಸ
2. 'ಮಾಟ' ಎನುವುದು ಕೃದಂತದ ಈ ರೂಪಕ್ಕೆ ಸೇರಿದೆ :
   (ಎ) ಕೃದಂತ ಭಾವನಾಮ (ಬಿ) ಕೃದಂತಾವ್ಯಯ
   (ಸಿ) ವರ್ತಮಾನ ಕೃದಂತ (ಡಿ) ಭೂತಕೃದಂತ
3. 'ಊಟ ಮಾಡುತ್ತಾ ನೀರು ಕುಡಿಯಬೇಡ – ಈ ವಾಕ್ಯದಲ್ಲಿ 'ಮಾಡುತ್ತಾ' ಪದದ ಕೃದಂತರೂಪ :
   (ಎ) ಕೃದಂತ ಭಾವನಾಮ (ಬಿ) ಕೃದಂತಾವ್ಯಯ
   (ಸಿ) ನಿಷೇಧ ಕೃದಂತ (ಡಿ) ಭೂತಕೃದಂತ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧಹೊಂದುವ ಪದಗಳನ್ನು ಬರೆಯಿರಿ.**

1. ಬರೆಯುವ : ವರ್ತಮಾನ ಕೃದಂತ :: ಬರೆದ : ____________
2. ಮಾಡಲು : ಕೃದಂತಾವ್ಯಯ :: ಮಾಡದ : ____________

*****

## ಅವ್ಯಯಗಳು

**ಅವ್ಯಯಗಳು**

ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು **'ಅವ್ಯಯಗಳು'** ಎನ್ನುವರು.

**ಸಾಮಾನ್ಯಾವ್ಯಯಗಳು**

ಯಾವುದಾರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳೇ **'ಸಾಮಾನ್ಯಾವ್ಯಯಗಳು'** ಎನ್ನುವರು.ಇವು ಹೆಚ್ಚಾಗಿ ವಿಶೇಷಣಗಳಾಗಿರುತ್ತವೆ.

ಉದಾ:– ಬೇಗನೆ, ಮೆಲ್ಲಗೆ, ಸೊಗಸಾಗಿ, ಸುಮ್ಮನೆ
ತಟ್ಟನೆ, ತರುವಾಯ, ಹಾಗೆ, ಅಂತು
ಬೇರೆ, ಬಳಿಕ, ಕೂಡಲೆ, ಚೆನ್ನಾಗಿ

**ಅನುಕರಣಾವ್ಯಯಗಳು**

ನಿರ್ದಿಷ್ಟಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ತಾನು ಕಿವಿಯಿಂದ ಕೇಳಿದಂತೆ ಅನುಕರಣೆ ಮಾಡಿ ಹೇಳುವ ಪದಗಳನ್ನು **'ಅನುಕರಣಾವ್ಯಯಗಳು'** ಎಂದು ಕರೆಯುತ್ತಾರೆ.

ಉದಾ:– ಚಟಚಟ, ಕರಕರ, ಚುರುಚುರು, ಧಗಧಗ
ರೊಯ್ಯನೆ ಸುಯ್ಯನೆ ಘುಳುಘುಳು ದಡದಡ

**ಭಾವಸೂಚಕಾವ್ಯಯಗಳು**

ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ – ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ. ಅಂತಹ ಪದಗಳನ್ನು **'ಭಾವಸೂಚಕಾವ್ಯಯಗಳು'** ಎಂದು ಕರೆಯುತ್ತಾರೆ.

ಉದಾ:– ಅಹಾ! ಭಳಿರೆ! ಓಹೋ! ಹೋ!
ಅಃ! ಆಃ! ಓ!

**ಕ್ರಿಯಾರ್ಥಕಾವ್ಯಯಗಳು**

ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯಗಳನ್ನು **'ಕ್ರಿಯಾರ್ಥಕ ಅವ್ಯಯಗಳು'** ಎಂದು ಕರೆಯಲಾಗಿದೆ.

ಉದಾ :– ಅಹುದು, ಸಾಕು, ಅಲ್ಲ, ಹೌದು, ಬೇಡ, ಉಂಟು ಇತ್ಯಾದಿ.

**ಸಂಬಂಧಾರ್ಥಕಾವ್ಯಯಗಳು**

ಎರಡು ಪದಗಳನ್ನಾಗಲೀ, ಹಲವು ಪದ ಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ ಜೋಡಿಸುವಂತಹ ಅಥವಾ ಸಂಬಂಧಗೊಳಿಸುವಂತಹ ಪದಗಳೇ **'ಸಂಬಂಧಾರ್ಥಕಾವ್ಯಯಗಳು'**

**ಉದಾ:– ಊ, ಉಂ, ಮತ್ತು, ಅಥವಾ, ಆದ್ದರಿಂದ, ಅಲ್ಲದೆ, ಇತ್ಯಾದಿ.**

**ಪದಗಳ ಜೋಡಣೆ :–**

ರಾಮ**ನೂ** ಲಕ್ಷ್ಮಣ**ನೂ** ಸೀತೆ**ಯೂ** ಕಾಡಿಗೆ ಹೊರಟರು.

**ಪದ ಸಮುಚ್ಚಯ ಜೋಡಣೆ :–**

ಅವನು ಬರುವು**ದೂ** ಬೇಡ; ಆ ಕೆಲಸ ಆಗುವು**ದೂ** ಬೇಡ.

**ವಾಕ್ಯಗಳ ಜೋಡಣೆ :–**

ಅವನು ಬರಲಿಲ್ಲ **ಆದ್ದರಿಂದ** ನಾನೂ ಬರಲಿಲ್ಲ.

**ಅವಧಾರಣಾರ್ಥಕಾವ್ಯಯಗಳು**

ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು **'ಅವಧಾರಾಣಾರ್ಥಕಾವ್ಯಯ'** ಎಂದು ಕರೆಯುತ್ತಾರೆ.ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ.

**ಉದಾ:–** ಅವನೇ, ಅದುವೇ, ಅವಳೇ, ನೀನೇ
ಅವರೇ

**ಪದಗಳ ಕೊನೆಯಲ್ಲಿರುವ 'ಏ' ಎಂಬ ಅಕ್ಷರವೇ ಅವಧಾರಾಣಾರ್ಥಕಾವ್ಯಯ.**

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

**1**. ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪ ಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು ಹೀಗೆನ್ನುತ್ತಾರೆ :

(ಎ) ಸಮಾಸಗಳು (ಬಿ) ಕೃದಂತಗಳು
(ಸಿ) ಅವ್ಯಯಗಳು (ಡಿ) ತದ್ಧಿತಾಂತಗಳು

2. ಆ ಗೊಂದಲ ಕ್ಷಣಕಾಲಕ್ಕಿಂತಲು ಹೆಚ್ಚಾಗಿ ನಿಲ್ಲಲಿಲ್ಲ. ಈ ವಾಕ್ಯದಲ್ಲಿರುವ ಅವ್ಯಯ :

(ಎ) ಗೊಂದಲ (ಬಿ) ಹೆಚ್ಚಾಗಿ
(ಸಿ) ಕ್ಷಣಕಾಲ (ಡಿ) ನಿಲ್ಲಲಿಲ್ಲ

3. ಉಂಟು – ಇದು ಈ ಅವ್ಯಯ ಪ್ರಕಾರಕ್ಕೆ ಸೇರಿದೆ :

(ಎ) ಸಾಮಾನ್ಯ (ಬಿ) ಅನುಕರಣ
(ಸಿ) ಭಾವಸೂಚಕ (ಡಿ) ಕ್ರಿಯಾರ್ಥಕ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ಧಗಧಗ : ಅನುಕರಣಾವ್ಯಯ :: ಆದ್ದರಿಂದ : ____________
2. ತಟ್ಟನೆ : ಸಾಮಾನ್ಯಾವ್ಯಯ :: ಓಹೋ : ____________
3. ಅವನೇ : ಅವಧಾರಣಾರ್ಥಕಾವ್ಯಯ :: ಸಾಕು : ____________

## ಅಲಂಕಾರಗಳು

ಕಾವ್ಯಕ್ಕೆ ಶೋಭೆ ತರುವ ಧರ್ಮವೇ ಅಲಂಕಾರ.ಮಾತಿನ ಅಥವಾ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಸಲುವಾಗಿ ಬಳಸುವ ಶಬ್ದ ಹಾಗೂ ಅರ್ಥ ಚಮತ್ಕಾರಗಳನ್ನು **'ಅಲಂಕಾರ'** ಎನ್ನುವರು.

ಮುತ್ತೈದೆಯ ಹಣೆಯ ಕುಂಕುಮದಂತೆ ಕಂಡನು.
ಎಳೆಗಿಳಿಗಳ ಬಳಗಗಳು ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು.

ಅಲಂಕಾರದಲ್ಲಿ **ಶಬ್ದಾಲಂಕಾರ** ಮತ್ತು **ಅರ್ಥಾಲಂಕಾರಗ**ಳೆಂದು **ಎರಡು** ವಿಧಗಳಿವೆ.

**ಶಬ್ದಾಲಂಕಾರ**
ಮಾತಿನ ಅಥವಾ ಕಾವ್ಯದ ಸೌಂದರ್ಯವು ಶಬ್ದ ಅಥವಾ ಅಕ್ಷರಗಳ ಜೋಡಣೆಯ ಚಮತ್ಕಾರದಿಂದ ಹೆಚ್ಚಿದರೆ ಅದನ್ನು **'ಶಬ್ದಾಲಂಕಾರ'** ಎನ್ನುವರು.

ಶಬ್ದಾಲಂಕಾರದಲ್ಲಿ **ಮೂರು** ವಿಧಗಳಿವೆ.
1. ಅನುಪ್ರಾಸ 2. ಯಮಕ 3.ಚಿತ್ರ ಕವಿತ್ವ

ಮಾತಿನ ಅಥವಾ ಕಾವ್ಯದ ಸೌಂದರ್ಯವು ಅಕ್ಷರಗಳ ಪುನರಾವರ್ತನೆಯಿಂದ ಹೆಚ್ಚಿದರೆ ಅದನ್ನು **'ಅನುಪ್ರಾಸ'** ಎನ್ನುವರು.

ಅನುಪ್ರಾಸದಲ್ಲಿ **ವೃತ್ತ್ಯನುಪ್ರಾಸ** ಮತ್ತು **ಛೇಕಾನುಪ್ರಾಸ** ಎಂದು **ಎರಡು** ವಿಧಗಳಿವೆ.

ಮಾತಿನ ಅಥವಾ ಕಾವ್ಯದ ಸೌಂದರ್ಯವು ಒಂದು ಅಥವಾ ಎರಡು ಅಕ್ಷರಗಳು ಪ್ರತಿಪಾದದಲ್ಲಿ ಪುನರಾವರ್ತನೆಯಾಗುವುದರಿಂದ ಹೆಚ್ಚಿದರೆ ಅದನ್ನು **'ವೃತ್ತ್ಯನುಪ್ರಾಸ'** ಎನ್ನುವರು.

* **ಎಳಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು.**

ಮಾತಿನ ಅಥವಾ ಕಾವ್ಯದ ಸೌಂದರ್ಯವು ಎರಡು ಅಕ್ಷರಗಳಿಂದ ಕೂಡಿದ ಪದಗಳು ಪ್ರತಿ ಪಾದದಲ್ಲಿಯೂ ಪುನರಾವರ್ತನೆಯಾಗುವುದರಿಂದ ಹೆಚ್ಚಿದರೆ ಅದನ್ನು **'ಛೇಕಾನುಪ್ರಾಸ'** ಎನ್ನುವರು.

* ಕೆಲದೊಳ್ ಪುಳಿಂದಿಯಿರೆ ಪೆ
ರ್ಬುಲಿ ಬಂದೊಡಮಂಜನಳ್ಕ **ನೋಡಂನೋಡುತಂ**
ಚಲದಿಂ **ಕಾಡಂಕಾಡಂ**
ಸಲೆ ಪಸಿವಂ ಮರೆದು ತಣಿದು **ಬೇಡಂಬೇಡಂ**

ಮಾತಿನ ಅಥವಾ ಕಾವ್ಯದ ಸೌಂದರ್ಯವು ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳಿಂದ ಕೂಡಿದ ಪದಗಳು ಅಥವಾ ಪದಭಾಗ ಪ್ರತಿ ಪಾದದಲ್ಲಿಯೂ ಆದಿ / ಮಧ್ಯ / ಅಂತ್ಯದಲ್ಲಿ ನಿಯತವಾಗಿ ಪುನರಾವರ್ತನೆಯಾಗುವುದರಿಂದ ಹೆಚ್ಚಿದರೆ ಅದನ್ನು **'ಯಮಕಾಲಂಕಾರ'**ಎನ್ನುವರು.

* **ಅಮಳ್ಗಳ್** ನಯವಿಕ್ರಮಗುಣ
**ದಮಳ್ಗಳ್** ನೃಪಶಾಸ್ತ್ರ ಪರಿಣತರವರವರಂ ॥
**ಸಮರ**ದೊಳಗಗ್ರ ಶೌರ್ಯಂ
**ಸಮರಸ** ಸಂಪನ್ನನಾವನುದಾರನಪ್ಪನ್ ॥

ಮಾತಿನ ಅಥವಾ ಕಾವ್ಯದ ಸೌಂದರ್ಯವು ಅಕ್ಷರಗಳ ಅಥವಾ ಪದಗಳ ವಿಶಿಷ್ಟವಾದ ಬಳಕೆಯ ಮೂಲಕ ಹೆಚ್ಚಿದರೆ ಅದನ್ನು **'ಚಿತ್ರ ಕವಿತ್ವ'**ಎನ್ನುವರು.ಇದರಲ್ಲಿ ನಿರೋಷ್ಠ್ಯ, ತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರ, ಹಾರಬಂಧ, ಮುರಜಬಂಧ ಇತ್ಯಾದಿ ಪ್ರಕಾರಗಳಿವೆ.

**ನನ್ದನ ನನ್ದನ ನಿನ್ನೊ**
**ನ್ದನ್ದದ ಮೈ ಮುನ್ದೆ ನಿನ್ದುದೆನ್ನದೆ ಮುದದಿ**
**ನ್ದನ್ದಿನ್ದುನ್ದೆನ್ನದೆ ನೀ**
**ನೆನ್ದುಂ ಮನ್ಮನದೆ ನೆಮ್ಮಿನಿನ್ದೀ ಮುದಮಂ**

## ಅರ್ಥಾಲಂಕಾರ

ಮಾತಿನ ಅಥವಾ ಕಾವ್ಯ ಸೌಂದರ್ಯವು ಪದಗಳ ಅರ್ಥ ಚಮತ್ಕಾರದಿಂದ ಹೆಚ್ಚಿದರೆ ಅದನ್ನು**'ಅರ್ಥಾಲಂಕಾರ'**ಎನ್ನುವರು.

## ಉಪಮಾಲಂಕಾರ

ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದನ್ನು **'ಉಪಮಾಲಂಕಾರ'** ಎನ್ನುವರು.

**'ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ'**
**ಅಲಂಕಾರ** :–ಉಪಮಾಲಂಕಾರ
ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ** :– ಸತಿಪತಿಗಳೊಂದಾಗದವನ ಭಕ್ತಿ
**ಉಪಮಾನ** :–ಅಮೃತದೊಳು ಬೆರೆತ ವಿಷ
**ಉಪಮಾ ವಾಚಕ** :– ಅಂತೆ
**ಸಮಾನ ಧರ್ಮ** :– ಸ್ಪಷ್ಟವಾಗಿಲ್ಲ (ನಿಷ್ಪ್ರಯೋಜಕವಾದುದು)
**ಸಮನ್ವಯ** :–ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದ ಭಕ್ತಿಯನ್ನುಉಪಮಾನವಾದ ಅಮೃತದೊಳು ಬೆರೆತ ವಿಷಕ್ಕೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ

*****

**ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ**
**ಅಲಂಕಾರ** :–ಉಪಮಾಲಂಕಾರ
ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ** :– ನೀಚರಿಗೆ ಮಾಡುವ ಉಪಕಾರ
**ಉಪಮಾನ** :–ಹಾವಿಗೆ ಎರೆದ ಹಾಲು
**ಉಪಮಾ ವಾಚಕ** :– ಅಂತೆ
**ಸಮಾನ ಧರ್ಮ** :– ಸ್ಪಷ್ಟವಾಗಿಲ್ಲ (ಪ್ರಯೋಜನವಿಲ್ಲ)
**ಸಮನ್ವಯ** :–ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ.

*****

**ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**
**ಅಲಂಕಾರ** :–ಉಪಮಾಲಂಕಾರ
ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.
**ಉಪಮೇಯ** :– ಭೀಮ ದುರ್ಯೋಧನರು
**ಉಪಮಾನ** :–ಮದಗಜಗಳು
**ಉಪಮಾ ವಾಚಕ** :– ಅಂತೆ
**ಸಮಾನ ಧರ್ಮ** :– ಹೋರಾಡುವುದು
**ಸಮನ್ವಯ** :–ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿ ವರ್ಣಿಸಲಾಗಿದೆ.

**ಸೀತೆಯ ಮುಖ ಕಮಲದಂತೆ ಅರಳಿತು.**

**ಅಲಂಕಾರ** :–ಉಪಮಾಲಂಕಾರ.

ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ** :– ಸೀತೆಯ ಮುಖ

**ಉಪಮಾನ** :–ಕಮಲ

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಅರಳುವುದು

**ಸಮನ್ವಯ** :–ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು, ಉಪಮಾನವಾದ ಕಮಲಕ್ಕೆ ಹೋಲಿಸಿ ವರ್ಣಿಸಲಾಗಿದೆ.

*****

**"ಒಳಗಿನ ಮಂದಿ ಗುಂಡು ಹೊಡಿಸಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"**

**ಅಲಂಕಾರ** :– ಉಪಮಾಲಂಕಾರ

ಲಕ್ಷಣ :–ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ** :–ಒಳಗಿನ ಮಂದಿ ಗುಂಡು ಹೊಡೆಯುವುದು

**ಉಪಮಾನ** :–ಮುಂಗಾರಿನಲ್ಲಿ ಸಿಡಿಲು ಸಿಡಿಯುವುದು

**ಉಪಮಾ ವಾಚಕ** :–ಹಾಂಗ

**ಸಮಾನ ಧರ್ಮ** :– ಹೊಡೆಯುವುದು.

**ಸಮನ್ವಯ** :–ಇಲ್ಲಿ ಉಪಮೇಯವಾದಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಮುಂಗಾರಿನಲ್ಲಿ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**ಆ. "ಸಿಡಿಲು ಸಿಡಿದ್ಹಾಂಗ ಗುಂಡು ಸುರಿದಾವ"**

**ಅಲಂಕಾರ** **:– ಉಪಮಾಲಂಕಾರ**

ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ** :–ಗುಂಡು ಸುರಿಯುವುದು

**ಉಪಮಾನ** :–ಸಿಡಿಲು ಸಿಡಿಯುವುದು

**ಉಪಮಾ ವಾಚಕ** :=ಹಾಂಗ

**ಸಮಾನ ಧರ್ಮ** :–ಸುರಿಯುವುದು

**ಸಮನ್ವಯ** :– **ಇಲ್ಲಿ ಉಪಮೇಯವಾದ** ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

.*****

## ರೂಪಕಾಲಂಕಾರ

ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'**.

**ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ**

**ಅಲಂಕಾರ** :– **ರೂಪಕಾಲಂಕಾರ**

**ಲಕ್ಷಣ** :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'**.

**ಉಪಮೇಯ** :– ಒಡಲಬೇಗೆ

**ಉಪಮಾನ** :– ಬೆಂಕಿಯುರಿ

**ಸಮನ್ವಯ** :– ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ಊಹಿಸಿರುವುದರಿಂದ ಇದು ರೂಪಕಾಲಂಕಾರ.

*****

ಉದಾ :–**ಸೀತೆಯ ಮುಖಕಮಲ ಅರಳಿತು.**

| | | |
|---|---|---|
| **ಅಲಂಕಾರ** | :– | **ರೂಪಕಾಲಂಕಾರ** |
| **ಲಕ್ಷಣ** | :– | ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'.** |
| **ಉಪಮೇಯ** | :– | ಸೀತೆಯ ಮುಖ |
| **ಉಪಮಾನ** | :– | ಕಮಲ |
| **ಸಮನ್ವಯ** | :– | ಇಲ್ಲಿ ಉಪಮೇಯವಾದ ಸೀತೆಯ ಮುಖಕ್ಕೂ ಉಪಮಾನವಾದ ಕಮಲಕ್ಕೂ ಯಾವುದೇ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿರುವುದರಿಂದ ಇದು ರೂಪಕಾಲಂಕಾರ. |

**"ಮಾರಿಗೌತಣವಾಯ್ತು ನಾಳಿನ ಭಾರತವು"**

| | | |
|---|---|---|
| **ಅಲಂಕಾರ** | :– | **ರೂಪಕಾಲಂಕಾರ** |
| **ಲಕ್ಷಣ** | :– | ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'.** |
| **ಉಪಮೇಯ** | :– | ನಾಳಿನ ಭಾರತ ಯುದ್ಧ |
| **ಉಪಮಾನ** | :– | ಮಾರಿಯ ಔತಣ |
| **ಸಮನ್ವಯ** | :– | ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ. |

*****

## ದೃಷ್ಟಾಂತಾಲಂಕಾರ

ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದನ್ನು **'ದೃಷ್ಟಾಂತಾಲಂಕಾರ.'**ಎನ್ನುವರು.

**ಉದಾ :–**

*** ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.**

| | | |
|---|---|---|
| ಅಲಂಕಾರ | : | ದೃಷ್ಟಾಂತಾಲಂಕಾರ |
| ಲಕ್ಷಣ | : | ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು**'ದೃಷ್ಟಾಂತಾಲಂಕಾರ'.** |
| ಉಪಮೇಯ | : | ಮಾತು ಬಲ್ಲವನಿಗೆ ಜಗಳವಿಲ್ಲ |
| ಉಪಮಾನ | : | ಊಟ ಬಲ್ಲವನಿಗೆ ರೋಗವಿಲ್ಲ |
| ಸಮನ್ವಯ | : | ಇಲ್ಲಿ ಉಪಮೇಯವಾದ **ಮಾತುಬಲ್ಲವನಿಗೆ ಜಗಳವಿಲ್ಲ** ಹಾಗೂ ಉಪಮಾನವಾದ **ಊಟ ಬಲ್ಲವನಿಗೆ ರೋಗವಿಲ್ಲ** ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ.ಆದ್ದರಿಂದ ಇದು ದೃಷ್ಟಾಂತಾಲಂಕಾರ. |

## ಉತ್ಪ್ರೇಕ್ಷಾಲಂಕಾರ

ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು **ಉತ್ಪ್ರೇಕ್ಷಾಲಂಕಾರ.**

*** ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.**

| | | |
|---|---|---|
| **ಅಲಂಕಾರ** | : | **ಉತ್ಪ್ರೇಕ್ಷಾಲಂಕಾರ** |
| **ಲಕ್ಷಣ** | : | ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು **ಉತ್ಪ್ರೇಕ್ಷಾಲಂಕಾರ.** |
| **ಉಪಮೇಯ** | : | ಅಚ್ಛೋದ ಸರೋವರ |
| **ಉಪಮಾನ** | : | ರನ್ನಗನ್ನಡಿ |
| **ಸಮನ್ವಯ** | : | ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ. |

*****

## ಶ್ಲೇಷಾಲಂಕಾರ

ಬೇರೆ ಬೇರೆ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆ ಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದನ್ನು **'ಶ್ಲೇಷಾಲಂಕಾರ'** ಎನ್ನುವರು.
ಒಂದು ಪದವು ಒಂದಕ್ಕಿಂತ ಹೆಚ್ಚು ಅರ್ಥಕೊಡುವಂತಿದ್ದರೆ ಅಂತಹ ಪದಕ್ಕೆ **'ಶ್ಲೇಷ ಪದ'** ಎನ್ನುವರು.ಇಂತಹ ಶ್ಲೇಷಾರ್ಥಗಳನ್ನು ನೀಡಬಲ್ಲ ಪದಗಳಿರುವ ಅಲಂಕಾರವನ್ನು**'ಶ್ಲೇಷಾಲಂಕಾರ'** ಎನ್ನುವರು.

**ಉದಾಹರಣೆ :–**
ಅತಿಶಯ ಪದಾರ್ಥ ನಿಕರ ।
ಪ್ರತೀತಿಯಂ ಪಡೆದ ಪಾದವಿನ್ಯಾಸಂ ಭೂ ॥
ನುತಮಾಗದಲ್ತೆನಿರ್ದೋ ।
ಷತೆಯಿಂದಲ್ಲದೆ ಸಮಂತು ಕವಿಗಂ ರವಿಗಂ ॥

ಅಲಂಕಾರ : ಶ್ಲೇಷಾಲಂಕಾರ
ಲಕ್ಷಣ : ಬೇರೆ ಬೇರೆ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆ ಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದು**'ಶ್ಲೇಷಾಲಂಕಾರ'**.

| ಪದ | ಕವಿಯ ಪರವಾಗಿ (ಉಪಮಾನ) | ರವಿಯ ಪರವಾಗಿ (ಉಪಮೇಯ) |
|---|---|---|
| ಪದಾರ್ಥ | ಪದದ ಅರ್ಥ (ಶಬ್ದಾರ್ಥ) | ವಸ್ತು |
| ಪಾದ | ಪದ್ಯದ ಸಾಲು | ಕಿರಣ |
| ನಿರ್ದೋಷತೆ | ದೋಷವಿಲ್ಲದಿರುವಿಕೆ | ಕತ್ತಲಿಲ್ಲದಿರುವಿಕೆ (ಹಗಲು) |

ಸಮನ್ವಯ : ಇಲ್ಲಿ ಕವಿ ಮತ್ತು ರವಿ ಒಂದೇ ಬಗೆಯ ಪದಗಳಿಂದ ವರ್ಣಿತರಾಗಿದ್ದಾರೆ.ಈ ವರ್ಣನೆಯಲ್ಲಿ ಪದಾರ್ಥ, ಪಾದ, ನಿರ್ದೋಷತೆ ಎಂಬ ಪದಗಳು ಶ್ಲೇಷಾರ್ಥದಿಂದ ಕೂಡಿವೆ. ಆದ್ದರಿಂದ ಇಲ್ಲಿ ಶ್ಲೇಷಾಲಂಕಾರವಿದೆ.

## ಅರ್ಥಾಂತರನ್ಯಾಸಾಲಂಕಾರ

ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ **ಅರ್ಥಾಂತರನ್ಯಾಸ ಅಲಂಕಾರ.**
**"ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"**

**ಅಲಂಕಾರ** : **ಅರ್ಥಾಂತರನ್ಯಾಸಾಲಂಕಾರ.**
**ಲಕ್ಷಣ** : ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ **ಅರ್ಥಾಂತರನ್ಯಾಸ ಅಲಂಕಾರ.**
ಉಪಮೇಯ (ವಿಶೇಷ ವಾಕ್ಯ) : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.
ಉಪಮಾನ ( ಸಾಮಾನ್ಯ ವಾಕ್ಯ) : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?
ಸಮನ್ವಯ : ಇಲ್ಲಿ ಉಪಮೇಯವಾದ "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು" ಎಂಬ ವಿಶೇಷವಾಕ್ಯವನ್ನು ಉಪಮಾನವಾದ "ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದುಲೆಕ್ಕವೇ?" ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಇದು ಅರ್ಥಾಂತರನ್ಯಾಲಂಕಾರ.

*****

**ಜಲನಿಧಿಜಲಮಂ ಜಲಭೃ ।**
**ತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿ ॥**
**ರ್ಮಲ ಸಲಿಲಂ ದೊರೆದುದು ಗಡ ।**
**ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ ॥**

| | | |
|---|---|---|
| **ಅಲಂಕಾರ** | : | **ಅರ್ಥಾಂತರನ್ಯಾಸಾಲಂಕಾರ.** |
| **ಲಕ್ಷಣ** | : | ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ **ಅರ್ಥಾಂತರನ್ಯಾಸ ಅಲಂಕಾರ.** |
| ಉಪಮೇಯ (ವಿಶೇಷ ವಾಕ್ಯ) | : | ಜಲನಿಧಿಜಲಮಂ ಜಲಭೃ ।<br>ತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿ ॥<br>ರ್ಮಲ ಸಲಿಲಂ ದೊರೆದುದು |
| ಉಪಮಾನ ( ಸಾಮಾನ್ಯ ವಾಕ್ಯ) | : | ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ. |
| ಸಮನ್ವಯ | : | ಇಲ್ಲಿ ಉಪಮೇಯವಾದ **"**ಜಲನಿಧಿಜಲಮಂ ಜಲಭೃತ್ಕುಲಕ್ಕೆ ನಲಿದಿತ್ತುದತ್ತಮಿತ್ತನದೀನಿರ್ಮಲ ಸಲಿಲಂ ದೊರೆದುದು**"** ಎಂಬ ವಿಶೇಷವಾಕ್ಯವನ್ನು ಉಪಮಾನವಾದ ನೆಲದೊಳ್ ಕೊಟ್ಟಂಗೆ ಬಡತನಂ ಬಂದಪುದೇ**"** ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ.ಆದ್ದರಿಂದ ಇದು ಅರ್ಥಾಂತರನ್ಯಾಸಾಲಂಕಾರ. |

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸರಿ ಉತ್ತರವನ್ನು ಆರಿಸಿ ಕ್ರಮಾಕ್ಷರದೊಡನೆ ಬರೆಯಿರಿ.**

1. ಅಭೇದ ಕಲ್ಪನೆ ಇರುವ ಅಲಂಕಾರ :
   (ಎ) ರೂಪಕ (ಬಿ) ಉಪಮಾ
   (ಸಿ) ದೃಷ್ಟಾಂತ (ಡಿ) ಶ್ಲೇಷೆ
2. **"**ನೀಚಂಗೆ ಮಾಡಿದ ಉಪಕಾರವು ಹಾವಿಗೆ ಹಾಲೆರದಂತೆ**"** ಈ ವಾಕ್ಯದಲ್ಲಿರುವ ಅಲಂಕಾರ :
   (ಎ) ಉಪಮಾ (ಬಿ) ರೂಪಕ
   (ಸಿ) ದೃಷ್ಟಾಂತ (ಡಿ) ಯಮಕ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧಹೊಂದುವ ಪದಗಳನ್ನು ಬರೆಯಿರಿ**

1. ಹೋಲಿಕೆ : ಉಪಮಾ :: ಅಭೇದ ಕಲ್ಪನೆ : __________
2. ಬಿಂಬ ಪ್ರತಿಬಿಂಬ : ದೃಷ್ಟಾಂತ :: ನಾನಾರ್ಥ : __________

## ಛಂದಸ್ಸು

ಗುರು ಲಘು ಮೂರಿರೆ ಮ – ನ – ಗಣ

ಗುರು ಲಘು ಮೊದಲಲ್ಲಿ ಬರಲು ಭ – ಯ – ಗಣಮೆಂಬರ್

ಗುರು ಲಘು ನಡುವಿರೆ ಜ – ರ ಗಣ

ಗುರು ಲಘು ಕೊನೆಯಲ್ಲಿ ಬರಲು ಸ – ತ – ಗಣಮಕ್ಕುಂ

## ಯಮಾತಾರಾಜಭಾನಸಲಗಂ

| | | | |
|---|---|---|---|
| 1. ಯಗಣ | = | ಯಮಾತಾ | = ∪—— |
| 2. ಮಗಣ | = | ಮಾತಾರಾ | = ——— |
| 3. ತಗಣ | = | ತಾರಾಜ | = —— ∪ |
| 4. ರಗಣ | = | ರಾಜಭಾ | = — ∪— |
| 5. ಜಗಣ | = | ಜಭಾನ | = ∪— ∪ |
| 6. ಭಗಣ | = | ಭಾನಸ | = — ∪∪ |
| 7. ನಗಣ | = | ನಸಲ | = ∪∪∪ |
| 8. ಸಗಣ | = | ಸಲಗಂ | = ∪∪— |
| ಲ | = | ಲಘು | = ∪ |
| ಗಂ | = | ಗುರು | = — |

*****

## ವೃತ್ತಪದ್ಯಗಳ ಲಕ್ಷಣ

**ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲಮಾ**
**ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರು ದ್ವಂದ್ವಮಾ**
**ಗಿರೆ ಮತ್ತೇಭ ಲಘು ದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ**
**ಹರಿಣಾಕ್ಷೀ, ಲಘುನಾಲ್ಕು ಚಂಪಕಮಿವಾರುಂ ಖ್ಯಾತ ಕರ್ನಾಟಕಂ**

**1. ಗುರುವೊಂದಾದಿಯೊಳುತ್ಪಲಂ** = ( — ∪∪ )
ಮೊದಲನೆ ಅಕ್ಷರವು ಗುರುವಾಗಿದ್ದರೆ (ನಂತರದ ಎರಡು ಅಕ್ಷರಗಳು ಲಘುಗಳು) ಅದನ್ನು**'ಉತ್ಪಲಾಮಾಲಾ ವೃತ್ತ'** ಎನ್ನುವರು.

**2. ಗುರು ಮೊದಲ್ ಮೂರಾಗೆ ಶಾರ್ದೂಲಮ್** = ( ——— , ∪ ∪— )
ಮೊದಲ ಮೂರು ಅಕ್ಷರಗಳು ಗುರುವಾಗಿದ್ದರೆ (ನಂತರದ ಎರಡು ಅಕ್ಷರಗಳು ಲಘು) ಅದನ್ನು**'ಶಾರ್ದೂಲ ವಿಕ್ರೀಡಿತವೃತ್ತ'** ಎನ್ನುವರು.

**3. ಆ ಗುರುನಾಲ್ಕಾಗಿರಲಂತು ಸ್ರಗ್ಧರೆ** = ( ————, — ∪— )
ಮೊದಲ ನಾಲ್ಕು ಅಕ್ಷರಗಳು ಗುರುವಾಗಿದ್ದರೆ (ನಂತರದ ಅಕ್ಷರವು ಲಘು) ಅದನ್ನು 'ಸ್ರಗ್ಧರಾ ವೃತ್ತ' ಎನ್ನುವರು.

**4. ಲಘು ದ್ವಂದ್ವಂ ಗುರು ದ್ವಂದ್ವಮಾಗಿರೆ ಮತ್ತೇಭ** = ( ∪∪—, — ∪ ∪ )
ಮೊದಲ ಎರಡು ಅಕ್ಷರಗಳು ಲಘುವಾಗಿದ್ದು ಹಾಗೂ ಎರಡು ಅಕ್ಷರಗಳು ಗುರುವಾಗಿದ್ದರೆ (ಆನಂತರದ ಎರಡು ಅಕ್ಷರಗಳು ಲಘು) ಅದನ್ನು **'ಮತ್ತೇಭ ವಿಕ್ರೀಡಿತ ವೃತ್ತ'**ಎನ್ನುವರು.

**5. ಲಘು ದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ** = ( ∪∪—, —— ∪ )
ಮೊದಲ ಎರಡು ಅಕ್ಷರಗಳು ಲಘುವಾಗಿದ್ದು, ನಂತರದ ಮೂರು ಅಕ್ಷರಗಳು ಗುರುವಾಗಿದ್ದರೆ (ಆನಂತರದ ಅಕ್ಷರವು ಲಘು) ಅದನ್ನು **'ಮಹಾ ಸ್ರಗ್ಧರಾ ವೃತ್ತ'** ಎನ್ನುವರು.

**6. ಲಘುನಾಲ್ಕು ಚಂಪಕಮ್** = ( ∪∪∪, ∪— ∪ )
ಮೊದಲ ನಾಲ್ಕು ಅಕ್ಷರಗಳು ಲಘುವಾಗಿದ್ದರೆ (ನಂತರದ ಅಕ್ಷರ ಗುರು) ಅದನ್ನು **'ಚಂಪಕಮಾಲಾ ವೃತ್ತ'** ಎನ್ನುವರು.
**ಹರಿಣಾಕ್ಷಿ ಇವಾರು ಖ್ಯಾತ ಕರ್ನಾಟಕಂ** = ಹರಿಣಾಕ್ಷಿ ಈ ಆರು ವೃತ್ತಗಳನ್ನು **'ಖ್ಯಾತ ಕರ್ನಾಟಕ ವೃತ್ತಗಳು'** ಎನ್ನುವರು.

## ಮತ್ತೇಭ ವಿಕ್ರೀಡಿವೃತ್ತ

**ಸೂತ್ರ : ಸಭರಂನಂಮಯಲಂಗಮುಂ ಬಗೆಗೊಳಲ್ ಮತ್ತೇಭವಿಕ್ರೀಢಿತಂ**

**ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ**
**ಜ್ಜೆರೆಯೊಳ್**

| ಸ | ಭ | ರ | ನ | ಮ | ಯ | ಲ ಗು |
|---|---|---|---|---|---|---|
| ᴗᴗ— | — ᴗ ᴗ | — ᴗ— | ᴗᴗ ᴗ | ——— | ᴗ—— | ᴗ— |
| ಕೆರೆಯಂ | ಕಟ್ಟಿಸು | ಬಾವಿಯಂ | ಸವೆಸು | ದೇವಾಗಾ | ರಮಂ ಮಾ | ಡಿಸ |

ಜ್ಜೆರೆಯೊಳ್
ಈ ಮೇಲಿನ ಪದ್ಯವು ಅಕ್ಷರ ಗಣದ **'ಮತ್ತೇಭ ವಿಕ್ರೀಡಿತ ವೃತ್ತ'**ದಲ್ಲಿ ರಚಿತವಾಗಿದೆ

**ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ**

| ಸ | ಭ | ರ | ನ | ಮ | ಯ | ಲ ಗು |
|---|---|---|---|---|---|---|
| ᴗᴗ— | —ᴗ ᴗ | — ᴗ— | ᴗᴗ ᴗ | ——— | ᴗ—— | ᴗ— |
| ಎನಗಂ | ಪಾಂಡುಗ | ಮಿಲ್ಲಭೇ | ದಮಿಳೆ | ಯುಂಪಚ್ಚಾ | ಳ್ವಮಾಪಾಂ | ಡುನಂ |

ಈ ಮೇಲಿನ ಪದ್ಯವು ಅಕ್ಷರ ಗಣದ **'ಮತ್ತೇಭ ವಿಕ್ರೀಡಿತ ವೃತ್ತ'**ದಲ್ಲಿ ರಚಿತವಾಗಿದೆ.

## ಚಂಪಕ ಮಾಲಾ ವೃತ್ತ

**ಸೂತ್ರ : ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್**

**ಎನೆನಸುನಕ್ಕು ಮಾರರಿಪುವಾತನ ಧೈರ್ಯಮನಾತನೇಳ್ಗೆವೆತ್**

| ನ | ಜ | **ಭ** | ಜ | ಜ | ಜ | ರ |
|---|---|---|---|---|---|---|
| ᴗᴗᴗ | ᴗ— ᴗ | — ᴗᴗ | ᴗ— ᴗ | ᴗ— ᴗ | ᴗ— ᴗ | — ᴗ— |
| **ಎನೆನ** | **ಸುನಕ್ಕು** | **ಮಾರರಿ** | **ಪುವಾತ** | **ನ ಧೈರ್ಯ** | **ಮನಾತ** | **ನೇಳ್ಗೆವೆತ್** |

ಈ ಮೇಲಿನ ಪದ್ಯವು ಅಕ್ಷರ ಗಣದ **'ಚಂಪಕ ಮಾಲಾ ವೃತ್ತ'**ದಲ್ಲಿ ರಚಿತವಾಗಿದೆ.

**ಕುರುಕುಳನಂದನಂ ಪವನನಂದನನೆಂಬ ಮದಾಂಧ ಗಂಧಸಿಂ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ᴗᴗᴗ | ᴗ— ᴗ | — ᴗᴗ | ᴗ— ᴗ | ᴗ— ᴗ | ᴗ— ᴗ | — ᴗ— |
| ಕುರುಕು | ಳನಂದ | ನಂಪವ | ನನಂದ | ನನೆಂಬ | ಮದಾಂಧ | ಗಂಧಸಿಂ |

ಈ ಮೇಲಿನ ಪದ್ಯವು ಅಕ್ಷರ ಗಣದ **'ಚಂಪಕ ಮಾಲಾ ವೃತ್ತ'**ದಲ್ಲಿ ರಚಿತವಾಗಿದೆ.

## ಉತ್ಪಲಮಾಲಾ ವೃತ್ತ

ಸೂತ್ರ :– ಉತ್ಪಲಮಾಲೆಯಪ್ಪುದು ಭರಂನಭಭಂರಲಗಂ ನೆಗಳ್ದಿರಲ್

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗಳ್

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| — ᴗᴗ | — ᴗ— | ᴗ ᴗ ᴗ | — ᴗᴗ | — ᴗᴗ | — ᴗ— | ᴗ — |
| ಚಾಗದ | ಭೋಗದ | ಕ್ಕರದ | ಗೇಯದ | ಗೊಟ್ಟಿಯ | ಲಂಪಿನಿಂ | ಪುಗಳ್ |

ಈ ಮೇಲಿನ ಪದ್ಯವು ಅಕ್ಷರ ಗಣದ 'ಉತ್ಪಲಮಾಲಾ ವೃತ್ತ'ದಲ್ಲಿ ರಚಿತವಾಗಿದೆ.

ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| — ᴗᴗ | — ᴗ — | ᴗ ᴗ ᴗ | — ᴗᴗ | — ᴗᴗ | — ᴗ — | ᴗ — |
| ಮೇದಿನಿ | ಯಂಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

ಈ ಮೇಲಿನ ಪದ್ಯವು ಅಕ್ಷರ ಗಣದ 'ಉತ್ಪಲಮಾಲಾ ವೃತ್ತ'ದಲ್ಲಿ ರಚಿತವಾಗಿದೆ.

## ಸ್ರಗ್ಧರಾ ವೃತ್ತ

ಸೂತ್ರ :– ತೋರಲ್ ಮಂರಂಭನಂ ಮೂಯಗಣಮುಮದೆ ತಾಂ ಸ್ರಗ್ಧರಾವೃತ್ತಮಕ್ಕುಂ

ಉದಾ : ಸೂಳೈಸೆಚ್ಚೆಚ್ಚು ಬಿಲ್ಲಂ ರಥದ ಕುದುರೆಯಂ ಸೂತನಂ ಖಂಡಿಸುತ್ತಾ

| ಮ | ರ | ಭ | ನ | ಯ | ಯ | ಯ |
|---|---|---|---|---|---|---|
| ——— | — ᴗ— | — ᴗ ᴗ | ᴗ ᴗ ᴗ | ᴗ—— | ᴗ—— | ᴗ—— |
| ಸೂಳೈಸೆ | ಚ್ಚೆಚ್ಚುಬಿ | ಲ್ಲಂರಥ | ದಕುದು | ರೆಯಂಸೂ | ತನಂಖಂ | ಡಿಸುತ್ತಾ |

ಈ ಮೇಲಿನ ಪದ್ಯವು ಅಕ್ಷರ ಗಣದ 'ಸ್ರಗ್ಧರಾ ವೃತ್ತ'ದಲ್ಲಿ ರಚಿತವಾಗಿದೆ.

## ಮಹಾಸ್ರಗ್ಧರಾ ವೃತ್ತ

ಸೂತ್ರ :– ಸತತಂ ನಂಸಂರರಂಗಂ ನೆರೆದೆಸೆಯೆ ಮಹಾಸ್ರಗ್ಧರಾವೃತ್ತಮಕ್ಕುಂ

ಉದಾ ; ಇದು ಚಕ್ರವ್ಯೂಹಮೀವ್ಯೂಹಮನೊಡೆವದಟಂ ಪಾರ್ಥನಂ ತಾತನುಂ ಗೆಂ

| ಸ | ತ | ತ | ನ | ಸ | ರ | ರ | ಗು |
|---|---|---|---|---|---|---|---|
| ᴗᴗ— | ——ᴗ | —— ᴗ | ᴗᴗᴗ | ᴗ ᴗ — | — ᴗ— | — ᴗ— | — |
| ಇದುಚ | ಕ್ರವ್ಯೂಹ | ಮೀವ್ಯೂಹ | ಮನೊಡೆ | ವದಟಂ | ಪಾರ್ಥನಂ | ತಾತನುಂ | ಗೆಂ |

ಈ ಮೇಲಿನ ಪದ್ಯವು ಅಕ್ಷರ ಗಣದ 'ಮಹಾಸ್ರಗ್ಧರಾ ವೃತ್ತ'ದಲ್ಲಿ ರಚಿತವಾಗಿದೆ.

## ಶಾರ್ದೂಲ ವಿಕ್ರೀಡಿತ ವೃತ್ತ

**ಸೂತ್ರ :– ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡಿತಂ**

**ಉದಾ : ಮಾತಂಗಾಸುರ ವೈರಿಯಲ್ಲಿ ಪಡೆದುಂ ಬಿಲ್ಲಂ ಧನುರ್ವಿದ್ಯೆ ಗಂ**

| ಮ | ಸ | ಜ | ಸ | ತ | ತ | ಗು |
|---|---|---|---|---|---|---|
| —— | ᴗ ᴗ— | ᴗ— ᴗ | ᴗ ᴗ — | —— ᴗ | —— ᴗ | — |
| ಮಾತಂಗಾ | ಸುರವೈ | ರಿಯಲ್ಲಿ | ಪಡೆದುಂ | ಬಿಲ್ಲಂಧ | ನುರ್ವಿದ್ಯೆ | ಗಂ |

**ಈ ಮೇಲಿನ ಪದ್ಯವು ಅಕ್ಷರ ಗಣದ 'ಶಾರ್ದೂಲ ವಿಕ್ರೀಡಿತ ವೃತ್ತ'ದಲ್ಲಿ ರಚಿತವಾಗಿದೆ.**

## ಮಾತ್ರಾಗಣದಲ್ಲಿ ರಚಿತವಾಗುವ ಪದ್ಯಗಳು
### ಭಾಮಿನಿ ಷಟ್ಪದಿ

ಭಾಮಿನಿ ಷಟ್ಪದಿಯ 1, 2, 4, 5 ನೇ ಪಾದಗಳಲ್ಲಿ ಮೂರು ಮತ್ತು ನಾಲ್ಕು ಮಾತ್ರೆಯ ಎರಡೆರಡು ಗಣಗಳು ಇರುತ್ತವೆ. ಅದೇ ರೀತಿ 3 ಮತ್ತು 6 ನೇ ಪಾದಗಳಲ್ಲಿ ಮೂರು ಮತ್ತು ನಾಲ್ಕು ಮಾತ್ರೆಯ ಮೂರು ಮೂರು ಗಣಗಳು ಹಾಗೂ ಕೊನೆಯಲ್ಲಿ ಒಂದು ಗುರುವು ಇರುತ್ತದೆ.ಪ್ರತಿ ಪದ್ಯದಲ್ಲೂ ಆದಿಪ್ರಾಸ ಇರುತ್ತದೆ.

| 3 | 4 | 3 | 4 |
|---|---|---|---|
| — ᴗ | — ᴗ ᴗ | — ᴗ | ᴗ ᴗ ᴗ ᴗ |
| ಮಕ್ಕ | ಳೈವರೊ | ಳಾನು | ಹಿರಿಯನು |

| 3 | 4 | 3 | 4 |
|---|---|---|---|
| — ᴗ | — ᴗ ᴗ | — ᴗ | —— |
| ತಕ್ಕ | ಮಾತೆಯ | ಮಾತು | ಸಂದೇ |

| 3 | 4 | 3 | 4 | 3 | 4 | ಗುರು |
|---|---|---|---|---|---|---|
| — ᴗ | ᴗ ᴗ — | ᴗ ᴗ ᴗ | ᴗ ᴗ — | ᴗ ᴗ ᴗ | ᴗ ᴗᴗ ᴗ | — |
| ಹಕ್ಕೆ | ನೆಲೆಯಿ | ಲ್ಲದುನಿ | ಲಲಿಧಾ | ರುಣಿಯ | ಬಯಸುವ | ರೆ |

| 3 | 4 | 3 | 4 |
|---|---|---|---|
| — ᴗ | —— | — ᴗ | ᴗ ᴗ ᴗ ᴗ |
| ತಕ್ಕು | ದೇದಾ | ತಾರ | ನರಸಿಯೊ |

| 3 | 4 | 3 | 4 |
|---|---|---|---|
| — ᴗ | ᴗ ᴗ ᴗ ᴗ | — ᴗ | — ᴗ ᴗ |
| ಳೊಕ್ಕ | ತನವಿರ | ಲಾರು | ಮೆಚ್ಚುವ |

| 3 | 4 | 3 | 4 | 3 | 4 | ಗುರು |
|---|---|---|---|---|---|---|
| — ᴗ | —— | — ᴗ | —ᴗ ᴗ | — ᴗ | ᴗ ᴗ — | — |
| ರಕ್ಕ | ಹೇಳೌ | ಹೇಸ | ಳೇಜಯ | ಲಕ್ಷ್ಮಿ | ತನಗೆಂ | ದ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ಭಾಮಿನಿ ಷಟ್ಪದಿ'**ಯಲ್ಲಿ ರಚಿತವಾಗಿದೆ.

| | | | |
|---|---|---|---|
| 3 | 4 | 3 | 4 |
| —∪ | —— | — ∪ | —— |
| ಏನು | ಹೇಳ್ಯೆ | ಕರ್ಣ | ಚಿತ್ತ |

| | | | |
|---|---|---|---|
| 3 | 4 | 3 | 4 |
| —∪ | — ∪ ∪ | ∪ ∪ ∪ | —— |
| ಗ್ಲಾನಿ | ಯಾವುದು | ಮನಕೆ | ಕುಂತೀ |

| | | | | | | |
|---|---|---|---|---|---|---|
| 3 | 4 | 3 | 4 | 3 | 4 | ಗುರು |
| —∪ | ∪ ∪∪ ∪ | — ∪ | — ∪∪ | —∪ | — ∪ ∪ | — |
| ಸೂನು | ಗಳಬೆಸೆ | ಕೈಸಿ | ಕೊಂಬುದು | ಸೇರ | ದೇನಿನ | ಗೆ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ಭಾಮಿನಿ ಷಟ್ಪದಿ'**ಯಲ್ಲಿ ರಚಿತವಾಗಿದೆ.

## ವಾರ್ಧಕ ಷಟ್ಪದಿ

ವಾರ್ಧಕ ಷಟ್ಪದಿಯ 1, 2, 4, 5 ನೇ ಪಾದಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು ಇರುತ್ತವೆ. ಅದೇ ರೀತಿ 3 ಮತ್ತು 6 ನೇ ಪಾದಗಳಲ್ಲಿ ಐದು ಮಾತ್ರೆಯ ಆರು ಗಣಗಳು ಹಾಗೂ ಕೊನೆಯಲ್ಲಿ ಒಂದು ಗುರುವು ಇರುತ್ತದೆ. ಪ್ರತಿ ಪದ್ಯದಲ್ಲೂ ಆದಿಪ್ರಾಸ ಇರುತ್ತದೆ.

| | | | |
|---|---|---|---|
| 5 | 5 | 5 | 5 |
| ∪∪∪ ∪∪ | —∪∪ ∪ | ∪∪∪ — | ∪∪∪ ∪∪ |
| ಸತಿಮಡಿಸಿ | ನೀಡುವೆಲೆ | ವಿಡಿದಕ್ಕೈ | ಬಸವಳಿದು |

| | | | |
|---|---|---|---|
| 5 | 5 | 5 | 5 |
| ∪∪ —∪ | ∪ ∪ ∪ ∪ ∪ | ∪ ∪ — ∪ | ∪∪∪ — |
| ದತಿಚಿಂತೆ | ಯೊಳುಮರೆದ | ತನುಜೊಮ್ಮು | ವಿಡಿದಪು |

| | | | | | | |
|---|---|---|---|---|---|---|
| 5 | 5 | 5 | 5 | 5 | 5 | ಗು |
| ∪∪ —∪ | — ∪ — | — ∪ — | ∪∪∪ ∪∪ | —— ∪ | — ∪∪∪ | — |
| ರ್ಬತಿಭಾರ | ವಾಗಿಕ | ಣ್ಮಚ್ಚಿತೋಳ್ | ತೊಡೆಮಿಡುಕೆ | ಸುಯ್ಸೂಸೆ | ನಿದ್ರೆಕವಿ | ದು |

| | | | |
|---|---|---|---|
| 5 | 5 | 5 | 5 |
| ∪∪∪ ∪∪ | — ∪ ∪ ∪ | — ∪ — | —— ∪ |
| ವಿತತಸುಖ | ದಿಂದಿರುತಿ | ರಲ್ಕೆನಾ | ನಾದುಃಖ |

| | | | |
|---|---|---|---|
| 5 | 5 | 5 | 5 |
| ∪∪ —∪ | —∪∪ ∪ | —— ∪ | — ∪ — |
| ಯುತವಪ್ಪು | ದೊಂದುಕನ | ಸಂಕಂಡು | ನೊಂದುಭೂ |

| | | | | | | |
|---|---|---|---|---|---|---|
| 5 | 5 | 5 | 5 | 5 | 5 | ಗು |
| ∪∪∪ ∪∪ | — ∪ — | ∪∪ —∪ | — ∪∪∪ | — ∪∪ ∪ | —— ∪ | — |
| ಪತಿಬೆದರಿ | ದಂತೆಭೋಂ | ಕೆನಲೆದ್ದು | ಬೆಬ್ಬೆಳಿಸಿ | ನಾಲ್ದೆಸೆಯ | ನಾರಯ್ದ | ನು |

ಈ ಮೇಲಿನ ಪದ್ಯವು ಮಾತ್ರಾ ಗಣದ **'ವಾರ್ಧಕ ಷಟ್ಪದಿ'**ಯಲ್ಲಿ ರಚಿತವಾಗಿದೆ.

| | | | |
|---|---|---|---|
| 5 | 5 | 5 | 5 |
| —u— | ——u | uuuuu | — u — |
| ಊರ್ವಿಯೊಳ್ | ಕೌಸಲ್ಯೆ | ಪಡೆದಕುವ | ರಂ ರಾಮ |

| | | | |
|---|---|---|---|
| 5 | 5 | 5 | 5 |
| — u— | — u — | uu—u | uuuuu |
| ನೊರ್ವನೇ | ವೀರನಾ | ತನಯಜ್ಞ | ತುರಗಮಿದು |

| | | | | | | |
|---|---|---|---|---|---|---|
| 5 | 5 | 5 | 5 | 5 | 5 | ಗು |
| — uuu | — u — | — u — | uuu— | —u— | u u u — | — |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನವನೋ | ದಿ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ವಾರ್ಧಕ ಷಟ್ಪದಿ'**ಯಲ್ಲಿ ರಚಿತವಾಗಿದೆ.

## ಕಂದ ಪದ್ಯ

ಕಂದ ಪದ್ಯವು ನಾಲ್ಕು ಸಾಲಿನ ಪದ್ಯ.ಒಂದನೆಯ ಮತ್ತು ಮೂರನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಮೂರು ಗಣಗಳಿಂದ ಕೂಡಿರುತ್ತದೆ.ಎರಡನೆಯ ಮತ್ತು ನಾಲ್ಕನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಐದು ಗಣಗಳಿಂದ ಕೂಡಿರುತ್ತದೆ. ವಿಷಮ ಗಣ ಸ್ಥಾನದಲ್ಲಿ ಮಧ್ಯ ಗುರುವಿನ ಗಣ ಬರುವುದಿಲ್ಲ. ಆರನೆಯ ಮತ್ತು ಹದಿನಾಲ್ಕನೆಯ ಗಣಗಳು ಸರ್ವಲಘುಗಳ ಗಣ ಅಥವಾ ಮಧ್ಯ ಗುರುವಿನ ಗಣವಾಗಿರುತ್ತದೆ. ಆದಿ ಪ್ರಾಸವು ಇರುತ್ತದೆ.ಕಂದಪದ್ಯದಲ್ಲಿ ಒಟ್ಟು 16 ಗಣಗಳು, 64 ಮಾತ್ರೆಗಳು ಇರುತ್ತದೆ.

ಉದಾಹರಣೆ :– ಒಡೆಯಲಜಾಂಡಂ ಕುಲಗಿರಿ
ಕೆಡೆಯಲ್ ಪಿಳಿಯಲ್ಕೆ ಧಾತ್ರಿ ದಿವಿಜರ್ ನಡುಗ
ಲ್ಕೊಡರಿಸುವಿನಂ ಜಟಾಸುರ
ಹಿಡಿಂಬ ಬಕವೈರಿ ಸಿಂಹನಾದಂ ಗೆಯ್ದಂ

| | | |
|---|---|---|
| 4 | 4 | 4 |
| uu— | —— | uuuu |
| ಒಡೆಯಲ್ | ಜಾಂಡಂ | ಕುಲಗಿರಿ |

| | | | | |
|---|---|---|---|---|
| 4 | 4 | 4 | 4 | 4 |
| uu— | uu— | u— u | uu— | uu — |
| ಕೆಡೆಯಲ್ | ಪಿಳಿಯ | ಲ್ಕೆ ಧಾತ್ರಿ | ದಿವಿಜರ್ | ನಡುಗ |

| | | |
|---|---|---|
| 4 | 4 | 4 |
| uuuu | u— u | — uu |
| ಲ್ಕೊಡರಿಸು | ವಿನಂಜ | ಟಾಸುರ |

| | | | | |
|---|---|---|---|---|
| 4 | 4 | 4 | 4 | 4 |
| u— u | uu — | u— u | —— | —— |
| ಹಿಡಿಂಬ | ಬಕವೈ | ರಿ ಸಿಂಹ | ನಾದಂ | ಗೆಯ್ದಂ |

**ಈ ಮೇಲಿನ ಪದ್ಯವು ಮಾತ್ರಾಗಣದ ಕಂದಪದ್ಯದಲ್ಲಿ ರಚಿತವಾಗಿದೆ.**

**ಅತಿಕುಟಿಲಮನಂ ಧನಲು**
**ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ**

| 4 | 4 | 4 |
|---|---|---|
| ᑌᑌᑌᑌ | ᑌᑌ— | ᑌᑌ— |
| ಅತಿಕುಟಿ | ಲಮನಂ | ಧನಲು |

| 4 | 4 | 4 | 4 | 4 |
|---|---|---|---|---|
| ᑌᑌ— | —— | ᑌ— ᑌ | ᑌᑌ— | ᑌᑌ — |
| ಬ್ಧತೆಯಿಂ | ದಂ ದು | ಷ್ಟಬುದ್ಧಿ | ನುಡಿದಂ | ಪುಸಿಯಂ |

**ಈ ಮೇಲಿನ ಪದ್ಯವು ಮಾತ್ರಾಗಣದ ಕಂದಪದ್ಯದಲ್ಲಿ ರಚಿತವಾಗಿದೆ.**

*****

**ಕೊಟ್ಟಿರುವ ಪ್ರಶ್ನೆಗಳಿಗೆ ನೀಡಲಾಗಿರುವ ಆಯ್ಕೆಗಳಲ್ಲಿ ಸೂಕ್ತ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಡನೆ ಬರೆಯಿರಿ.**

1. ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸುವ ಅಕ್ಷರ
   (ಎ) ಲಘು (ಬಿ) ಗುರು
   (ಸಿ) ಪ್ಲುತ (ಡಿ) ಕಂಪಿತ
2. ಅಕ್ಷರ ಛಂದಸ್ಸಿನಲ್ಲಿರುವ (ವೃತ್ತ) ಗಣಗಳ ಸಂಖ್ಯೆ
   (ಎ) 8 (ಬಿ) 6
   (ಸಿ) 10 (ಡಿ) 21
3. 'ಎನಗಂ' ಪದದಲ್ಲಿ ಏರ್ಪಟ್ಟಿರುವ ಗಣ
   (ಎ) ಭಗಣ (ಬಿ) ಜಗಣ
   (ಸಿ) ಸಗಣ (ಡಿ) ರಗಣ

**ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದಗಳನ್ನು ಬರೆಯಿರಿ.**

1. ಪಗೆಯ : ನಗಣ :: ಸಾಲದೆ : ____________
2. ಕಂದಪದ್ಯ : 64 ಮಾತ್ರೆ :: ಭಾಮಿನಿಷಟ್ಪದಿ : __________
3. ಚಂಪಕಮಾಲ : 21 ಅಕ್ಷರಗಳು :: ಉತ್ಪಲಮಾಲ : ______________

# ಪತ್ರ ಲೇಖನ

**ಮಾದರಿ ವ್ಯಾವಹಾರಿಕ ಪತ್ರ**

ಇಂದ,

ಇವರಿಗೆ,

ಮಾನ್ಯರೇ,

ವಿಷಯ :

ವಂದನೆಗಳೊಡನೆ

ಸ್ಥಳ :

ತಮ್ಮ ನಂಬುಗೆಯ

ದಿನಾಂಕ :

<u>ಪತ್ರಲೇಖನ</u>

**1. ನಿಮ್ಮ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಕೋರಿ ನಿಮ್ಮ ಮುಖ್ಯಶಿಕ್ಷಕರಿಗೆ ಮನವಿ ಪತ್ರ ಬರೆಯಿರಿ.**

ಇಂದ

ಥವನೀಶ
s/oಶ್ರೀ ಗಿರೀಶ
ಬೆಟ್ಟದಪುರ
ಪಿರಿಯಾಪಟ್ಟಣ ತಾಲ್ಲೋಕ್
ಮೈಸೂರು ಜಿಲ್ಲೆ

ಇವರಿಗೆ

ಮಾನ್ಯ ಮುಖ್ಯ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ
ಬೆಟ್ಟದಪುರ
ಪಿರಿಯಾಪಟ್ಟಣ ತಾಲ್ಲೋಕ್
ಮೈಸೂರು ಜಿಲ್ಲೆ

ಮಾನ್ಯರೇ

ವಿಷಯ : ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಕೋರಿ ಮನವಿ.

ನಾನು ನಿಮ್ಮ ಶಾಲೆಯಲ್ಲಿ 2011–12 ನೇ ಸಾಲಿನಲ್ಲಿ 8 ನೇ ತರಗತಿಗೆ ದಾಖಲಾಗಿ ವ್ಯಾಸಂಗ ಮಾಡಿ 2013–14 ನೇ ಸಾಲಿನಲ್ಲಿ 10 ನೇ ತರಗತಿಯಲ್ಲಿ ತೇರ್ಗಡೆಯಾಗಿರುತ್ತೇನೆ. ನನ್ನ ಮುಂದಿನ ವಿದ್ಯಾಭ್ಯಾಸವನ್ನು ಮುಂದುವರಿಸಲು ನನಗೆ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳ ಆವಶ್ಯಕತೆ ಇರುತ್ತದೆ.ಆದ್ದರಿಂದ ದಯವಿಟ್ಟು ನನ್ನ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಗಳನ್ನು ಕೊಡುವಂತೆ ಸವಿನಯದಿಂದ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ.

ಸ್ಥಳ : ಬೆಟ್ಟದಪುರ
ದಿನಾಂಕ : 05–06–2014

ತಮ್ಮ ನಂಬುಗೆಯ
ಥವನೀಶ

**2. ನೀವು ಬೆಂಗಳೂರಿನ ವಿವೇಕಾನಂದ ಪ್ರೌಢಶಾಲೆಯ ವಿದ್ಯಾರ್ಥಿ ಸುರೇಶ / ಸುರೇಖಾ ಎಂದು ಭಾವಿಸಿ, ನಿಮ್ಮ ಬಡಾವಣೆಯ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಆಗಿರುವ ತೊಂದರೆಯನ್ನು ಕುರಿತು ಬೆಸ್ಕಾಂ ಮಂಡಳಿ ಅಧ್ಯಕ್ಷರಿಗೆ ಮನವಿ ಪತ್ರ ಬರೆಯಿರಿ.**

ಇಂದ

ಸುರೇಶ<br>
10 ನೇ ತರಗತಿ<br>
ವಿವೇಕಾನಂದ ಪ್ರೌಢಶಾಲೆ<br>
ಬೆಂಗಳೂರು

ಇವರಿಗೆ

ಮಾನ್ಯ ಅಧ್ಯಕ್ಷರು<br>
ಬೆಸ್ಕಾಂ ಮಂಡಳಿ<br>
ಬೆಂಗಳೂರು

ಮಾನ್ಯರೇ

ವಿಷಯ : ನಂದಿನಿ ಬಡಾವಣೆಯ ವಿದ್ಯುಚ್ಛಕ್ತಿ ಸರಬರಾಜಿನಲ್ಲಿಆಗಿರುವ ತೊಂದರೆಯನ್ನು ಸರಿಪಡಿಸುವಂತೆ ಕೋರಿ ಮನವಿ.

ನಮ್ಮ ನಂದಿನಿ ಬಡಾವಣೆಯ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಪದೇಪದೇ ಅಡಚಣೆ ಉಂಟಾಗುತ್ತಿದೆ.ಇದರಿಂದ ಮನೆ ಕೆಲಸಕಾರ್ಯಗಳನ್ನು ಮಾಡಲು ನಮಗೆ ತುಂಬ ತೊಂದರೆಯಾಗುತ್ತಿದೆ.ಈಗ ಪರೀಕ್ಷಾ ಸಮಯವಾದ್ದರಿಂದ ವ್ಯಾಸಂಗ ಮಾಡಲು ಸಹ ತುಂಬ ತೊಂದರೆಯಾಗುತ್ತಿದೆ.ಆದ್ದರಿಂದ ತಾವು ಈ ಬಗ್ಗೆ ಗಮನಹರಿಸಿ ನಮ್ಮ ಬಡಾವಣೆಯ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಉಂಟಾಗಿರುವ ತೊಂದರೆಯನ್ನು ಸರಿಪಡಿಸಿಕೊಡಬೇಕೆಂದು ಸವಿನಯದಿಂದ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ.

ಸ್ಥಳ : ಬೆಂಗಳೂರು<br>
ದಿನಾಂಕ : 05–06–2014

ತಮ್ಮ ನಂಬುಗೆಯ<br>
ಸುರೇಶ

**3. ನಿಮ್ಮ ಬಡಾವಣೆಯ ದಾರಿದೀಪ ಸರಿಪಡಿಸುವಂತೆ ಕೋರಿ ನಗರಸಭೆ ಅಧ್ಯಕ್ಷರಿಗೊಂದು ಪತ್ರ ಬರೆಯಿರಿ.**

ಇಂದ

ಸಂಕಲ್ಪ
s/oಶ್ರೀಗಿರೀಶ
ಸಾರ್ವಜನಿಕ ಆಸ್ಪತ್ರೆ ಬಡಾವಣೆ
ಹೆಗ್ಗಡ ದೇವನ ಕೋಟೆ

ಇವರಿಗೆ

ಮಾನ್ಯ ಅಧ್ಯಕ್ಷರು
ನಗರ ಸಭೆ
ಹೆಗ್ಗಡ ದೇವನ ಕೋಟೆ

ಮಾನ್ಯರೇ

ವಿಷಯ : ಸಾರ್ವಜನಿಕ ಆಸ್ಪತ್ರೆ ಬಡಾವಣೆಯ ದಾರಿದೀಪ ಸರಿಪಡಿಸುವಂತೆ ಕೋರಿ ಮನವಿ.

ನಮ್ಮ ಸಾರ್ವಜನಿಕ ಆಸ್ಪತ್ರೆ ಬಡಾವಣೆಯ ದಾರಿದೀಪಗಳು ಸರಿಯಾಗಿ ಉರಿಯುತ್ತಿಲ್ಲ. ಇದರಿಂದಾಗಿ ಮಕ್ಕಳು, ವಯೋವೃದ್ಧರು ರಾತ್ರಿ ಸಮಯದಲ್ಲಿ ದಾರಿಯಲ್ಲಿ ಓಡಾಡಲು ತುಂಬ ತೊಂದರೆಯಾಗುತ್ತಿದೆ.ಇದೇ ಅವಕಾಶವನ್ನು ಬಳಸಿಕೊಂಡು ಕಳ್ಳರು ಕಳ್ಳತನ ಮಾಡಲು ಪ್ರಾರಂಭಿಸಿದ್ದಾರೆ.ಆದ್ದರಿಂದ ತಾವು ಈ ಬಗ್ಗೆ ಗಮನಹರಿಸಿ ನಮ್ಮ ಬಡಾವಣೆಯ ದಾರಿದೀಪಗಳನ್ನು ಸರಿಪಡಿಸಿ ಕೊಡಬೇಕೆಂದು ಸವಿನಯದಿಂದ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ.

ಸ್ಥಳ : ಹೆಗ್ಗಡ ದೇವನ ಕೋಟೆ
ದಿನಾಂಕ : 05–06–2014

ತಮ್ಮ ನಂಬುಗೆಯ
ಸಂಕಲ್ಪ

**4. ನಿಮ್ಮ ಗ್ರಾಮದಲ್ಲಿ ಒಂದು ಗ್ರಂಥಾಲಯ ಆರಂಭಿಸಿ ಕೊಡುವಂತೆ ನಿಮ್ಮ ಕ್ಷೇತ್ರದ ಶಾಸಕರಿಗೆ ಮನವಿ ಪತ್ರ ಬರೆಯಿರಿ.**

ಇಂದ

ಅಭಿಲಾಷ
D/o ಶ್ರೀಅರ್ಜುನ
ಕೇರ್ಗಳ್ಳಿ
ಮೈಸೂರು ತಾಲ್ಲೋಕ್
ಮೈಸೂರು ಜಿಲ್ಲೆ.

ಇವರಿಗೆ

ಮಾನ್ಯ ಶಾಸಕರು
ಚಾಮುಂಡೇಶ್ವರಿ ಕ್ಷೇತ್ರ
ಮೈಸೂರು ತಾಲ್ಲೋಕ್
ಮೈಸೂರು.

ಮಾನ್ಯರೇ

ವಿಷಯ : ಕೇರ್ಗಳ್ಳಿ ಗ್ರಾಮದಲ್ಲಿ ಗ್ರಂಥಾಲಯ ಆರಂಭಿಸುವಂತೆ ಕೋರಿ ಮನವಿ

ನಮ್ಮ ಕೇರ್ಗಳ್ಳಿ ಗ್ರಾಮದಲ್ಲಿ ಸುಮಾರು ನಾಲ್ಕು ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದೆ.ನಮ್ಮ ಗ್ರಾಮದ ಸುತ್ತಮುತ್ತ ಅನೇಕ ಸಣ್ಣಸಣ್ಣ ಗ್ರಾಮಗಳು ಇದ್ದು ಈ ಎಲ್ಲ ಗ್ರಾಮಗಳಿಗೆ ವ್ಯಾಪಾರ ವ್ಯವಹಾರಗಳಿಗೆ ನಮ್ಮೂರು ಕೇಂದ್ರಸ್ಥಾನವಾಗಿದೆ.ನಮ್ಮ ಗ್ರಾಮದಲ್ಲಿ ಪ್ರೌಢಶಾಲೆ ಸಹ ಇರುತ್ತದೆ.ನಮ್ಮಲ್ಲಿ ವಿದ್ಯಾವಂತರ ಸಂಖ್ಯೆಯು ಸಹ ಹೆಚ್ಚಾಗಿದೆ.ಆದರೆ ನಮ್ಮ ಗ್ರಾಮದಲ್ಲಿ ಒಂದು ಗ್ರಂಥಾಲಯ ಇಲ್ಲದಿರುವುದು ಒಂದು ಕೊರತೆಯಾಗಿದೆ.ಆದ್ದರಿಂದ ತಾವು ಈ ಬಗ್ಗೆ ಗಮನಹರಿಸಿ ನಮ್ಮ ಗ್ರಾಮದಲ್ಲಿ ಒಂದು ಗ್ರಂಥಾಲಯವನ್ನು ಆರಂಭಿಸುವಂತೆ ಸಂಬಂಧಪಟ್ಟ ಇಲಾಖೆಗೆ ಸೂಚನೆ ನೀಡಬೇಕೆಂದು ಸವಿನಯದಿಂದ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ.

ಸ್ಥಳ : ಕೇರ್ಗಳ್ಳಿ
ದಿನಾಂಕ : 05-06-2014

ತಮ್ಮ ನಂಬುಗೆಯ
ಅಭಿಲಾಷ

**5. ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಪರಿಹಾರ ದೊರಕಿಸಿ ಕೊಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.**

**ಇಂದ**

ಯಶಸ್
s/oಶ್ರೀ ಮಂಜುನಾಥ
ಮನೆ ಸಂಖ್ಯೆ 100
ಮೋಕ್ಷ ಮಾರ್ಗ
ಸಿದ್ಧಾರ್ಥ ಬಡಾವಣೆ
ಮೈಸೂರು

ಇವರಿಗೆ

ಮಾನ್ಯ ಜಿಲ್ಲಾಧಿಕಾರಿಗಳು
ಮೈಸೂರು ಜಿಲ್ಲೆ
ಮೈಸೂರು

ಮಾನ್ಯರೇ

ವಿಷಯ :ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಪರಿಹಾರ ದೊರಕಿಸಿ ಕೊಡುವಂತೆ ಕೋರಿ ಮನವಿ.

ಮೈಸೂರು ಜಿಲ್ಲೆ ಹೆಗ್ಗಡ ದೇವನ ಕೋಟೆ ತಾಲ್ಲೋಕಿನಲ್ಲಿ ಕಬಿನಿ ನದಿಯ ಪ್ರವಾಹದಿಂದ ಅನೇಕ ಗ್ರಾಮಗಳು ನೀರಿನಲ್ಲಿ ಮುಳುಗಡೆಯಾಗಿ ಜನರು ಸಂಕಷ್ಟಕ್ಕೆ ಈಡಾಗಿದ್ದಾರೆ. ಹೊಲಗದ್ದೆಗಳು ನೀರಿನಲ್ಲಿ ಮುಳುಗಡೆಯಾಗಿವೆ. ಇವರೆಲ್ಲರೂ ಮನೆಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಆದ್ದರಿಂದ ತಾವು ದಯವಿಟ್ಟು ಈ ಬಗ್ಗೆ ಗಮನಹರಿಸಿ ನೆರೆ ಹಾವಳಿಯಿಂದ ನೊಂದ ಸಂತ್ರಸ್ತರಿಗೆ ಸೂಕ್ತ ಪರಿಹಾರವನ್ನು ದೊರಕಿಸಿ ಕೊಡಬೇಕೆಂದು ಸವಿನಯದಿಂದ ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಬಹುಬೇಗ ಈಡೇರುವುದೆಂದು ನಂಬಿರುತ್ತೇನೆ.

ವಂದನೆಗಳೊಡನೆ

ಸ್ಥಳ : ಮೈಸೂರು
ದಿನಾಂಕ : 05–06–2014

ತಮ್ಮ ನಂಬುಗೆಯ
ಯಶಸ್

## ಲೇಖಕರ / ಕವಿಗಳ ಪರಿಚಯ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | ಶಬರಿ | ಪು. ತಿ. ನರಸಿಂಹಾಚಾರ್ | ಕ್ರಿ. ಶ. 1905 | ಮಂಡ್ಯ ಜಿಲ್ಲೆಯ ಮೇಲುಕೋಟೆ | ಶಬರಿ ಗೀತ ನಾಟಕ<br>ಶ್ರೀಹರಿ ಚರಿತೆ<br>ಹಂಸ ದಮಯಂತಿ | ಪಂಪ ಪ್ರಶಸ್ತಿ<br>ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 2 | ಅಮೆರಿಕಾದಲ್ಲಿ ಗೊರೂರು | ಗೊರೂರು ರಾಮಸ್ವಾಮಿ ಅಯ್ಯಂಗಾರ್ | ಕ್ರಿ. ಶ. 1904 | ಹಾಸನ ಜಿಲ್ಲೆಯ ಗೊರೂರು | ಅಮೆರಿಕಾದಲ್ಲಿ ಗೊರೂರು,<br>ಮೆರವಣಿಗೆ | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,<br>ಗೌರವ ಡಿ. ಲಿಟ್. |
| 3 | ಜೀವನದೃಷ್ಟಿ | ಡಾ. ವಿ. ಕೃ. ಗೋಕಾಕ್ 'ವಿನಾಯಕ' | ಕ್ರಿ. ಶ. 1909 | ಹಾವೇರಿ ಜಿಲ್ಲೆಯ ಸವಣೂರು | ಜೀವನಪಾಠಗಳು,<br>ಸಮುದ್ರಗೀತೆಗಳು,<br>ಭಾರತ ಸಿಂಧೂರಶ್ಮಿ | ಭಾರತೀಯ ಜ್ಞಾನಪೀಠ ಪ್ರಶಸ್ತಿ,<br>ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, |
| 4 | ಧರ್ಮದೃಷ್ಟಿ | | | | | |
| 5 | ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ | ಡಿ. ಎಸ್. ಜಯಪ್ಪಗೌಡ | ಕ್ರಿ. ಶ. 1947 | ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿ | ಸರ್. ಎಂ. ವಿಶ್ವೇಶ್ವರಯ್ಯ ಅವರ ಕಾರ್ಯಸಾಧನೆಗಳು,<br>ಕರ್ನಾಟಕದ ಕಡಲಾಚೆಯ ಸಂಪರ್ಕಗಳು<br>ಮೈಸೂರು ಒಡೆಯರು | ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,<br>ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನ |
| 6 | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ಕ್ರಿ. ಶ. 1949 | ಮೈಸೂರು ಜಿಲ್ಲೆಯ ದೇವನೂರು | ಎದೆಗೆ ಬಿದ್ದ ಅಕ್ಷರ,<br>ಕುಸುಮ ಬಾಲೆ,<br>ದ್ಯಾವನೂರು | ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |
| 7 | ವೃಕ್ಷಸಾಕ್ಷಿ | ದುರ್ಗಸಿಂಹ | ಕ್ರಿ. ಶ. ಸು. 1031 | ಕಿಸುಕಾಡು ನಾಡಿನ ಸಯ್ಯಡಿ | ಕರ್ನಾಟಕ ಪಂಚತಂತ್ರಂ | |
| 8 | ವ್ಯಾಘ್ರಗೀತೆ | ಎ. ಎನ್. ಮೂರ್ತಿರಾವ್ | ಕ್ರಿ. ಶ. 1900 | ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳು | ಸಮಗ್ರ ಲಲಿತ ಪ್ರಬಂಧಗಳು | ಪಂಪ ಪ್ರಶಸ್ತಿ<br>ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ |

## ಲೇಖಕರ / ಕವಿಗಳ ಪರಿಚಯ ಪಟ್ಟಿ

| ಕ್ರ. ಸಂ. | ಪಾಠದ ಹೆಸರು | ಲೇಖಕರ / ಕವಿಗಳ ಹೆಸರು | ಕಾಲ | ಜನ್ಮಸ್ಥಳ | ಪ್ರಮುಖ ಕೃತಿಗಳು | ಪ್ರಶಸ್ತಿಗಳು / ಬಿರುದುಗಳು |
|---|---|---|---|---|---|---|
| 1 | ಎಮ್ಮ ನುಡಿಗೇಳ್ | ಆದಿಕವಿ ಪಂಪ | ಕ್ರಿ. ಶ. ಸು. 941 | ವೆಂಗಿಪಳು | ಆದಿಪುರಾಣ, ವಿಕ್ರಮಾರ್ಜುನ ವಿಜಯಂ | ಕವಿತಾ ಗುಣಾರ್ಣವ, ಸರಸ್ವತೀ ಮಣೀಹಾರ, ಸಂಸಾರಸಾರೋದಯ |
| 2 | ಹಕ್ಕಿ ಹಾರುತಿದೆ ನೋಡಿದಿರಾ | ದ. ರಾ. ಬೇಂದ್ರೆ 'ಅಂಬಿಕಾತನಯದತ್ತಾ' | ಕ್ರಿ. ಶ. 1896 | ಧಾರವಾಡ | ಗರಿ, ನಾಕುತಂತಿ, ನಾದಲೀಲೆ | ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ/ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. |
| 3 | ಹಲಗಲಿಯ ಬೇಡರು | | | | | |
| 4 | ವಚನ ಸೌರಭ | ಜೇಡರ ದಾಸಿಮಯ್ಯ 'ರಾಮನಾಥ' | ಕ್ರಿ. ಶ. ಸು. 1150 | ಯಾದಗಿರಿ ಜಿಲ್ಲೆಯ ಮುದೇನೂರು | ವಚನಗಳು | |
| | | ಬಸವಣ್ಣ 'ಕೂಡಲ ಸಂಗಮದೇವ' | ಕ್ರಿ. ಶ. ಸು. 1260 | ಬಿಜಾಪುರ ಜಿಲ್ಲೆಯ ಬಾಗೇವಾಡಿ | ವಚನಗಳು | |
| 5 | ಸಂಕಲ್ಪಗೀತೆ | ಡಾ. ಜಿ. ಎಸ್. ಶಿವರುದ್ರಪ್ಪ | ಕ್ರಿ. ಶ. 1926 | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ | ಎದೆ ತುಂಬಿ ಹಾಡಿದೆನು, ಸಾಮಗಾನ, ಚೆಲುವು | ರಾಷ್ಟ್ರಕವಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ. |
| 6 | ಕೌರವೇಂದ್ರನ ಕೊಂದೆ ನೀನು | ಗದುಗಿನ ನಾರಣಪ್ಪ 'ಕುಮಾರ ವ್ಯಾಸ' | ಕ್ರಿ. ಶ. ಸು. 1430 | ಗದಗ ಪ್ರಾಂತ್ಯದ ಕೋಳಿವಾಡ | ಕರ್ಣಾಟ ಭಾರತ ಕಥಾಮಂಜರಿ | ರೂಪಕ ಸಾಮ್ರಾಜ್ಯ ಚಕ್ರವರ್ತಿ |
| 7 | ವೀರಲವ | ಲಕ್ಷ್ಮೀಶ | ಕ್ರಿ. ಶ. ಸು. 1550 | ಚಿಕ್ಕಮಗಳೂರು ಜಿಲ್ಲೆಯ ದೇವನೂರು | ಜೈಮಿನಿ ಭಾರತ | ಉಪಮಾಲೋಲ, ಕರ್ನಾಟ ಕವಿ ಚೂತವನ ಚೈತ್ರ |
| 8 | ಸಂಕಟಕೆ ಗಡಿ ಇಲ್ಲ | ದು. ಸರಸ್ವತಿ | ಕ್ರಿ. ಶ. 1963 | ಬೆಂಗಳೂರು | ಹೆಣಿದರೆ ಜೇಡನಂತೆ, ಜೀವ ಸಂಪಿಗೆ | |